ರಂಜನೆ ಬೋಧನೆ ಪ್ರಬೋಧನೆ

ಗೌರಿ ಲಂಕೇಶ್

ಜನವರಿ 9 2008 ರೂ. 10/-

ಪ್ರೇಮ್-ಮುತಾಲಿಕ್ ಜಂಟಿ ದೊಂಬರಾಟ



ಹುಚ್ಚರಿಗೆ ಮಾತ್ರ

ಕೋತಿ ಏಕೆ ಮರದ ಮೇಲಿದೆ!

ನಿಮ್ಮ ಶಾಸಕರು ಕಡಿದಿದ್ದೇನು?

ಶಹಾಪುರ, ಅಂಕೋಲಾ ಕಾರವಾರ, ಧಾರವಾಡ

ಕುಂವಿ 'ಅರಮನೆ' ಹೇಗಿದೆ?



ಲಂಡನ್‌ನಲ್ಲಿ ರಾಧಿಕಾಗೆ ಮಗು?

ಗಿಡುಗಗಳಿಗೆ ಬಲಿಯಾದ ಗಿಳಿ

ಬೆನಜೀರ್



'ಬಾಬಾ-ದತ್ತ'ರೆಂಬ ಜನಶ್ರದ್ಧೆಗಳು ಮತ್ತು ಚಿಮೂರ "ಸಂಶೋಧನೆಗಳು"

ಚಾರ್ವಾಕ


- ಶಿವಸುಂದರ್-

ನಿವೃತ್ತ ಸಂಶೋಧಕರಾದ ಚಿದಾನಂದಮೂರ್ತಿಗಳು ಬಾಬಾಬುಡನ್‌ಗಿರಿಯ ಬಗ್ಗೆ ತಮ್ಮ ದುರಾಗ್ರಹಪೂರಿತ ವಿಚಾರಗಳನ್ನೇ ಸಂಶೋಧನೆಯೆಂದು ಪ್ರಕಟಪಡಿಸಿದ್ದಾರೆ. ಹಿರಿಯರಾದ ಅವರ ಸಂಶೋಧನೆಯು ಎಷ್ಟು ವಸ್ತುನಿಷ್ಠವಾಗಿದೆಯೆಂಬುದಕ್ಕೆ ಅವರು ಗಿರಿಯ ಸುತ್ತ ಮುಸ್ಲಿಮರು ನಿರ್ಮಿಸುತ್ತಿರುವ ರೆಸಾರ್ಟ್‌ಗಳು ನಾಳೆ ಮುಸ್ಲಿಮ್ ಉಗ್ರಗಾಮಿಗಳ ನೆಲೆಯಾಗಬಹುದೆಂದು ಎಚ್ಚರಿಸಿರುವುದೇ ಸಾಕ್ಷಿ. ಈ "ಸಂಶೋಧನೆಗೆ" ಅವರು ಬಳಸಿರುವ ಮೆಥಡಾಲಜಿ ಬಹಳ ಸರಳವಾದದ್ದು, ಮುಸ್ಲಿಮರೆಲ್ಲಾ ಉಗ್ರಗಾಮಿಗಳು ಆದ್ದರಿಂದ ಅವರು ಮಾಡುವ ರೆಸಾರ್ಟೆಲ್ಲಾ ಉಗ್ರಗಾಮಿಯ ನೆಲೆಗಳು. ದ್ವೇಷದ ನೆಲೆಯ ಪೂರ್ವಗ್ರಹಗಳು ಮತ್ತು ಅಭಿಪ್ರಾಯಗಳೇ ಸಂಶೋಧನೆಯಾಗುವುದಿಲ್ಲವೆಂದು ಈ ಹಿಂದೆ ಸಂಶೋಧನೆಯನ್ನು ವೃತ್ತಿ ಮಾಡಿಕೊಂಡಿದ್ದ ಚಿದಾನಂದಮೂರ್ತಿಗಳಿಗೆ ಗೊತ್ತಿಲ್ಲದ ವಿಷಯವೇನಲ್ಲ.

ವಾಸ್ತವವಾಗಿ ಬಾಬಾಬುಡನ್‌ಗಿರಿಯ ಬಗ್ಗೆ ಶ್ರೀಯುತರು ಮಾಡಿರುವ ಸಂಶೋಧನೆಯಲ್ಲಿ ಹೊಸದೇನೂ ಇಲ್ಲ. ಶ್ರೀಮಾನ್ ವಿಠಲ್‌ರಾವ್ ಅವರು ಇದೇ ಕುತರ್ಕಗಳನ್ನೇ 1990ರಿಂದಲೂ ಮಾಡುತ್ತಾ ಬಂದಿದ್ದಾರೆ. ಇದರ ಬಗ್ಗೆ ಕೂಲಂಕಷ ಅಧ್ಯಯನ ಮಾಡಲೆಂದೇ ಕೋಮುಸೌಹಾರ್ದ ವೇದಿಕೆಯು ಒಂದು ಅಧ್ಯಯನ ಸಮಿತಿಯನ್ನು ನೇಮಿಸಿತ್ತು. ಅದು ಒಂದು ವರ್ಷ ಕಾಲ ಶಾಸನಗಳು, ದಾಖಲೆಗಳು, ಪುರಾಣ, ಜಾನಪದ, ನ್ಯಾಯಾಲಯದ ದಾಖಲೆಗಳು ಎಲ್ಲದರ ಬಗ್ಗೆ ಕೂಲಂಕಷ ಅಧ್ಯಯನ ನಡೆಸಿ "ಬಾಬಾ ದತ್ತ ವಿವಾದದ ಸುತ್ತ-ಬೆಂಕಿಯಾಗಲೊಲ್ಲದ ಬೆಳಕು" ಎಂಬ ದಾಖಲೆ ಸಹಿತವಾಗಿರುವ ಪುಸ್ತಕವನ್ನು 2004ರಲ್ಲೇ ಪ್ರಕಟ ಮಾಡಿತ್ತು. ಅದನ್ನು 2004ರಲ್ಲೇ ಅವರಿಗೆ ವಿಧಾನಸೌಧದಲ್ಲಿ ಸರ್ಕಾರದ ಸಮ್ಮುಖದಲ್ಲಿ ಕೊಡಲಾಗಿತ್ತು. ಈಗ ಆ ಪುಸ್ತಕ ಹೊರಬಂದು ಮೂರು ವರ್ಷಗಳಾಗುತ್ತಾ ಬಂತು. ಆದರೆ ಈವರೆಗೆ ಅವರು ಆ ಪುಸ್ತಕದಲ್ಲಿ ವೇದಿಕೆ ಮುಂದಿಟ್ಟಿರುವ ವಾದಕ್ಕೆ ಪ್ರತಿಕ್ರಿಯೆ ನೀಡಿಲ್ಲ.

ಈಗಲೂ ಚಿದಾನಂದ ಮೂರ್ತಿಯವರು ಮಾಡಿರುವ ವಾದದಲ್ಲಿ ವಿಠಲ್ ರಾವ್ ಅವರು ಹತ್ತು ವರ್ಷದ ಹಿಂದೆ ಮಾಡುತ್ತಿದ್ದ ವಾದಕ್ಕೆ ಒಂದೇ ಒಂದು ಹೊಸ ವಾಕ್ಯವನ್ನು ಸೇರಿಸಿಲ್ಲ. ಅವರು ಮಾಡಿರುವ ಏಕೈಕ ಸಂಶೋಧನೆಯೆಂದರೆ ವಿಠಲ್ ರಾವ್ ಮತ್ತು ಮಂಜುನಾಥಸ್ವಾಮಿ ಎಂಬ ಇಬ್ಬರು ವಿಶ್ವಹಿಂದೂ ಪರಿಷತ್ ನಾಯಕರ ಜೊತೆಗೂಡಿ ಡಿಸೆಂಬರ್ 13ರಂದು ಗಿರಿಗೆ ಭೇಟಿ ನೀಡಿರುವುದು ಮಾತ್ರ. ಅಷ್ಟು ಮಾತ್ರವಲ್ಲದೆ ಅವರು ಆ ಭೇಟಿಯಲ್ಲಿ ಬಾಬಾಬುಡನ್‌ಗಿರಿಯು ದತ್ತಪೀಠವೇ ಎಂದು ತೀರ್ಮಾನಕ್ಕೆ ಬರಲು ಅತ್ಯದ್ಭುತವಾದ ಒಂದು ಐತಿಹಾಸಿಕ ದಾಖಲೆಯನ್ನು ಕಂಡುಹಿಡಿದಿದ್ದಾರೆ.

ಅದೇನೆಂದರೆ ಗಿರಿಗೆ ಹೋಗುವ ದಾರಿಯಲ್ಲಿರುವ ಮೈಲಿಗಲ್ಲುಗಳ ಮೇಲೆ ಬಾಬಾಬುಡನ್‌ಗಿರಿ ಎಂದಲ್ಲದೆ "ದತ್ತಪೀಠ" ಎಂದು ಬರೆದಿರುವುದು! ಪ್ರಾಯಶಃ ಪ್ರಾಗೈತಿಹಾಸಿಕ ಸಂಶೋಧಕರೆಲ್ಲಾ ಚಿಮೂರವರ ಮೆಥಡಾಲಜಿಯನ್ನೇ ಅನುಸರಿಸಿದರೆ ಬಹಳ ಬೇಗ ಸಂಶೋಧನೆಗಳನ್ನು ಮಾಡಿ ಮುಗಿಸಬಹುದು! ವಾಸ್ತವವಾಗಿ ಭಜರಂಗಿಗಳ ಆರ್ಭಟ ಜಾಸ್ತಿಯಾಗುವ ಮುನ್ನ ಮತ್ತು ಅವರ ಜೊತೆ ಚಿಕ್ಕಮಗಳೂರು ಜಿಲ್ಲಾಡಳಿತ ಕೈಗೂಡಿಸುವವರೆಗೆ ಅಲ್ಲಿನ ಮೈಲಿಗಲ್ಲುಗಳ ಮೇಲೆ ಬಾಬಾಬುಡನ್ ಗಿರಿ ಎಂದೇ ಇತ್ತು. ಅದನ್ನು ಚಡ್ಡಿಗಳು ಬದಲಾಯಿಸಿದ್ದು ಹತ್ತು ವರ್ಷಗಳ ಕೆಳಗೆ. ಅದು ಸನ್ಮಾನ್ಯ ಚಿಮೂಗಳಿಗೆ ಐತಿಹಾಸಿಕ ದಾಖಲೆ!




ಮೊಬೈಲ್ ಟೆಲಿಫೋನ್ ಪ್ರಾರಂಭವಾದ ಮೇಲೆ ಮತ್ತು ಇತ್ತೀಚೆಗೆ ಅಂದರೆ ಐದು ವರ್ಷದ ಕೆಳಗೆ ಜಿಎಸ್‌ಎಂ ತಂತ್ರಜ್ಞಾನದ ಮುಖಾಂತರ ಗ್ರಾಹಕರ ಮೊಬೈಲ್ ಇರುವ ಪ್ರದೇಶದ ಹೆಸರು ಸ್ಕ್ರೀನ್ ಮೇಲೆ ಕಾಣಿಸಿಕೊಳ್ಳುವ ತಂತ್ರಜ್ಞಾನ ಬಂತು. ಹೋದ ವರ್ಷದವರೆಗೆ ಅಲ್ಲಿಗೆ ಹೋದಾಗ ಮೊಬೈಲ್ ಸೆಟ್ ಮೇಲೆ ಬಾಬಾಬುಡನ್‌ಗಿರಿಯೆಂದೇ ಬರುತ್ತಿತ್ತು. ಹೋದ ವರ್ಷ ಚಿಕ್ಕಮಗಳೂರು ಬಿಜೆಪಿ ಶಾಸಕ ಕ್ಷಿಪ್ರ ಕಾರ್ಯಾಚರಣೆ ನಡೆಸಿ ಮೊಬೈಲ್ ಸೆಟ್ ಮೇಲೆ ದತ್ತ ಪೀಠ ಬರುವಂತೆ ಮಾಡಿದ್ದಾರೆ. ಬೇಕಿದ್ದರೆ ಚಿಮೂ ತಮ್ಮ ಪ್ರಕಾಂಡ ಸಂಶೋಧನೆಗೆ ಇದನ್ನು ಇಂದು ಪ್ರಾಗೈತಿಹಾಸಿಕ ಆಧಾರವೆಂದು ಬಳಸಿಕೊಳ್ಳಬಹುದು.

ವಾಸ್ತವವಾಗಿ ದೋಷವಿರುವುದು ಚಿದಾನಂದ ಮೂರ್ತಿಯವರ ಸಂಶೋಧನೆಯಲ್ಲಲ್ಲ, ಅವರು ಇತಿಹಾಸವನ್ನು ನೋಡುವ ಕ್ರಮವೇ ದೋಷಪೂರಿತವಾಗಿದೆ. ಅವರು ಹಿಂದೂ ಎಂದು ಕರೆಯುವುದು ಬ್ರಾಹ್ಮಣೀಯ ಮತ್ತು ವೈದಿಕ ಪದ್ಧತಿಗಳನ್ನು. ಇತಿಹಾಸದಲ್ಲಿ ಈ ಬ್ರಾಹ್ಮಣೀಯ ವೈದಿಕ ಆಳ್ವಿಕೆಯ ವಿರುದ್ಧ ಬಂಡೆದ್ದು ಹಲವಾರು ಪಂಥಗಳು ಹುಟ್ಟಿಬಂದವೆಂದು ಅವರು ಒಪ್ಪಿಕೊಳ್ಳುವುದಿಲ್ಲ. ಅವೆಲ್ಲವೂ ಹಿಂದೂ ಧರ್ಮದ ಕವಲುಗಳೆನ್ನುವುದು ಅವರ ಅಭಿಪ್ರಾಯ. ಹೀಗಾಗಿಯೇ ದತ್ತನಂತ ಅಬ್ರಾಹ್ಮಣ ಶ್ರದ್ಧೆಗಳನ್ನು ಅವರು ಹಿಂದೂ ಶ್ರದ್ಧೆಗಳೆಂದೇ ಕರೆಯುತ್ತಾರೆ.

ಅದೇರೀತಿ ಅವರ ಪ್ರಕಾರ ಇಸ್ಲಾಂ ಎಂಬುದು ಶತಮಾನಗಳಿಂದ ಏಕಪ್ರಕಾರವಾಗಿ ಯಾವುದೇ ಒಳ ವೈರುಧ್ಯಗಳಿಲ್ಲದೆ ಹರಿಯುತ್ತಿರುವ ಕರ್ಮಠ ಮತ್ತು ಜೀವವಿರೋಧಿ ಧರ್ಮ. ಆದರೆ ಇತರ ಬಂಡಾಯ ಧರ್ಮಗಳಲ್ಲಿ ಆದಂತೆ ಪ್ರಾರಂಭದಲ್ಲಿ ಜೀವಪರವಾಗಿದ್ದ ಇಸ್ಲಾಂಅನ್ನು ಸಹ ಒಂದು ವರ್ಗ ಸ್ಥಾವರಗೊಳಿಸಿ ಕರ್ಮಠಗೊಳಿಸಿತು. ಆಗ ಎಲ್ಲಾ ಧರ್ಮಗಳಲ್ಲಿ ನಡೆಯುವಂತೆ ಇಸ್ಲಾಮಿನೊಳಗೂ ಹಲವು ಬಂಡಾಯ ನಡೆದು ಹಲವು ಬಗೆಯ ಇಸ್ಲಾಮಿ ಪದ್ಧತಿಗಳು ಹುಟ್ಟಿಕೊಂಡಿವೆ. ಹಾಗೂ ಎಲ್ಲ ಧರ್ಮಗಳಲ್ಲಿ ಸಂಭವಿಸುವಂತೆ ಇಸ್ಲಾಮ್ ಸಹ ಕಾಲಕಾಲಕ್ಕೆ ಮರು ವ್ಯಾಖ್ಯಾನಕ್ಕೆ ಒಳಗಾಗುತ್ತಾ ಬಂದಿದೆ.

ಸೂಫಿ ಶ್ರದ್ಧೆ ಸ್ಥಾವರಗೊಂಡ ಇಸ್ಲಾಮನ್ನು ಮತ್ತೆ ಜಂಗಮಗೊಳಿಸಿ ಜೀವ ಪ್ರೇಮದ ಆಧಾರದಲ್ಲಿ ಜನರ ಬಳಿ ಕೊಂಡೊಯ್ದ ಇಸ್ಲಾಮಿನ ಭಿನ್ನ ಬಗೆ. ಭಾರತದಲ್ಲಿ ಬ್ರಾಹ್ಮಣ್ಯದ ವಿರುದ್ಧ ಧಾರ್ಮಿಕ ಮತ್ತು ಆಧ್ಯಾತ್ಮಿಕ ಬಂಡಾಯಗಳು ನಡೆದು ದತ್ತ, ನಾಥರಂಥ ಅವಧೂತ ಪರಂಪರೆಗಳು ದೇಶದಲ್ಲಿ ಹುಟ್ಟಿಕೊಳ್ಳುತ್ತಿದ್ದ ಕಾಲದಲ್ಲೇ ಮನುಷ್ಯ ಪ್ರೇಮದಲ್ಲೇ ದೈವತ್ವವನ್ನು ಕಾಣುತ್ತಿದ್ದ ಸೂಫೀ ಶ್ರದ್ಧೆ ಭಾರತವನ್ನು ಪ್ರವೇಶಿಸಿತು. ಈ ಸೂಫಿ ಮತ್ತು ಅವೈದಿಕ ದತ್ತ ಮತ್ತು ನಾಥರಂತ ಅವಧೂತ ಪರಂಪರೆಗಳು ಪರಸ್ಪರ ಮುಖಾಮುಖಿಯಾದಾಗ ಚಿಮೂ ಬಯಸುವಂತೆ ಆದದ್ದು ಸಂಘರ್ಷವಲ್ಲ.



ಅವೆರಡರ ಮುಖಾಮುಖಿ ಧರ್ಮ ಯುದ್ಧವನ್ನೂ ಸೃಷ್ಟಿಸಲಿಲ್ಲ, ಜೆಹಾದಿಗೂ ಕಾರಣವಾಗಲಿಲ್ಲ, ಬದಲಿಗೆ ಅವೆರಡು ಜನಪರ ಮತ್ತು ಜೀವಪರ ಶ್ರದ್ಧೆಗಳು ಪರಸ್ಪರ ಮಿಲನಗೊಂಡು ಹೊಸದೊಂದು ಜೀವಪ್ರೇಮಾಧಾರಿತ ಶ್ರದ್ಧೆ ವಿಕಸಿತಗೊಂಡಿತು.

ಹೀಗಾಗಿ ತಮ್ಮ ತಥಾಕಥಿತ ಒಂದು ದಿನದ ಸಂಶೋಧನೆಯಲ್ಲಿ ಚಿಮೂರವರ ಕಣ್ಣಿಗೆ ಬದ್ದಿರುವಂತೆ ಗಿರಿಯ ಮೇಲಿನ ಗುಹೆಯಲ್ಲಿ, ಅದರ ಶಿಲ್ಪದಲ್ಲಿ, ರೀತಿ-ರಿವಾಜುಗಳಲ್ಲಿ ಹಿಂದೂ-ಮುಸ್ಲಿಂ ಎರಡು ಸಂಪ್ರದಾಯ ಮತ್ತು ಸಂಸ್ಕೃತಿಗಳ ಸಮ್ಮಿಶ್ರಣವಿದೆ. ಎರಡು ನದಿಗಳ ಸಂಗಮವಿದೆ. ಆದರೆ ಚಿಮೂ ಅವರ ಕಣ್ಣಿಗೆ ಅದು ಹಿಂದೂ ಧರ್ಮದ ಮೇಲೆ ಇಸ್ಲಾಮಿನ ಆಕ್ರಮಣವೆಂದೇ ಕಾಣುತ್ತದೆ. ವಾಸ್ತವವಾಗಿ ಅಲ್ಲಿ ಇರುವುದು ಹಿಂದೂ ಪೂಜಾ ವಿಧಾನವೂ ಅಲ್ಲ, ಇಸ್ಲಾಮಿಕ್ ಪೂಜಾ ವಿಧಾನವೂ ಅಲ್ಲ, ಅದು ಸಂಕರ ಪೂಜಾ ವಿಧಾನ. ಸೂಫೀ ವಿಧಾನ.

ಎಲ್ಲಕ್ಕಿಂತ ಮುಖ್ಯವಾಗಿ ಹಿರಿಯ ಸಂಶೋಧಕರಾಗಿ ಖ್ಯಾತರಾಗಿದ್ದ ಮಾನ್ಯರು ನ್ಯಾಯಾಲಯಗಳ ತೀರ್ಪನ್ನು ಭಜರಂಗದಳದಂತೆ ತಿದ್ದಿ ವ್ಯಾಖ್ಯಾನ ನೀಡುತ್ತಿರುವುದು ಅವರ ಇತ್ತೀಚಿನ ಸಾಲುಸಾಲು ಸಂಶೋಧನೆಗಳ ಗುಣಮಟ್ಟವನ್ನಷ್ಟೇ ಸೂಚಿಸುತ್ತದೆ. ಈವರೆಗೆ ಬಂದಿರುವ ನ್ಯಾಯಾಲಯದ ಎಲ್ಲಾ ಆದೇಶಗಳು ಗಿರಿಯಲ್ಲಿ ಹಿಂದೂಗಳು ಮತ್ತು ಮುಸ್ಲಿಮರಿಬ್ಬರಿಗೂ ತನ್ನ ಶ್ರದ್ಧೆ ತೋರಲು ಸಮಾನ ಅವಕಾಶ ನೀಡಿದೆಯೇ ವಿನಃ ಎಲ್ಲಿಯೂ ಯಜ್ಞದಂತ ಬ್ರಾಹ್ಮಣೀಯ ಪೂಜಾ ವಿಧಾನಗಳಿಗೆ ಅವಕಾಶ ಕೊಟ್ಟಿಲ್ಲ. ಹಾಗೆಯೇ ಈವರೆಗೆ ಮುಸ್ಲಿಮರು ನ್ಯಾಯಾಲಯದಲ್ಲಿ ಹಾಕಿರುವ ಯಾವ ದಾವೆಯಲ್ಲೂ ಹಿಂದೂಗಳಿಗೆ ಶ್ರದ್ಧೆ ತೋರಲು ಅವಕಾಶವಿರಕೂಡದೆಂದು ಆಗ್ರಹಿಸಿಲ್ಲ.

ವಾಸ್ತವವಾಗಿ 1976ರಲ್ಲಿ ಗಿರಿಯ ಮೇಲಿನ ದರ್ಗಾವನ್ನು ವಕ್ಫ್ ಬೋರ್ಡಿನ ಸುಪರ್ದಿಗೆ ಸರ್ಕಾರ ನೀಡಿತು. ಮತ್ತು ಈ ಕ್ರಮವು ಹಿಂದೂಗಳ ಪ್ರವೇಶಕ್ಕೆ ಅಡ್ಡಿಯುಂಟು ಮಾಡಬಹುದೆಂದು ಕೆಲವು ಭಕ್ತರು ಚಿಕ್ಕಮಗಳೂರು ಕೋರ್ಟಿನ ಮೊರೆ ಹೋದರು. ಆಗ ಅದನ್ನು ವಕ್ಫ್ ಬೋರ್ಡಿಗೆ ನೀಡಬಾರದೆಂದು ಮತ್ತು ಮುಜರಾಯಿ ಇಲಾಖೆಗೆ ನೀಡಬೇಕೆಂದೂ ಹಿಂದೂ ಭಕ್ತರ ಪರವಾಗಿ ವಾದ ಮಾಡಿದವರು ಅಲ್ಲಿನ ಮುಸ್ಲಿಂ ಶಾಖಾದ್ರಿ.

ಅಷ್ಟು ಮಾತ್ರವಲ್ಲ, ಇದನ್ನು ಸ್ಪಷ್ಟವಾಗಿ ಗುರುತಿಸಿ ಎತ್ತಿಹಿಡಿದ ಕರ್ನಾಟಕದ ಉಚ್ಚ ನ್ಯಾಯಾಲಯ ಬಾಬಾಬುಡನ್ ಗಿರಿಯ ಸೌಹಾರ್ದ ಸಂಸ್ಕೃತಿಯ ಬಗ್ಗೆ ಈ ರೀತಿ ಉದ್ಗರಿಸಿದೆ:

"ಈ ಆದೇಶವನ್ನು ಪೂರ್ಣಗೊಳಿಸುವ ಮುನ್ನ ಈ ದರ್ಗಾ ಅಥವಾ ಪೀಠದಲ್ಲಿ ತಮ್ಮ ಪೂಜೆ ಸಲ್ಲಿಸುವ ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಇರುವ ಸೋದರ ವಾತ್ಸಲ್ಯದ ಬಗ್ಗೆ ನಮ್ಮ ಸಂತೋಷ ಹಾಗೂ ಮೆಚ್ಚುಗೆಯನ್ನು ದಾಖಲಿಸದೇ ಹೋಗಲು ಸಾಧ್ಯವಾಗುತ್ತಿಲ್ಲ. ದೇಶದ ಇತರೆಡೆಗಳಲ್ಲಿ ರಾಮ ಮತ್ತು ರಹೀಮ್ ಅಥವಾ ಈಶ್ವರ ಮತ್ತು ಅಲ್ಲಾಹ್ ಒಂದೇ ಎಂದು ಹಗಲಿರುಳು ಕೇಳಲ್ಪಡುವ ಘೋಷಣೆಗಳು ಅದರ ನೈಜ ಶ್ರದ್ಧೆಯಿಂದ ಆಚರಣೆಗೆ ಬರದೆ ಒಣಮಾತುಗಳಾಗಿರುವಾಗ, ಈ ಪವಿತ್ರ ಕೇಂದ್ರದಲ್ಲಿ ಅದು ನೈಜ ಆಚರಣೆಯಾಗಿ ಪರಿವರ್ತನೆಯಾಗಿರುವುದನ್ನು ಕಾಣುತ್ತೇವೆ..... ಸಂಕುಚಿತವಾದ ಜಾತಿ, ಕೋಮು ಅಥವಾ ಧರ್ಮದ ಆಧಾರದ ಮೇಲೆ ಆಳವಾಗಿ ಒಡೆದುಹೋಗಿರುವ ಈ ಸಮಾಜದಲ್ಲಿ ಸದರಿ "ಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ" ಸಂಸ್ಥೆಯು ಜಾತ್ಯತೀತತೆಯ ಉಜ್ವಲ ಉದಾಹರಣೆಯಾಗಿ ಎದ್ದು ನಿಲ್ಲುತ್ತದೆ. "(OS 25/78 ಪ್ರಕರಣದಲ್ಲಿ ಕರ್ನಾಟಕದ ಉಚ್ಚ ನ್ಯಾಯಾಲಯ 1991ರ ಜನವರಿ 7ರಂದು ಕೊಟ್ಟ ಆದೇಶದಿಂದ)

ಈ ಪ್ರಕರಣದಲ್ಲಿ ಹೈಕೋರ್ಟು ಬಾಬಾಬುಡನ್ ದರ್ಗ ಮುಸ್ಲಿಮರಿಗೆ ಮಾತ್ರ ಸೇರಿದ್ದು ಎಂಬ ವಕ್ಫ್ ಮಂಡಳಿಯ ಅಹವಾಲನ್ನು ತಿರಸ್ಕರಿಸಿ ಅದು ಹಿಂದೂ ಮತ್ತು ಮುಸ್ಲಿಮರಿಬ್ಬರಿಗೂ ಸೇರಿದ್ದೆಂದು ಆದೇಶ ನೀಡುತ್ತದೆ. ಅಲ್ಲದೆ "ಈ ದರ್ಗಾದಲ್ಲಿ ನೂರಾರು ವರ್ಷಗಳಿಂದ ಪೂಜೆ ಸಲ್ಲಿಸುತ್ತಿದ್ದರೂ ಮುಸ್ಲಿಮರೂ ಅದು ತಮಗೆ ಮಾತ್ರ ಸೇರಬೇಕೆಂದು ವಾದ ಮಾಡದೇ ಇರುವ". ಮತ್ತು "ಅಲ್ಲಿ ಪಾದುಕೆ ಪೂಜೆ ಮತ್ತು ನಂದಾದೀಪ ಇದ್ದರೂ ಅದನ್ನು ಹಿಂದೂಗಳು ಸಂಪೂರ್ಣವಾಗಿ ತಮಗೆ ಸೇರಬೇಕೆಂದು ಕೇಳದೇ ಇರುವುದು ಹೃದಯಸ್ಪರ್ಶಿಯಾಗಿದೆ" ಎಂದು ಅಭಿಪ್ರಾಯ ಪಟ್ಟಿದೆ. ಇದನ್ನು ವಕ್ಫ್ ಬೋರ್ಡ್ ಸುಪ್ರೀಂಕೋರ್ಟಿನಲ್ಲಿ ಪ್ರಶ್ನಿಸಿದಾಗಲೂ ಅದು ಹೈಕೋರ್ಟಿನ ಈ ಆದೇಶವನ್ನೇ ಎತ್ತಿಹಿಡಿದಿದೆ. ಅಷ್ಟು ಮಾತ್ರವಲ್ಲ, ಈವರೆಗೆ ಬಂದಿರುವ ಎಲ್ಲಾ ನ್ಯಾಯಾಲಯಗಳ ತೀರ್ಮಾನಗಳೂ ಸಾರಾಂಶದಲ್ಲಿ ಇದೇ ಅಭಿಪ್ರಾಯಗಳನ್ನು ವ್ಯಕ್ತಪಡಿಸಿವೆ.

ಆದರೂ ತಮ್ಮ ಪೂರ್ವವೃತ್ತಿಯಾದ ಸಂಶೋಧನೆಯನ್ನು ಯಾವತ್ತೋ ಮರೆತು ಭಜರಂಗದಳದಂತೆ ಚೀಪ್‌ರೇಟ್ ದ್ವೇಷದ ಪ್ರಚಾರಕ್ಕೆ ಚಿಮೂಗಳು ಇಳಿದಿದ್ದಾರೆ. ಹೋದ ವರ್ಷ ಅವರ ಗೆಳೆಯ ಎಸ್ಸೆಲ್ ಭೈರಪ್ಪ 'ಆವರಣ' ಎಂಬ ಮೂರನೇ ದರ್ಜೆ ಆರೆಸ್ಸೆಸ್ ಪ್ರಚಾರ ಸಾಮಗ್ರಿಯನ್ನೇ ಕಾದಂಬರಿಯೆಂದು ಪ್ರಕಟಿಸಿದ್ದರು. ಇವತ್ತು ಚಿಮೂರವರು ಹೊಸದಾಗಿ ಬರೆದಿರುವ ರಸ್ತೆ ಬದಿಯ ಮೈಲಿಗಲ್ಲುಗಳಲ್ಲಿ ಮತ್ತು ಮೊಬೈಲ್ ಫೋನಿನಲ್ಲಿ ಐತಿಹಾಸಿಕ 'ದಾಖಲೆ'ಗಳನ್ನು ಸಂಶೋಧಿಸುತ್ತಿದ್ದಾರೆ!

ಇವತ್ತು ಬಲಪಂಥೀಯತೆ ಮತ್ತು ಕುರುಡು ದ್ವೇಷ ಹೇಗೆ ಅವನತಿಗೆ ಕಾರಣವಾಗುತ್ತದೆ ಎಂಬುದಕ್ಕೆ ಇವರಿಬ್ಬರೂ ಸಮಕಾಲೀನ ಕರ್ನಾಟಕದ ಎರಡು ಜ್ವಲಂತ ಉದಾಹರಣೆಗಳು.

ನೋ ಕಾಮೆಂಟ್ಸ್



"ನಾನು ಬಿ.ಎಸ್.ಪಿ ಆನೆ ಹತ್ತಿ ಅಂಬಾರಿ ಮೇಲೆ ಕೂತು ಈ ರಾಜ್ಯದ ಮುಖ್ಯಮಂತ್ರಿಯಾಗಲು ಹೊರಟಿಲ್ಲ, ಬಹಳ ಭಾರವಾದ ಹೃದಯದಿಂದ ಜನತಾ ಪರಿವಾರ ಬಿಡುವ ತೀರ್ಮಾನ ಕೈಗೊಂಡಿದ್ದೇನೆ."

-ಪಿ.ಜಿ.ಆರ್. ಸಿಂಧ್ಯ

"ಬಿ.ಜೆ.ಪಿ. ಮತ್ತು ಜೆಡಿಎಸ್ ಎರಡೂ ಬೊಕ್ಕಸವನ್ನ ಕೊಳ್ಳೆಹೊಡೆಯಲು ಆದ್ಯತೆ ನೀಡಿದ್ದವು. ಬೊಕ್ಕಸವನ್ನ ಹಂಚಿಕೊಳ್ಳುವಲ್ಲಿ ಒಮ್ಮತ ಮೂಡದ ಕಾರಣ ಮೈ... ಮುರಿದು ಬತ್ತು."

-ಧರ್ಮಸಿಂಗ್

ನಂಬಿದ್ರೆನಂಬಿ ಬಿಟ್ರೆಬಿಡಿ

"ಕಾಂಗ್ರೆಸ್ಸಿನಲ್ಲಿ ಭಿನ್ನಾಭಿಪ್ರಾಯವಿಲ್ಲ."

-ಎಂ.ವಿ.ರಾಜಶೇಖರನ್



"ಬಿಜೆಪಿಯಲ್ಲಿ ಭಿನ್ನಾಭಿಪ್ರಾಯವಿದೆ ಆದರೆ ಭಿನ್ನಮತವಿಲ್ಲ."

-ಡಿ.ಎಚ್.ಶಂಕರಮೂರ್ತಿ

"ಎಂ.ಪಿ.ಪ್ರಕಾಶ್ ಯಾವುದೇ ಪಕ್ಷಕ್ಕ ಸೇರಿದರೂ ಆ ಪಕ್ಷದ ಆಸ್ತಿಯಾಗಬಲ್ಲರು."

-ಎಚ್.ಕೆ.ಪಾಟೀಲ

"ಸಿಪಿಎಂಗೆ ಬೆತ್ತಲಾಗುವ ಭಯವಿಲ್ಲ"

-ನಿತ್ಯಾನಂದ ಸ್ವಾಮಿ, ಸಿಪಿಎಂ ಮುಖಂಡರು



"ನಾನು ಶಿಕ್ಷಣ ಇಲಾಖೆಯಲ್ಲಿ ಹಸ್ತಕ್ಷೇಪ ಮಾಡಿದ್ದರಿಂದಲೇ ಗ್ರಾಮೀಣ ಪ್ರದೇಶದಲ್ಲಿ ಶಾಲೆ ಆರಂಭವಾದದ್ದು."

-ಎಚ್.ಡಿ.ರೇವಣ್ಣ


ಇಷ್ಟು ಮಾತ್ರ ಸಾಲದು



"ಮೋದಿ ಕೂಡಾ ಮುಖವಾಡ ಹಾಕಿಕೊಂಡಿದ್ದಾರೆ. ಅವರ ಮುಖವಾಡ ಕಿತ್ತು ಬಿಸಾಕುವ ಕೆಲಸ ಆಗಬೇಕಿದೆ."

-ಯು.ಆರ್. ಅನಂತಮೂರ್ತಿ

ಕಿವುಡು ಕಾನೂನು ಮತ್ತು ಮಿನಿ ಮೋದಿಗಳು



"ದತ್ತಪೀಠವನ್ನು ಹಿಂದೂಗಳಿಗೆ ಒಪ್ಪಿಸಬೇಕು. ಇಲ್ಲದೆ ಹೋದರೆ ಮುಸ್ಲಿಮರಿಗೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಬಹಿಷ್ಕಾರ ಹಾಕಲಾಗುವುದು."

-ಪ್ರಮೋದ್ ಮುತಾಲಿಕ್

ಕಾವ್ಯ ಕ್ರೌರ್ಯವನ್ನು ಮರೆಸಬಾರದಲ್ಲವೇ?

"ಕ್ರೌರ್ಯವನ್ನು ಕಾವ್ಯವನ್ನಾಗಿಸುವ ಅದ್ಭುತ ಚಲನಚಿತ್ರ"


-"ಆ ದಿನಗಳು" ಚಲನಚಿತ್ರದ ಒಂದು ಜಾಹೀರಾತು

ಸುಳ್ಳು, ಸುಳ್ಳೇ!

"ಪ್ರೀತಿ ಏಕೆ ಭೂಮಿ ಮೇಲಿದೆ ಚಿತ್ರದಲ್ಲಿ ಬಳಸಲಾಗಿರುವ ಸುಳ್ಳು ಸುಳ್ಳೇ ಹಾಡನ್ನು ಇತರ ಧರ್ಮೀಯರು ಹಿಂದೂಗಳನ್ನು ಕಿಚಾಯಿಸಲು ಬಳಸಿಕೊಳ್ಳುತ್ತಿದ್ದಾರೆ"

-ವಸಂತ್‌ಕುಮಾರ್, ಶ್ರೀರಾಮ ಸೇನೆ ಮುಖಂಡ

ಅಭಾವ ವೈರಾಗ್ಯ



"ಧನುರ್ಮಾಸದ ಕಾರಣ ನಾವು ಈ ತಕ್ಷಣಕ್ಕೆ ನಿರ್ಧಾರ ತೆಗೆದುಕೊಳ್ಳುತ್ತಿಲ್ಲ. ಆದ್ದರಿಂದ ನಮ್ಮ ನಿರ್ಧಾರವನ್ನು ಸಂಕ್ರಾಂತಿಯ ತನಕ ಮುಂದೂಡುತ್ತಿದ್ದೇವೆ."

-ಎಂ.ಪಿ.ಪ್ರಕಾಶ್

ಮೂವತ್ತು ಸಾವಿರ ಯಮಕಿಂಕರರು?

"ದೇಶಾದ್ಯಂತ ICICI ಬ್ಯಾಂಕಿಗೆ ಮೂವತ್ತು ಸಾವಿರ ರಿಕವರಿ ಏಜೆಂಟರಿದ್ದಾರೆ."

-ಮದಿವಣ್ಣನ್, ICICI ಅಧಿಕಾರಿ

ನಮ್ಮನ್ನು ಚೆನ್ನಾಗಿ ತಿಳಿದಿರುವ ಹಾಗೂ ಹೇಗಿದ್ದರೂ ನಮ್ಮನ್ನು ಪ್ರೀತಿಸುವವನೇ ನಿಜವಾದ ಸ್ನೇಹಿತ -ಜೆರೊಮ್ ಕಮಿಂಗ್ಸ್

ಬೆನಜೀರ್ ಭುಟ್ಟೋ ಎಂಬ ಸಾಮಾನ್ಯ ಸಾಮರ್ಥ್ಯದ ಆದರೆ ಅಸಮಾನ್ಯ ಛಲದ ಮಹಿಳೆಯ ಬದುಕನ್ನು ಕುರಿತು ಐದಾರು ಭಾಗಗಳಲ್ಲಿ ಪ್ರಕಟಗೊಳ್ಳಲಿರುವ ಲೇಖನ ಮಾಲೆಯ ಮೊದಲ ಭಾಗ ಇಲ್ಲಿದೆ. ವಿಧಿಯ ಶಿಶುವೂ ಆದ, ಸಂದರ್ಭದ ಫಲಾನುಭವಿಯೂ ಆದ ಬೆನಜೀರ್ ಅನುಭವಿಸಿದ ದುರಂತಗಳು, ಅಧಿಕಾರ ಸಿಕ್ಕಾಗ ನಡೆಸಿದ ಅವ್ಯವಹಾರಗಳು ಸೇರಿದಂತೆ ಪಾಕಿಸ್ತಾನವೆಂಬ ಖಾಯಂ ಅಗ್ನಿ ಪರ್ವತದೊಳಗಿನ ರಾಜಕೀಯ ಪಿತೂರಿ, ಅರಾಜಕತೆಗಳ ನಡುವೆ ಸಿಕ್ಕು ಈಗ ಪ್ರಾಣ ಕಳೆದುಕೊಂಡಿರುವ ಬೆನಜೀರ್ ಬಗ್ಗೆ ಮುಂದಿನ ವಾರ ಇನ್ನಷ್ಟು....

ಗಿಡುಗಗಳಿಗೆ ಬಲಿಯಾದ ಗಿಳಿ ಬೆನಜೀರ್



ಅದೊಂದು ಬೇಸಿಗೆಯ ರಜಾ ದಿನ. ಅಪ್ಪ ಅಮ್ಮ, ಮಕ್ಕಳು ಎಲ್ಲರೂ ಊರಿನಲ್ಲಿ ಅರಮನೆಯಂತಿದ್ದ ತಮ್ಮ ಪಿತ್ರಾರ್ಜಿತ ಬಂಗಲೆಗೆ ಹೋಗಿದ್ದರು. ಅದು ಪಾಕಿಸ್ತಾನದ ಸಿಂಧ್ ಪ್ರಾಂತ್ಯದ ಲರ್ಖಾನ ಜಿಲ್ಲೆಯ ಗಡಿ ಖುದಾ ಭಕ್ಸ್ ಗ್ರಾಮ. ಆ ಹುಡುಗಿ ಮನೆಯೊಳಗೆ ಏನನ್ನೋ ಓದುತ್ತಿದ್ದಾಗ ಹೊರಗಿನಿಂದ ಅಪ್ಪ ಮತ್ತು ತಮ್ಮಂದಿರ ದನಿ ಕೇಳಿಬಂತು. ಅವರೆಲ್ಲ ಏನು ಮಾಡುತ್ತಿದ್ದಾರೆಂದು ನೋಡಲು ಆಕೆ ಹೊರಗೆ ಹೋದಳು.

ಹೇಳಿಕೇಳಿ ಅವರದ್ದು ಭೂಮಾಲೀಕರ ಕುಟುಂಬ. ಅಪಾರ ಹಣ, ಹಲವಾರು ಹಳ್ಳಿಗಳನ್ನೇ ಆವರಿಸಿದ್ದಷ್ಟು ಭೂಮಿಯ ಒಡೆಯರವರು. ಆ ಹುಡುಗಿಯ ತಾತನ ಕಾಲದಿಂದಲೇ ಅಮೆರಿಕ ಮತ್ತು ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಮಾಡುವಷ್ಟು ಸಂಪತ್ತು, ಅದರೊಂದಿಗೆ ಸಾಕಷ್ಟು ರಾಜಕೀಯ ಪ್ರಭಾವವೂ ಹೊಂದಿದ್ದ ಕುಟುಂಬ. ಇಂತಹ ವಂಶದಲ್ಲಿ ಬೇಟೆ ಆಡುವುದು ಒಂದು ಹವ್ಯಾಸ. ಆದ್ದರಿಂದ ತನ್ನ ಇಬ್ಬರು ಗಂಡು ಮಕ್ಕಳಿಗೆ ತಂದೆ ಬಂದೂಕು ಹಾರಿಸುವುದನ್ನು ಕಲಿಸುತ್ತಿದ್ದ. ಇದರಲ್ಲಿ ಆಸಕ್ತಿ ಇರದ ಆ ಹುಡುಗಿ ತನ್ನ ಸುತ್ತಲೂ ಇದ್ದ ಗಿಡ ಮರಗಳನ್ನು, ಹೂ ಹಣ್ಣುಗಳನ್ನು ನೋಡುತ್ತಾ ನಿಂತಿದ್ದಳು. ಆಗ ಆಕೆಯ ಕಣ್ಣಿಗೆ ಬಿದ್ದಿದ್ದು ಒಂದು ಸುಂದರವಾದ ಗಿಳಿ; ಚಿಲಿಪಿಲಿ ಎನ್ನುತ್ತಾ ತನ್ನ ಪಾಡಿಗೆ ತಾನಿದ್ದ ಹಸಿರು ಬಣ್ಣದ ಗಿಳಿ.

ಆ ಗಿಳಿ ಆಕೆಯ ತಮ್ಮನ ಕಣ್ಣಿಗೂ ಬಿತ್ತು. ಅದೇನನ್ನಿಸಿತೋ, ಅದರತ್ತ ತನ್ನ ಬಂದೂಕನ್ನು ತಿರುಗಿಸಿ ಗುಂಡನ್ನು ಹಾರಿಸಿಯೇ ಬಿಟ್ಟ. ನೆಲಕ್ಕುರುಳಿದ ಗಿಳಿ ತನ್ನ ರೆಕ್ಕೆಗಳನ್ನು ಪಟಪಟನೆ ಬಡಿಯುತ್ತಾ ಪ್ರಾಣ ಬಿಟ್ಟಿತು. ಆ ಗಿಳಿಯ ಹೆಣವನ್ನು, ಅದರಿಂದ ಸುರಿಯುತ್ತಿದ್ದ ರಕ್ತವನ್ನು ನೋಡಿ ಆ ಹುಡುಗಿ ಜೋರಾಗಿ ಚೀರಿಕೊಂಡಳು. ಅದನ್ಯಾಕೆ ಕೊಂದೆ ಎಂದು ತನ್ನ ತಮ್ಮನ ಮೇಲೆ ರೇಗಿದಳು.

ಈ ಪ್ರಕರಣ ಆ ಹುಡುಗಿ ಮತ್ತವಳ ತಂದೆಯ ನೆನಪಿನಲ್ಲಿ ಬಹಳ ವರ್ಷ ಅಚ್ಚಳಿಯದೆ ಉಳಿದಿತ್ತು, ಅವರಿಬ್ಬರೂ ಕೊನೆ ಬಾರಿಗೆ ಭೇಟಿಯಾದಾಗ ಆಕೆಯ ತಂದೆ "ಅವತ್ತು ಗಿಳಿಯೊಂದು ಸತ್ತಿದ್ದಕ್ಕೆ ಅಷ್ಟೊಂದು ಅತ್ತ ಚಿಕ್ಕ ಹುಡುಗಿ ನನಗಿನ್ನೂ ನೆನಪಿದ್ದಾಳೆ. ಅವಳ ಸೂಕ್ಷ್ಮತೆ ನನಗೆ ಗೊತ್ತಿದೆ" ಎಂದು ಹೇಳಿದ. ಆ ಮಾತು ಹೇಳಿದಾಗ ಸ್ವತಃ ಅವನೇ ತನ್ನ ನೇಣು ಶಿಕ್ಷೆ ಎದುರು ನೋಡುತ್ತಿದ್ದ- ಆತ ಜುಲ್ಫಿಕರ್ ಅಲಿ ಭುಟ್ಟೋ.

ಅವತ್ತು ಗಿಳಿಯೊಂದರ ಸಾವಿಗೆ ಅತ್ತಿದ್ದ ಹುಡುಗಿ ಇವತ್ತು ಸ್ವತಃ ತಾನೇ ಗಿಡುಗಗಳಿಗೆ ಬಲಿಯಾಗಿದ್ದಾಳೆ. ಈ ಗಿಳಿಯೇ ಬೆನಜೀರ್ ಭುಟ್ಟೋ.

ಒಂದು ರೀತಿಯಲ್ಲಿ ಈ ಬೆನಜೀರ್ ಸಾಮಾನ್ಯ ಮಹಿಳೆ. ಬಹಳಷ್ಟು ಹೆಣ್ಣುಮಕ್ಕಳಂತೆ ತನ್ನ ಮೆದುಳನ್ನು ಪ್ರಯೋಗಿಸದೆ ಹೃದಯದಿಂದ ಚಿಂತಿಸಿದವಳು, ಪ್ರಗತಿಪರಳಾಗಿದ್ದರೂ ಸಂಪ್ರದಾಯಕ್ಕೆ ಅಂಜಿ ಅದಕ್ಕೇ ತನ್ನ ಬದುಕನ್ನು ಒಗ್ಗಿಸಿಕೊಂಡವಳು, ಅಧಿಕಾರ ತನ್ನ ಕೈಲಿದ್ದರೂ ಪುರುಷ ಪ್ರಧಾನ ಸಮಾಜವನ್ನು ಬದಲಾಯಿಸಲು ಹಿಂದೇಟು ಹಾಕಿದವಳು. ತನ್ನ ಗಂಡ ಎಷ್ಟೇ ಕೆಡುಕ, ಭ್ರಷ್ಟನಾಗಿದ್ದರೂ ಆತನ ಪರ ವಹಿಸಿದವಳು.

ಇನ್ನೊಂದು ರೀತಿಯಲ್ಲಿ ಈಕೆ ಅಸಾಮಾನ್ಯ ಮಹಿಳೆ ಕೂಡ. ಚಿಕ್ಕ ವಯಸ್ಸಿನಲ್ಲೇ ಅಪಾರ ದಿಟ್ಟತನ ಮೆರೆದವಳು, ಸರ್ವಾಧಿಕಾರಿ ಜಿಯಾ ಆಕೆಯನ್ನು ಬಗ್ಗುಬಡಿಯಲು ಎಷ್ಟೇ ಪ್ರಯತ್ನಿಸಿದರೂ ಸೋಲದವಳು, ತನ್ನ ವೈರಿಗಳ ಶಕ್ತಿಯನ್ನು ಅಳೆದು ಸುರಿದು ಅವರಿಗೆ ಮಣ್ಣು ಮುಕ್ಕಿಸುವುದು ಹೇಗೆ ಎಂಬಂತಹ ರಾಜಕೀಯ ಮಾಡಿದವಳು, ಬುರ್ಖಾ ತೊಡದೆ ತನ್ನ ಆಧುನಿಕ ಜೀವನ ವಿಧಾನದೊಂದಿಗೇ ನಾಯಕತ್ವವನ್ನು ತೋರಿದವಳು.

ಅಧಿಕಾರ, ಗಡಿಪಾರು, ಜೈಲುವಾಸ, ಸಂಸಾರದಲ್ಲಿನ ದುರಂತಗಳು ಎಲ್ಲವನ್ನೂ ಕಂಡವಳು ಬೆನಜೀರ್. ಹಾಗೆಯೇ ಭ್ರಷ್ಟಾಚಾರದಲ್ಲಿ, ಸ್ವಜನಪಕ್ಷಪಾತದಲ್ಲಿ, ಅವಕಾಶವಾದಿತನದಲ್ಲಿ ಮುಳುಗಿ ಎದ್ದವಳು ಬೆನಜೀರ್. ಹಿಂದೊಮ್ಮೆ ಹೇಗೆ ಪಾಕಿಸ್ತಾನದ ರಾಜಕೀಯ ಸಂದರ್ಭ ಆಕೆಯನ್ನು ರೂಪಿಸಿತ್ತೋ, ಹಾಗೆಯೇ ಆನಂತರ ಪಾಕಿಸ್ತಾನದ ರಾಜಕೀಯ ಸಂದರ್ಭವನ್ನು ತನ್ನ ಅನುಕೂಲಕ್ಕಾಗಿ [illegible]ತ್ತಿಸಿದಾಕೆ ಕೂಡ.

ಬೆನಜೀರ್ ತನ್ನನ್ನು `Daughter of Destiny' ಮತ್ತು `Daughter of the East' ಎಂದು ಕರೆದುಕೊಂಡಿದ್ದಳು. ಅದು ಒಂದು ರೀತಿಯಲ್ಲಿ ನಿಜ. ಏಕೆಂದರೆ ವಿಧಿ ಮತ್ತು ಪೌರಾತ್ಯ ಸಂಸ್ಕೃತಿ ಬೆನಜೀರ್‌ಳ ಬದುಕಿನ ದಿಕ್ಕನ್ನು, ಜೀವನ ಶೈಲಿಯನ್ನು, ರಾಜಕೀಯವನ್ನು, ಆಕೆ ಕಂಡ ದುರಂತಗಳನ್ನು, ಕೊನೆಗೆ ಸಾವನ್ನೂ ನಿರ್ಧರಿಸಿದವು.

ಜೈಲಿನ ಅನುಭವ

ಬೆನಜೀರ್ ತನ್ನ 35ನೇ ವಯಸ್ಸಿನಲ್ಲಿ ಮುಸ್ಲಿಮ್ ದೇಶವೊಂದರ ಪ್ರಥಮ ಮಹಿಳಾ ಪ್ರಧಾನಿ ಆಗಿದ್ದರ ಹಿಂದೆ ಆಕೆಯ ಛಲ ಮತ್ತು ಅನುಭವಿಸಿದ ಕಷ್ಟಕಾರ್ಪಣ್ಯಗಳಿವೆ. ಅಮೆರಿಕದ ರ್‍ಯಾಡ್‌ಕ್ಲಿಫ್ ಎಂಬ ಪ್ರತಿಷ್ಠಿತ ವಿಶ್ವವಿದ್ಯಾಲಯದಲ್ಲಿ ಬೆನಜೀರ್ ಓದುತ್ತಿದ್ದಾಗಲೇ ಆಕೆಯ ತಂದೆ ಜುಲ್ಫಿಕರ್ ಅಲಿ ಭುಟ್ಟೋನನ್ನು ಸೈನ್ಯಾಧಿಕಾರಿ ಜಿಯಾ ಉಲ್‌ಹಕ್ ಪ್ರಧಾನಿ ಸ್ಥಾನದಿಂದ ಕಿತ್ತೊಗೆದು ಜೈಲಿಗಟ್ಟಿದ. ಆಗ ಪಾಕಿಸ್ತಾನಕ್ಕೆ ಹಿಂದಿರುಗಿದ ಬೆನಜೀರ್ ತನ್ನ ತಂದೆಯ ಪರವಾಗಿ ಹೋರಾಡಲಾರಂಭಿಸಿದಳು. ಆಕೆ ಹೋದಲೆಲ್ಲ ಜನ ಸೇರುತ್ತಿದ್ದರು, ಜಿಯಾ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು, ಜುಲ್ಫಿಕರ್ ಭುಟ್ಟೋನನ್ನು ಬಿಡುಗಡೆಗೊಳಿಸಬೇಕೆಂದು ಆಗ್ರಹಿಸಲಾರಂಭಿಸಿದರು.

ಬೆನಜೀರ್‌ಳ ಈ ಹೋರಾಟದಿಂದಾಗಿ ತನ್ನ ಅಧಿಕಾರಕ್ಕೆ ಅಪಾಯ ಕಾದಿದೆ ಎಂದು ಅರಿತ ಜಿಯಾ ಆಕೆಯನ್ನು ಮತ್ತು ಆಕೆಯ ತಾಯಿ ನುಸ್ರತ್‌ಳನ್ನು ಗೃಹಬಂಧನದಲ್ಲಿಟ್ಟ. ಆದರೆ ಬೆನಜೀರ್ ಅಲ್ಲಿಂದಲೂ ತನ್ನ ಪ್ರತಿಭಟನೆಯನ್ನು ಮುಂದುವರಿಸಿದಳು, ತನ್ನ ತಂದೆಯ ಪರವಾಗಿ ಬೇರೆ ಬೇರೆ ದೇಶಗಳು ಜಿಯಾ ಮೇಲೆ ಒತ್ತಡ ತರುವಂತೆ ಮಾಡಿದಳು. ಇದೆಲ್ಲದರಿಂದ ರೋಸತ್ತ ಜಿಯಾ, ಜುಲ್ಫಿಕರ್ ಭುಟ್ಟೋನನ್ನು ಗಲ್ಲಿಗೇರಿಸಿದರೆ, ಬೆನಜೀರ್‌ಳನ್ನು ಜೈಲಿಗೆ ನೂಕಿದರೆ ತಾನು ನೆಮ್ಮದಿಯಿಂದಿರಬಹುದು ಎಂದು ಲೆಕ್ಕಚಾರ ಹಾಕಿದ.

ತನ್ನನ್ನು ಗಲ್ಲಿಗೇರಿಸಲಿರುವ ಜಿಯಾ ಮುಂದೆ ತನ್ನ ಮಗಳಿಗೂ ಅದೇ ದಾರಿ ತೋರಿಸಬಹುದೆಂದು ಹೆದರಿದ ಜುಲ್ಫಿಕರ್ ತನ್ನ ಮಗಳ ಮುಂದೆ ತನ್ನ ಆತಂಕವನ್ನು ವ್ಯಕ್ತಪಡಿಸಿದ. "ಇಷ್ಟು ಚಿಕ್ಕ ವಯಸ್ಸಿನಲ್ಲೇ ನೀನು ಅದೆಷ್ಟು ಕಷ್ಟಗಳನ್ನು ಕಂಡಿದ್ದೀಯ. ನೀನಿನ್ನೂ ಚಿಕ್ಕವಳು. ಈಗ ತಾನೇ ನಿನ್ನ ವಿದ್ಯಾಭ್ಯಾಸ ಮುಗಿಸಿರುವವಳು. ನಿನ್ನ ಭವಿಷ್ಯವೇ ನಿನ್ನ ಮುಂದಿರುವಾಗ ಇಲ್ಲಿಯ ನರಕಕ್ಕೆ ಹಿಂದಿರುಗಿದ್ದೀಯ. ಬೇಡ, ನಾನು ನಿನ್ನನ್ನು ಬಿಡುಗಡೆಗೊಳಿಸುತ್ತೇನೆ. ನೀನು ಈ ದೇಶದಿಂದ ಹೊರಟುಹೋಗು. ಲಂಡನ್, ಪ್ಯಾರಿಸ್, ಸ್ವಿಜರ್‌ಲ್ಯಾಂಡ್ ಅಥವಾ ಇನ್ನೆಲ್ಲೋ ಸುಖವಾಗಿ ಬಾಳು, ಸಂತೋಷದಿಂದಿರು" ಎಂದು ಜುಲ್ಫಿಕರ್ ಮಗಳಿಗೆ ಬುದ್ಧಿವಾದ ಹೇಳಿದ. ಆಗ ಬೆನಜೀರ್ ಜೈಲಿನ ಕಂಬಿಗಳ ಮೂಲಕ ತನ್ನ ಕೈಗಳನ್ನು ಚಾಚಿ ತಂದೆಯ ಕೈಗಳನ್ನು ಹಿಡಿದು "ಇಲ್ಲಪ್ಪ ನಾನು ಹೋಗಲ್ಲ, ನಾನು ಇಲ್ಲೇ ಇದ್ದು ಪ್ರಜಾತಂತ್ರಕ್ಕೆ ನೀನು ನಡೆಸಿದ ಹೋರಾಟವನ್ನು ಮುಂದುವರೆಸುತ್ತೇನೆ" ಎಂದಳು.

ಅವತ್ತು ಆಕೆಗೆ ಗೊತ್ತಿತ್ತು ತಾನು ತಂದೆಯನ್ನು ಮತ್ತೆಂದೂ ಜೀವಂತವಾಗಿ ನೋಡುವುದಿಲ್ಲವೆಂದು. ಅದಕ್ಕೆ ಆಕೆ "ದಯವಿಟ್ಟು ಈ ಬಾಗಿಲನ್ನು ತೆರೆಯಿರಿ. ನಾನು ನನ್ನಪ್ಪನನ್ನು ಕೊನೇ ಬಾರಿ ಅಪ್ಪಿಕೊಳ್ಳುತ್ತೇನೆ" ಎಂದು ಜೈಲಧಿಕಾರಿಗಳನ್ನು ಬೇಡಿಕೊಂಡಳು. ಆದರೆ ಆಕೆ ಎಷ್ಟೇ ಬೇಡಿಕೊಂಡರೂ ಅವರು ಬಾಗಿಲನ್ನು ತೆರೆಯಲು ಒಪ್ಪಲಿಲ್ಲ, ದುಃಖಭರಿತಳಾಗಿ ಅಲ್ಲಿಂದ ಹೊರಟ ಆಕೆ ತನ್ನ ತಂದೆಯತ್ತ ತಿರುಗಿ ಮತ್ತೆ ನೋಡಲಿಲ್ಲ, ಹಾಗೊಮ್ಮೆ ನೋಡಿದ್ದರೆ ತನ್ನ ದುಃಖ ತಡೆಯಲಾರದೇ, ಸ್ವಾಭಿಮಾನವನ್ನು ಮರೆತು ಅಳುತ್ತೇನೆಂಬ ಭಯ ಆಕೆಯ ಹೃದಯದಲ್ಲಿತ್ತು. ಅಲ್ಲಿದ್ದ ಸೈನಿಕರು, ಜೈಲಧಿಕಾರಿಗಳು ಬೆನಜೀರ್‌ಳನ್ನೇ ನೋಡುತ್ತಿದ್ದರೆ ಆಕೆ ತನ್ನ ತಲೆ ಎತ್ತಿ ನಡೆಯುವುದರ ಬಗ್ಗೆಯೇ ಚಿಂತಿಸುತ್ತಿದ್ದಳು. "ಅಳಬೇಡ, ಕುಗ್ಗಿ ಹೋಗಬೇಡ, ನೀನು ಧೃತಿಗೆಡಲೆಂದೇ ಇವರೆಲ್ಲಾ ಕಾಯುತ್ತಿದ್ದಾರೆ. ಅವರಿಗೆ ಆ ಸಂತೋಷವನ್ನು ನೀಡಬೇಡ" ಎಂದು ತನಗೆ ತಾನೇ ಮನಸ್ಸಿನಲ್ಲಿ ಹೇಳಿಕೊಂಡು ಹೊರನಡೆದಿದ್ದಳು ಬೆನಜೀರ್.

ಜುಲ್ಫಿಕರ್ ಭುಟ್ಟೋನನ್ನು ಗಲ್ಲಿಗೇರಿಸಿದ ನಂತರ ಬೆನಜೀರ್‌ಳನ್ನು ಮತ್ತು PPP ಪಕ್ಷದ ಹಲವಾರು ನಾಯಕರನ್ನು ಜಿಯಾ ಜೈಲಿಗಟ್ಟಲು ಸಿದ್ಧನಾದ. ಇದರ ಬಗ್ಗೆ ತಿಳಿದಾಗ ಬೆನಜೀರ್ ಹೆದರಲಿಲ್ಲ, ಬದಲಾಗಿ ಜೈಲಿನಿಂದಲೇ ಎಲ್ಲರೂ ಜೊತೆಗೂಡಿ ತಮ್ಮ ಹೋರಾಟವನ್ನು ಮುಂದುವರಿಸಬಹುದು ಎಂದು ಲೆಕ್ಕ ಹಾಕಿದ್ದಳು. ಆದರೆ ಜಿಯಾ ಚಾಣಾಕ್ಷ. ಅವರೆಲ್ಲರನ್ನು ಸುಕ್ಕೂರ್ ಎಂಬಲ್ಲಿದ್ದ ಜೈಲಿಗೆ ಸಾಗಿಸಿದ ಜಿಯಾ ಇತರರೆಲ್ಲರೂ ಒಂದೆಡೆ, ಬೆನಜೀರ್ ಮಾತ್ರ ಇನ್ನೊಂದೆಡೆ ಇರುವಂತೆ ನೋಡಿಕೊಂಡ. ಮರುಭೂಮಿಯಲ್ಲಿದ್ದ ಆ ಜೈಲಿನಲ್ಲಿ ಅತಿಯಾದ ಶೆಖೆ. ಬೆನಜೀರ್ ಇದ್ದ ಕೋಣೆಯಂತೂ ಆಕೆ ನಿಸರ್ಗದ ವಿಕೋಪಕ್ಕೆ ಗುರಿಯಾಗುವಂತೆ ಇತ್ತು. ಆ ಅನುಭವದ ಬಗ್ಗೆ ಬೆನಜೀರ್ ಹೀಗೆ ಹೇಳಿಕೊಂಡಿದ್ದಾಳೆ: "ಅಲ್ಲಿ ಜೀವಂತವಾಗಿ ಸಮಾಧಿಯಲ್ಲಿದ್ದಂತಿತ್ತು. ಬದುಕಿರುತ್ತೀಯ, ಆದರೆ ಬದುಕಿರುವುದಿಲ್ಲ, ಹಗಲು ರಾತ್ರಿಗಳು ಲೆಕ್ಕಕ್ಕೆ ಸಿಗದಂತೆ ಉರುಳಿ ತಿಂಗಳುಗಳಾಗುತ್ತವೆ. ಏಕಾಂಗಿತನ ವಯಸ್ಸನ್ನು ಹೆಚ್ಚಿಸುತ್ತದೆ. ಆ ಮರುಭೂಮಿ ಹೇಗಿತ್ತೆಂದರೆ ಮರಳು ನನ್ನ ಕೋಣೆಯನ್ನು ಬಿಡುವಿಲ್ಲದಂತೆ ಪ್ರವೇಶಿಸುತ್ತಿತ್ತು. ಬೆವರು, ಧೂಳು ನನ್ನನ್ನು ಮುತ್ತಿರುತ್ತಿದ್ದವು. ಅಲ್ಲಿನ ಶೆಖೆಗೆ ನನ್ನ ಚರ್ಮ ಒಡೆದುಕೊಂಡು, ಆ ಸೀಳುಗಳ ಮೇಲೆ ಬೆವರು ಹರಿದಾಗ ನನ್ನ ದೇಹದ ಮೇಲೆ ಆಸಿಡ್ ಸುರಿದಂತಾಗುತ್ತಿತ್ತು. ತೆಳ್ಳಗಿನ ಪರದೆಯಂತೆ ನನ್ನ ಚರ್ಮ ಸುಳಿದುಬರುತ್ತಿತ್ತು. ಮೈಮೇಲೆಲ್ಲ ಬೊಬ್ಬೆಗಳು, ಗೊಂಚಲು ಗೊಂಚಲಾಗಿ ಉದುರುತ್ತಿದ್ದ ಕೂದಲು. ತಂಡೋಪತಂಡವಾಗಿ ದಾಳಿ ಇಡುತ್ತಿದ್ದ ಇರುವೆಗಳು, ದುಂಬಿಗಳು, ಹುಳಗಳು, ಸೊಳ್ಳೆಗಳು, ಜಿರಳೆಗಳು-ಇವುಗಳಿಂದ ರಕ್ಷಿಸಿಕೊಳ್ಳಲು ಹೊದಿಕೆಯನ್ನು ಮೈತುಂಬ ಎಳೆದುಕೊಂಡರೆ ಉಸಿರುಗಟ್ಟುವಿಕೆ."


5ನೇ ಪುಟಕ್ಕೆ...



ಕಂಡಹಾಗೆ

ಕಬ್ಬು ಬೆಳೆಗಾರರಿಗೆ ನೇಣಿನ ಕುಣಿಕೆ ತೋರಿಸುತ್ತಿರುವ ರಾಜ್ಯಪಾಲರು

ಈ ಸರ್ಕಾರಗಳಿಗೆ ಏನೆನ್ನಬೇಕು? ಜನಪರತೆ, ರೈತಪರತೆ ಇತ್ಯಾದಿ ಮೌಲ್ಯಗಳು ಹೋಗಲಿ ಕನಿಷ್ಠ ಮಾನವೀಯತೆಯೂ ಇಲ್ಲವಾಗಿದೆಯಲ್ಲಾ ಇದಕ್ಕೇನು ಮಾಡುವುದು ಎಂಬ ಪ್ರಶ್ನೆಯನ್ನು ನಮ್ಮ ರಾಜ್ಯದ ಕಬ್ಬಿನ ಬೆಳೆಗಾರರ ಸ್ಥಿತಿಯನ್ನು ನೋಡಿದ ಎಲ್ಲರೂ ಕೇಳುತ್ತಿದ್ದಾರೆ. ನಿಮಗೆ ನೆನಪಿರಬಹುದು, ಕೆಲವು ತಿಂಗಳ ಹಿಂದೆ ಅಂದಿನ ಮುಖ್ಯಮಂತ್ರಿ ಕುಮಾರ ಸ್ವಾಮಿ ರೈತರ ಆತ್ಮಹತ್ಯೆಯನ್ನು ತಡೆಯುವ ಸಲುವಾಗಿ ರೈತರೊಡನೆ ಸಂವಾದ ಎಂಬ ಒಂದು ಕಾರ್ಯಕ್ರಮವನ್ನು ನಡೆಸಿದ್ದರು. ಅಲ್ಲಿ ಕುಮಾರಸ್ವಾಮಿ ಸಂವಾದ ನಡೆಸುತ್ತಿದ್ದ ಸಮಯದಲ್ಲೇ ಒಂದು ಹಳ್ಳಿಯಲ್ಲಿ ರೈತನೊಬ್ಬ ತನ್ನನ್ನು ಕೊಂದುಕೊಂಡ. ಆ ಮಾತು ಬೇರೆ ಬಿಡಿ. ಆಗ ಕರ್ನಾಟಕದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರಲ್ಲಿ ಹೆಚ್ಚಿನವರು ಕಬ್ಬು ಬೆಳೆಗಾರರಾಗಿದ್ದರು. ಅವರ ಸಂಕಷ್ಟವನ್ನು ಪರಿಹರಿಸುತ್ತೇವೆಂದು ಹೇಳಿ ಹತ್ತು ಹಲವು ಆಶ್ವಾಸನೆಗಳನ್ನು ಅಧಿಕಾರಸ್ಥ ರಾಜಕಾರಣಿಗಳು ನೀಡಿದ್ದರು. ಇನ್ನೊಬ್ಬ ರೈತ ಸತ್ತರೂ ತಾನು ರಾಜೀನಾಮೆ ನೀಡುತ್ತೇನೆಂದು ಕುಮಾರಸ್ವಾಮಿ ಹೇಳಿದ್ದಾಯಿತು. ಅವರ ಪಿತಾಶ್ರೀ ದೇವೇಗೌಡರು ರೈತರು ಸತ್ತರೆ ಸಾಯಲಿ ನೀನೇನೂ ರಾಜೀನಾಮೆ ನೀಡಬೇಡ ಎಂದು ಹಿತಬೋಧನೆ ಮಾಡಿದ್ದನ್ನೂ ಈ ನಾಡಿನ ಜನ ನೋಡಿದ್ದಾರೆ.



ಇಂದು ಅವೆಲ್ಲವನ್ನೂ ಮರೆತು ಬಿಡೋಣ. ಆದರೆ ಈ ಸಾರಿ ಮತ್ತೆ ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾಗುವಾಗ ಯಾರೇ ಆದರೂ ಏನು ನಿರೀಕ್ಷಿಸುತ್ತಾರೆ. ಕಬ್ಬು ಬೆಳೆಗಾರರ ಸಮಸ್ಯೆಗಳ ಕುರಿತು ಅಧಿಕಾರಿಗಳು, ರಾಜಕಾರಣಿಗಳು, ಸಕ್ಕರೆ ಕಾರ್ಖಾನೆ ಗಳು ಗಂಭೀರವಾಗಿ ಆಲೋಚಿಸುತ್ತಾರೆ, ರೈತ ಪರ ವಾದ ಕೆಲವು ಕ್ರಮಗಳನ್ನು ಕೈಗೊಳ್ಳುತ್ತಾರೆ ಎಂದು ನಿರೀಕ್ಷಿಸುತ್ತಾರೆ ತಾನೇ? ಆದರೆ ಇಂದು ಏನಾಗಿದೆ ನೋಡಿ.

ಕಳೆದ ವರ್ಷ ಕಬ್ಬಿನ ಉತ್ಪಾದನೆ ಹೆಚ್ಚಾಗಿದ್ದದ್ದು ನಿಜವಾದರೂ, ಕಾರ್ಖಾನೆಗಳು ಕಬ್ಬು ಅರೆದದ್ದು ಸಹ ನಿಧಾನವಾಗಿ. ಕಳೆದ ವರ್ಷದ ಒಂದಷ್ಟು ಪ್ರಮಾಣದ ಉಳಿಕೆ ಕಬ್ಬಿನ ಜೊತೆಗೆ ಈ ಸಾರಿಯ ಕಬ್ಬನ್ನೂ ಅರೆಯಬೇಕೆಂದರೆ ಕಾರ್ಖಾನೆಗಳನ್ನು ಬೇಗನೆ ಆರಂಭಿಸಬೇಕಿತ್ತು. ಆದರೆ ಜುಲೈನಲ್ಲಿ ಆರಂಭವಾಗಬೇಕಿದ್ದ ಸಕ್ಕರೆ ಕಾರ್ಖಾನೆಗಳು ಆಗಸ್ಟ್-ಸೆಪ್ಟೆಂಬರ್‌ನಲ್ಲಿ ಕಬ್ಬು ಅರೆಯಲು ಶುರು ಮಾಡಿದವು. ಮಂಡ್ಯದ ಮೈಷುಗರ್ ಕಾರ್ಖಾನೆಯು ಅಕ್ಟೋಬರ್ 30ರಂದು ಆರಂಭವಾಯಿತು! ಹಾಗೆ ಆರಂಭವಾದರೂ ಇಂದಿನವರೆಗೂ ಮೈಷುಗರ್‌ನ ಎರಡು ಮಿಲ್‌ಗಳಲ್ಲಿ ಒಂದು ಮಾತ್ರ ಕೆಲಸ ಮಾಡುತ್ತಿದೆ. ಅದೂ ದಿನದಲ್ಲಿ ಯಾವಾಗ ಕೆಲಸ ಮಾಡುತ್ತದೆ, ಯಾವಾಗ ಕೆಟ್ಟು (ಕೆಡಿಸಲ್ಪಟ್ಟು?) ನಿಲ್ಲುತ್ತದೆ ಹೇಳಲಾಗುವುದಿಲ್ಲ. ಇದರಿಂದ ಈ ಭಾಗದ ರೈತರು ಬಹಳ ಆತಂಕಕ್ಕೀಡಾದರು. ತಮ್ಮ ಕಬ್ಬು ಖಾಲಿಯಾದರೆ ಸಾಕು ಎಂಬುದು ಅವರು ಪ್ರತಿನಿತ್ಯ ಕೋರಿಕೊಳ್ಳುತ್ತಿರುವುದು.

ಇನ್ನು ಕಬ್ಬಿನ ದರದ ವಿಚಾರ. ರೈತರು ಸಂಕಷ್ಟದಲ್ಲಿದ್ದ ಕಳೆದ ವರ್ಷದಲ್ಲಿ ಸರ್ಕಾರ ಮತ್ತು ಸಕ್ಕರೆ ಕಂಪೆನಿಗಳು ಚರ್ಚಿಸಿ ನಿಗದಿಗೊಳಿಸಿದ್ದು ಟನ್ನೊಂದಕ್ಕೆ 1100ರೂ.ಗಳು. ಇದೂ ಸಹ ಬಿತ್ತನೆ ವೆಚ್ಚ, ಗೊಬ್ಬರ ಇತ್ಯಾದಿ ವೆಚ್ಚ, ಕಟಾವಿನ ವೆಚ್ಚ, ಕೂಲಿಯ ವೆಚ್ಚ, ಸಾಗಾಟದ ವೆಚ್ಚ ಇತ್ಯಾದಿ ಎಲ್ಲವನ್ನೂ ಅಳಿದು ನಿಗದಿಪಡಿಸಿದ ಬೆಲೆಯಲ್ಲ. ಇವೆಲ್ಲವನ್ನೂ ಕೂಡಿಸಿ ಅದರ ಮೇಲೆ ರೈತರು ತಾವು ದುಡಿದ ದುಡಿಮೆಯ ಕೂಲಿ ಮತ್ತು ಲಾಭಾಂಶವನ್ನು ಸೇರಿಸಿದರೆ ಬರುವುದನ್ನೇ ವೈಜ್ಞಾನಿಕ ಬೆಲೆ ಎನ್ನುತ್ತಾರೆ. ಅದನ್ನು ಎಂದಿಗೂ ಯಾವ ಬೆಳೆಗೂ ನೀಡುವುದು ಈ ದೇಶದಲ್ಲಿ ನಡೆದೇ ಇಲ್ಲ. ಬದಲಿಗೆ ಸಕ್ಕರೆ ಬೆಲೆ, ಕಾರ್ಖಾನೆಗಳಿಗೆ ಕಬ್ಬು ಅರೆದು ಸಕ್ಕರೆ ತಯಾರಿಸಲು ತಗಲುವ ಖರ್ಚು, ಆ ಭಾಗದ ರೈತರ ಕಬ್ಬಿನಲ್ಲಿ ಬರುವ ಇಳುವರಿ ಮತ್ತು ಕಡ್ಡಾಯವಾಗಿ ಕಂಪೆನಿಯ ಲಾಭಾಂಶ ಇವನ್ನು ಸೇರಿಸಿ ಲೆಕ್ಕ ಹಾಕಿ ನೀಡಿದ್ದು. ರೈತರು ಕೇಳುವ ವೈಜ್ಞಾನಿಕ ಬೆಲೆ 1800ರೂ.ಗಳ ಆಸುಪಾಸಿನಲ್ಲಿ ಬರುತ್ತದೆ. ಇಂದು ಬಹುಪಾಲು ರೈತರು ಕೇಳುತ್ತಿರುವ 1250 ರೂ.ಗಳು 'ಬದುಕುವ ಬೆಲೆ'ಯೇ ಹೊರತು 'ವೈಜ್ಞಾನಿಕ ಬೆಲೆ'ಯಲ್ಲ. ಕೆಲವು ಅಧಿಕಾರಿಗಳೇ ಹೇಳುವ ಪ್ರಕಾರ, ಕೃಷಿ ಇಲಾಖೆ ಸಿದ್ಧಪಡಿಸಿರುವ ವರದಿಯೊಂದರಲ್ಲಿ ಒಂದು ಟನ್‌ನ ಉತ್ಪಾದನಾ ವೆಚ್ಚವು 1046ರೂ. ಆಗಿದೆ.

ಹೀಗಿರುವಾಗ ಈ ಸಾರಿ ರೈತರ ಸಂಕಷ್ಟವನ್ನು ಕಡಿಮೆ ಮಾಡುವುದು ಸರ್ಕಾರದ ಯಾವ ಮಾತ್ರದ ಆಶಯವಾದರೂ ಆಗಿದ್ದರೆ, ನಾವು ಏನನ್ನು ನಿರೀಕ್ಷಿಸಬಹುದು? ಈ ಸಾರಿ ಕನಿಷ್ಠ 1500 ರೂ. ನೀಡಬಹುದು ಎಂದಲ್ಲವೇ? ಆದರೆ ಮಾಡಿರುವುದಾದರೂ ಏನು? ಇದುವರೆಗೂ ಅಧಿಕೃತವಾಗಿ ಬೆಲೆಯ ನಿಗದಿ ಮಾಡಿಲ್ಲ. ಆದರೆ ಇತ್ತೀಚೆಗೆ ಇಳುವರಿ ಮತ್ತು ಸಕ್ಕರೆ ಬೆಲೆಯ ಆಧಾರದ ಮೇಲೆ ನೀಡಬಹುದೆಂದು ಕಂಪೆನಿಗಳು ಹೇಳಿರುವ ದರವೇನು ಗೊತ್ತೇ? 812ರಿಂದ 845 ರೂಪಾಯಿಗಳು!! ಅದಕ್ಕೇ ಕೇಳಿದ್ದು, ಈ ಸರ್ಕಾರಗಳಿಗೆ ಏನೆನ್ನಬೇಕು? ಯಾವುದರಲ್ಲಿ ಹೊಡೆಯಬೇಕು ಎಂದು.

ಇನ್ನು ಸಕ್ಕರೆ ಕಾರ್ಖಾನೆಗಳ ವಿಚಾರಕ್ಕೆ ಬರುವುದಾದಲ್ಲಿ ದೇಶದ ಮಟ್ಟದಲ್ಲಿ ಸಕ್ಕರೆ ಉತ್ಪಾದನೆಯಲ್ಲಿ ದೊಡ್ಡ ಪಾಲನ್ನು ಹೊಂದಿರುವ ಬಜಾಜ್ ಕಂಪೆನಿಯವರು ಉತ್ತರ ಪ್ರದೇಶ ಮತ್ತಿತರ ರಾಜ್ಯಗಳಲ್ಲಿ 600 ರೂ.ಗಳನ್ನು ನೀಡುತ್ತೇವೆಂದು ಹೇಳುತ್ತಿದ್ದಾರೆ. ಇದಕ್ಕೆ ಅವರು ಕಾರಣ ಕೊಡುತ್ತಿರುವುದು ಮಾರುಕಟ್ಟೆಯಲ್ಲಿ ಸಕ್ಕರೆಯ ಬೆಲೆ ಕಡಿಮೆಯಾಗಿದೆಯೆಂದು. ಕರ್ನಾಟಕದಲ್ಲಿ ಸೇರಿಸಿರುವ ಇನ್ನೊಂದು ಕಾರಣ ಸಾರಾಯಿ ನಿಷೇಧದ ಕಾರಣ ಡಿಸ್ಟಿಲರಿಯಿಂದಲೂ ಹೆಚ್ಚಿನ ಲಾಭವಿಲ್ಲವೆಂದು.

ಇದೇ ನಿಜವಾಗಿದ್ದರೆ ಮತ್ತೊಂದು ಪ್ರಶ್ನೆ ಏಳುತ್ತದೆ. ಕಳೆದ ಸಾಲಿನಲ್ಲಿ ಕರ್ನಾಟಕವೊಂದರಲ್ಲೇ 45 ಕಂಪೆನಿಗಳು ಹೊಸ ಕಾರ್ಖಾನೆಗಳನ್ನು ತೆರೆಯಲು ಅನುಮತಿ ಕೇಳಿದ್ದು ಅವುಗಳಲ್ಲಿ 19 ಕಾರ್ಖಾನೆಗಳಿಗೆ ಅನುಮತಿ ನೀಡಲಾಗಿದೆ. ಈ ಖಾಸಗಿ ಕಂಪೆನಿಗಳು ಹಾಗಾದರೆ ಧರ್ಮಾರ್ಥ ಸೇವೆ ಮಾಡಲೆಂದು ಅನುಮತಿ ಕೇಳುತ್ತಿವೆಯೇ? ಲಾಭದ ಉದ್ದೇಶದಿಂದ ಮಾತ್ರ ಎಂದು ಯಾರು ಬೇಕಾದರೂ ಹೇಳುತ್ತಾರೆ. ಮುಂದಿನ ದಿನಗಳಲ್ಲಿ ಪೆಟ್ರೋಲ್ ಬದಲಿಗೆ ಇಂಧನವಾಗಿ ಬಳಸುವ ಸಾಧ್ಯತೆಯಿರುವ ಎಥೆನಾಲ್‌ನ್ನು ಕಬ್ಬಿನಿಂದ ತಯಾರಿಸಿ ಲಾಭ ಮಾಡಿಕೊಳ್ಳಬಹುದೆಂಬುದು ಒಂದು ಕಾರಣವಾಗಿದ್ದರೂ, ಅದರ ಜೊತೆಗೆ ಇಂದೂ ಸಹ ಸಕ್ಕರೆ ಕಾರ್ಖಾನೆಗಳು ಲಾಭದಲ್ಲಿಯೇ ಇವೆಯೆಂಬುದು ಅಸಲೀ ಸತ್ಯ. ಹೀಗಿದ್ದೂ ಮಾರುಕಟ್ಟೆಯಲ್ಲಿನ ಏರುಪೇರುಗಳ ಕಾರಣದಿಂದ ತಮ್ಮ ಲಾಭದ ಪ್ರಮಾಣ ಒಂದು ಸ್ವಲ್ಪ ಕಡಿಮೆಯಾಗಬಹುದಾದರೂ, ರೈತರಿಗೆ 'ಬದುಕುವ ಬೆಲೆ'ಯನ್ನು ಕೊಟ್ಟರೆ ಅವರಿಗೆ ನಷ್ಟವಂತೂ ಆಗುವುದಿಲ್ಲ. ಒಂದು ವೇಳೆ ಅಂತಹ ನಷ್ಟ ಉಂಟಾಗುವುದಾದರೆ ಸರ್ಕಾರಗಳು ಅದಕ್ಕೆ ಸಬ್ಸಿಡಿಯನ್ನು ನೀಡಿ ಇದನ್ನು ಸರಿದೂಗಿಸಬಹುದಲ್ಲ? ರೈತರನ್ನು ಮತ್ತು ಈ ನಾಡಿನ ಜನತೆಯನ್ನು ಸುಲಿದು, ಅಂಬಾನಿ, ನಾರಾಯಣಮೂರ್ತಿ ಇತ್ಯಾದಿ ಕುಬೇರರನ್ನು ವಿಶ್ವದ ದೊಡ್ಡ ಶ್ರೀಮಂತರನ್ನಾಗಿಸಲು ಸಾಲ, ಸಬ್ಸಿಡಿ, ತೆರಿಗೆ ಮನ್ನಾ ಇತ್ಯಾದಿ ಮಾಡಲು ಹೊರಟಿರುವ ಈ ಸರ್ಕಾರಗಳಿಗೆ ಮತ್ತು ರಾಜಕಾರಣಿ/ಅಧಿಕಾರಿಗಳ ಕೂಟಕ್ಕೆ ಈ ಕಬ್ಬು ಬೆಳೆಗಾರರು ಯಾವ ಲೆಕ್ಕ?

ಆದ್ದರಿಂದಲೇ ರಾಜ್ಯ ಸರ್ಕಾರಗಳು ಕೇಂದ್ರದತ್ತ ಕೈತೋರಿಸುತ್ತಿದ್ದರೆ, ಕೇಂದ್ರ ಸರ್ಕಾರವು ಬರೀ ಬೊಗಳೆ ಮಾತುಗಳನ್ನಾಡುತ್ತಾ ಕಾಲ ಕಳೆಯುತ್ತಿದೆ. ರೈತರು ಈ ಬಾರಿ ಸಾಯಲು ವಿಷ ಕುಡಿಯುವುದು ಮೇಲೋ, ನೇಣು ಹಾಕಿಕೊಳ್ಳುವುದು ಮೇಲೋ ಎಂಬ ಜಿಜ್ಞಾಸೆಯನ್ನಷ್ಟೇ ಮಾಡಬೇಕಿದೆ.

ಮಂಡ್ಯದಲ್ಲಿ ಮೈಷುಗರ್ ಕಾರ್ಖಾನೆ ಯಾವಾಗ ಆರಂಭವಾಗಬಹುದೆಂಬುದು ನಿಶ್ಚಿತವಾಗದಿದ್ದಾಗ ರೈತರು ಪ್ರತಿಭಟನೆಯ ಮಾರ್ಗ ತುಳಿದಿದ್ದರಿಂದಲೇ ಬಾಯ್ಲರ್‌ಗೆ ಬೆಂಕಿ ಕೊಟ್ಟು ಕಾರ್ಖಾನೆಯನ್ನು ಆರಂಭಿಸಲಾಯಿತು. ಆ ನಂತರವೂ ಇದುವರೆಗೂ ಎರಡೂ ಮಿಲ್‌ಗಳು ಕೆಲಸ ಮಾಡುತ್ತಿಲ್ಲ. ಕೇವಲ ಒಂದು ಮಿಲ್ ಮಾತ್ರ ಕೆಲಸ ಮಾಡುತ್ತಿದೆ. ಮಂಡ್ಯ ಜಿಲ್ಲೆಯಲ್ಲಿ ತಮ್ಮ ಪ್ರಾಮಾಣಿಕತೆ ಮತ್ತು ದಕ್ಷತೆಗೆ ಜನರಿಂದ ಒಳ್ಳೆಯ ಹೆಸರು ಪಡೆದಿರುವ ಡಿಸಿ ಮಂಜುನಾಥ್ ಪ್ರಸಾದ್ ಅವರು ಎಷ್ಟೇ ಪ್ರಯತ್ನಪಟ್ಟರೂ ಈ ಸಮಸ್ಯೆಯನ್ನು ಬಗೆಹರಿಸಲಾಗುತ್ತಿಲ್ಲ. ಇನ್ನು ಹಲವರು ಹಾಲಿ ವ್ಯವಸ್ಥಾಪಕ ನಿರ್ದೇಶಕ ಗರ್ಗ್ ಅವರತ್ತ ಬೆರಳು ಮಾಡಿ ತೋರಿಸುತ್ತಾರೆ. ಆದರೆ ವಾಸ್ತವದಲ್ಲಿ ಕಥೆಯೇ ಬೇರೆ ಇದೆ. ಮೈಷುಗರ್ ದೊಡ್ಡ ಪ್ರಮಾಣದ ಆಸ್ತಿಪಾಸ್ತಿ ಹೊಂದಿರುವ ಒಂದು ಸಾರ್ವಜನಿಕ ಉದ್ದಿಮೆಯಾಗಿದ್ದು ಇದನ್ನು ನಷ್ಟವೆಂದು ತೋರಿಸಿ ಬಿಡಿಗಾಸಿಗೆ ಖಾಸಗಿ ಲೂಟಿಕೋರರಿಗೆ ಮಾರುವ ಖದೀಮ ಹುನ್ನಾರದ ಕಾರಣದಿಂದ ಬಹುಹಿಂದಿನಿಂದಲೂ ಬಹಳ ವ್ಯವಸ್ಥಿ...

ಕೊಪ್ಪಳ

ಪದ್ಮನಯನ ಎಫೆಕ್ಟ್: ಮಟ್ಕಾಗಿರಿ ಬಂದ್

ರಿಟೈರ್ಡ್ ಆಗಿ ಹೋದ ಎಸ್ಪಿ ಸಿದ್ದಪ್ಪನ ಅವಧಿಯಲ್ಲಿ ಮಸ್ತಾಗಿ ಚಿಗುರಿ, ಪೊಗದಸ್ತಾಗಿ ನಡೆಯುತ್ತಿದ್ದ ಕೊಪ್ಪಳ ಜಿಲ್ಲೆಯ ಮಟ್ಕಾ ಈಗ ಹಳೇ ಎಸ್ಪಿ ಪದ್ಮನಯನರ ಇನ್‌ಚಾರ್ಜಿಂಗ್‌ನಲ್ಲಿ ಅಡ್ಡ-ಉದ್ದ ಮಲಗಿಬಿಟ್ಟಿದೆ. ಚಳಿಯಲ್ಲೂ ಊರು ಬಿಟ್ಟಿದ್ದ ಉಮಚಗಿ ಗವಿಸಿದ್ಧನಂತಹ ಹಲಾಲುಕೋರರು ತಿರುಪತಿ ಸುತ್ತಾಡಿ ತಲೆ ಬೋಳಿಸಿಕೊಂಡು ಮತ್ತೇ ವಾಪಸ್ಸಾಗುತ್ತಿದ್ದಾರೆ.

ಹಿಂದೆ ಕೊಪ್ಪಳದಲ್ಲಿದ್ದಾಗಲೇ ಮಟ್ಕಾ ದಂಧೆಯನ್ನು ಚವುಟಿ ಹಾಕಿದ್ದ ಪದ್ಮನಯನರು ಪಕ್ಕದ ರಾಯಚೂರಿಗೆ ವರ್ಗವಾಗಿ ಹೋಗಿ ಈಗ ಮತ್ತೆ ಅವರೇ ಅದನ್ನು ಕಟ್ ಮಾಡಬೇಕಾಗಿರುವುದು ಜನರ ದುರ್ದೈವ.

2006ರ ಮಾರ್ಚ್ 1ರ ಲಂಕೇಶ್ ಸಂಚಿಕೆಯಲ್ಲಿ 'ಕೊಪ್ಪಳ: ಮಟ್ಕಾಧಿಪತಿಗಳ ಸಪ್ಪಳ' ವರದಿ ಪ್ರಕಟವಾದ ಮೇಲೆ ಪೊಲೀಸರು ನಿದ್ದೆಯಿಂದೆದ್ದು ನಡೆಸಿದ ಕಾರ್ಯಾಚರಣೆಯ ಪರಿಣಾಮವಾಗಿ ಶೇ.50ರಷ್ಟು ಮಟಕಾ ಹಾವಳಿ ಬಂದ್ ಆಗಿತ್ತು. ಅಲ್ಲಿಯವರೆಗೆ, ಎಸ್ಪಿ ಆಫೀಸ್‌ನ ಕಾಂಪೌಂಡ್‌ಗೆ ಹೊಂದಿಕೊಂಡೇ ಪರಶುರಾಮ ಪವಾರನ ಮಟಕಾ ಅಡ್ಡೆ ಇದೆ ಎಂಬುದು ಜಿಲ್ಲೆಗೆ ಬಂದ ಯಾವ ಎಸ್ಪಿಗೂ ಗೊತ್ತಿರಲಿಲ್ಲ, ವಿಪರ್ಯಾಸವೆಂದರೆ ಅಲ್ಲಿ ಕೆಲ ಪಿಸಿಗಳೇ ಉದ್ರಿ ಮಟಕಾ ಆಡುತ್ತಿದ್ದರು. ಫೋಟೋ ಸಮೇತ ವರದಿ ಪ್ರಕಟವಾದ ಮೇಲೆ ಪದ್ಮನಯನ ಅದನ್ನು ಎತ್ತಿಸಿ ಕಾಂಪೌಂಡ್ ಒಡೆದು ಗೇಟ್ ಫಿಕ್ಸ್ ಮಾಡಿಬಿಟ್ಟರು. ಮತ್ತೆ ಅಲ್ಲಿ ಮಾತ್ರ ಮಟಕಾ ಅಡ್ಡೆಗಳು ತಲೆ ಎತ್ತಲಿಲ್ಲ.

ಆದರೆ ಕೊಪ್ಪಳ ಮಟ್ಕಾಧಿಪತಿಗಳು ರಂಗೋಲಿ ಕೆಳಗೆ ನುಸುಳುವ ಕಲೆ ಕರಗತ ಮಾಡಿಕೊಂಡವರು. ಮೊಬೈಲ್ ನಂಬರ್‌ಗಳ ಸಮೇತ ವರದಿ ಪ್ರಕಟವಾದ ಮೇಲೆ ದಂಧೆ ಹದ್ದುಬಸ್ತಿಗೆ ಬಂದದ್ದನ್ನು ನೋಡಿ ಪರಶುರಾಮ ಹಾದಿಮನಿಯಂತಹ ಡಾನ್ ಸೊಲ್ಲಾಪುರ ಸೇರಿಬಿಟ್ಟರೆ, ಉಮಚಗಿ ಗಯ್ಯಾ ಅಪ್ಪು, ಮೇದಾರ ಬಸವ, ದಸ್ತಗೀರ್, ಉಮಚಗಿ ಜಗದೀಶ್, ಉಮಚಗಿ ಉಮೇಶ್, ಸ್ವಾಗತ ಬಸವರಾಜನಂತಹವರು ಊರನ್ನೇ ಬಿಟ್ಟರು. ಇನ್ನು ಕೆಲವರು ಪಕ್ಕದ ಕಾರ್ಖಾನೆಗಳಲ್ಲಿ ದಿನಗೂಲಿಗೆ ಹೋದರೆ ಕೆಲವರು ಆಟೋಚಾಲಕರಾದರು.

ಅಂತೂ ಪದ್ಮನಯನ ಇದ್ದಷ್ಟು ದಿನ ಬಡವರು, ಕೂಲಿಕಾರರು, ಹಮಾಲಿಗಳು ಮಟ್ಕಾಕ್ಕೆ ದುಡ್ಡು ಸುರಿಯುವುದು ನಿಂತುಹೋಗಿತ್ತು. 10 ತಿಂಗಳ ಆ ಅವಧಿಯಲ್ಲಿ ಕನಿಷ್ಠ 10 ಕೋಟಿಯಷ್ಟು ಟರ್ನ್‌ಓವರ್ ಬಂದ್ ಆಗಿತ್ತು. ಯಾವಾಗ ಪದ್ಮನಯನ ಪಕ್ಕದ ರಾಯಚೂರಿಗೆ ವರ್ಗವಾದರೋ, ಕೊಪ್ಪಳಕ್ಕೆ ವಾಪಸ್ಸಾದ ಮಟ್ಕಾಧಿಪತಿಗಳು ಪೊಲೀಸರ ಜೊತೆ ಸೇರಿ ಹೋಳಿ ಹಬ್ಬ ಆಚರಿಸಿದರು. ಏಕೆಂದರೆ ತಮ್ಮ ದಂಧೆಗೆ ಕಂಟಕವಾಗಿದ್ದ ಪದ್ಮನಯನ ತೊಲಗಿದ್ದು ಒಂದು ಖುಷಿಯಾದರೆ, ಅವರ ಸ್ಥಾನಕ್ಕೆ ಸಿದ್ದಪ್ಪ ಬಂದದ್ದು ಇನ್ನೊಂದು ಖುಷಿ. ಈಗಾಗಲೇ, ಹಾವೇರಿಯನ್ನು ಗುಡಿಸಿ ಗುಂಡಾಂತರ ಮಾಡಿ ಹಳ್ಳ ಹಿಡಿಸಿರುವ ಸಿದ್ದಪ್ಪ ಮಟ್ಕಾ ದಂಧೆಗೆ ಬೆನ್ನೆಲುಬಾಗಿ ನಿಲ್ಲಬಲ್ಲ ಆಸಾಮಿ.

ಸಿದ್ದಪ್ಪನ ಎಸ್ಪಿಗಿರಿ ಯಾವ ಪರಿ ಇತ್ತೆಂದರೆ ಒದ್ದು ಒಳಗೆ ಹಾಕಬೇಕಾದ ಪೊಲೀಸರು ದಿವಟರ್ ಸರ್ಕಲ್‌ನಲ್ಲಿ ಮಟ್ಕಾದವರೊಂದಿಗೆ ಕಷ್ಟಸುಖ ಮಾತಾಡತೊಡಗಿದರು. ಅದರ ಪರಿಣಾಮವಾಗಿ ಉಮಚಗಿ ಗಯ್ಯನ ಅಳಿಯ ಸುರೇಶ್ ಹಾಡುಹಗಲೇ ನಡುರೋಡಲ್ಲಿ ಅದೂ ಸರ್ಕಲ್, ರೂರಲ್, ಟೌನ್ ಸ್ಟೇಷನ್ ಠಾಣೆಗಳಕೊಂಡಿಯಾಗಿರುವ ದಿವಟರ್ ಸರ್ಕಲ್‌ನಲ್ಲಿ ನಂಬರ್ ಬರೆಯತೊಡಗಿದ. ಅತ್ತ ಆಜಾದ್ ಸರ್ಕಲ್‌ನಲ್ಲಿ, ಫಕೀರಪ್ಪ ಹಾದಿಮನಿಯ, ಇತ್ತ ಬನ್ನಿಕಟ್ಟೆಯಲ್ಲಿ ರೆಡ್ಡಿಯ ಹಾವಳಿ ವಿಪರೀತವಾಯಿತು. ಅಲ್ಲದೇ ಸಾಚಾ ರಮೇಶ್ ಸಂಜೆ ಹೊತ್ತಿಗೆ ಸಂಚಾರಿ ಏಜೆಂಟನಾಗಿ ದಿನಕ್ಕೆ 40 ಸಾವಿರದಷ್ಟು ಕಲೆಕ್ಷನ್ ಮಾಡತೊಡಗಿದ. ಬರುಬರುತ್ತಾ ತಾನೇ ಸಣ್ಣ ಪ್ರಮಾಣದ ಡಾನ್ ಕೂಡ ಆದ.

ಇನ್ನೊಂದೆಡೆ ಕೆಲ ಪೇದೆಗಳು, ಸ್ನೇಹ ರೆಸ್ಟೋರೆಂಟ್‌ನಲ್ಲಿ ಡಾನ್ ಪರಶುರಾಮ ಹಾದಿಮನಿಯೊಂದಿಗೆ ಕುಡಿದು, ತಿಂದು ಅವನು ಕೊಟ್ಟಷ್ಟು ಶಿವಾ ಅಂತ ಜೇಬಿಗಿಟ್ಟುಕೊಂಡು ಬರುತ್ತಿದ್ದರು. ಆದರೆ ಇಂಥವೆಲ್ಲ ಪಿಎಸ್‌ಐ ಸಲೀಂ ಪಾಷಾನಂತಹವರ ಗಮನಕ್ಕೆ ಬರಲೇ ಇಲ್ಲ. ಮೊದಲು ರೋಡ್‌ನಲ್ಲಿದ್ದ ಮಟಕಾ ಗಲ್ಲಿಗಲ್ಲಿಗೂ, ಮನೆಮನೆಗೂ ಹೊಕ್ಕು ಜನ ತತ್ತರಿಸುತ್ತಿದ್ದರೆ ಈ ಸಿದ್ದಪ್ಪ ಯಾವಾಗ ಹೋಗ್ತಾನೇ ಅಂತ ನಿಟ್ಟುಸಿರು ಹಾಕಿದವರೇ ಹೆಚ್ಚು. ಅದಕ್ಕಿಂತ ಹೆಚ್ಚಿಗೆ ಇನ್ನೇನು ಮಾಡಲು ಸಾಧ್ಯವಿತ್ತು.

ಕೊನೆಗೆ ನವೆಂಬರ್ 30ರಂದು ಡ್ಯೂಟಿಯಿಂದ

ನಿಷ್ಠಾವಂತ ಸ್ನೇಹಿತ ಸಿಕ್ಕವನಿಗೆ ಖಜಾನೆಯೂ ಸಿಕ್ಕುಬಿಡುತ್ತದೆ -ಯಹೂದಿ ಗಾದೆ

ವಾಗಿ ಮೈಸುಗರ್‌ಅನ್ನು ಸಪ್ಪಕ್ಕೆ ದೂಡುತ್ತಾ ಬರಲಾಗಿದೆ. ಇದು ನಮ್ಮ ಎಲ್ಲಾ ಸರ್ಕಾರಗಳ ಜಾಗತೀಕರಣ, ಖಾಸಗೀಕರಣ ನೀತಿಗಳ ಭಾಗವೆಂದು ಬೇರೆ ಹೇಳ ಬೇಕಿಲ್ಲ.

ಮೈಸುಗರ್‌ನ ಈ ಸಮಸ್ಯೆಯ ಕಾರಣದಿಂದ ಕಾರ್ಖಾನೆಯು ಎಷ್ಟೇ ಅರೆದರೂ ಇದುವರೆಗೆ ಒಪ್ಪಿಗೆ ಮಾಡಿಕೊಂಡಿರುವ ಕಬ್ಬನ್ನು ಅರೆಯುವುದು ಪೂರ್ಣ ವಾಗುವುದಿಲ್ಲ. ಇನ್ನು ಒಪ್ಪಿಗೆ ರಹಿತ ಕಬ್ಬನ್ನಂತೂ ಕೇಳುವವರು ದಿಕ್ಕಿಲ್ಲ. ಆಲೆಮನೆಯವರು ಟನ್‌ಗೆ 300ರಿಂದ 500ರೂತನಕ ಮಾತ್ರ ಕೇಳುತ್ತಿದ್ದಾರೆ. ಈ ಎಲ್ಲಾ ಕಾರಣಗಳಿಂದ ಇಲ್ಲಿನ ರಾಜ್ಯ ರೈತ ಸಂಘದ ಒಂದು ಬಣ, ಕರ್ನಾಟಕ ಜನಪರ ವೇದಿಕೆ ಮತ್ತು ರಕ್ಷಣಾ ವೇದಿಕೆಯ ಜಯರಾಮ್ ನೇತೃತ್ವದ ಬಣಗಳು ಸೇರಿ ಮಂಡ್ಯ ತಾಲೂಕಿನ ಹಳ್ಳಿಗಳಲ್ಲಿ ಡಿಸೆಂಬರ್ 19ರಿಂದ 28ರವರೆಗೆ ಜನಜಾಗೃತಿ ಜಾಥಾವನ್ನು ನಡೆಸಿದವು. ಈ ಮಧ್ಯೆ 24ರಂದು ಡಿಸಿಯವರಿಗೆ ಇನ್ನೊಮ್ಮೆ ಮನವಿಯನ್ನೂ ಅರ್ಪಿಸಿ, 29ರಂದು ರಸ್ತೆ ತಡೆ ಮಾಡುವುದಾಗಿ ಘೋಷಿಸಿದವು.

ಸಾಕಷ್ಟು ಪೂರ್ವ ಸೂಚನೆ, ಎಚ್ಚರಿಕೆಗಳನ್ನು ನೀಡಿ ರಸ್ತೆ ತಡೆ ಮಾಡಲು ಹೊರಟ ರೈತರೊಡನೆ ಪೊಲೀಸ್ ಸಿಬ್ಬಂದಿಯ ಮೂಲಕ ರಾಜ್ಯಪಾಲರ ಆಡಳಿತ ನಡೆದು ಕೊಂಡ ರೀತಿಯಂತೂ ಅತ್ಯಂತ ಅಕ್ಷಮ್ಯವಾದುದು. ಯಾವ ರಸ್ತೆ ತಡೆ ಮಾಡುವುದಕ್ಕಿಂತ ಮುಂಚೆಯೇ ರಸ್ತೆಯಿಂದ ಒಂದಷ್ಟು ದೂರದಲ್ಲಿ ಅಡುಗೆ ಮಾಡಲು ತಯಾರಿ ನಡೆಸುತ್ತಿದ್ದಾಗಲೇ ಬಂದು ಅಲ್ಲಿದ್ದ ಪಾತ್ರೆ ಇತ್ಯಾದಿಗಳನ್ನು ವಶಕ್ಕೆ ತೆಗೆದುಕೊಂಡ ಪೊಲೀಸರು ನಂತರ ಹೋರಾಟಗಾರರನ್ನು ಬಂಧಿಸಲಾರಂಭಿಸಿದರು. ತಂಡೋಪತಂಡವಾಗಿ ಬರುತ್ತಿದ್ದ ಎಲ್ಲಾ ರೈತರನ್ನೂ ಬಂಧಿಸಿದರು. ಸ್ವಯಂಪ್ರೇರಿತರಾಗಿ ವಾಹನಗಳಲ್ಲಿ ಬರುತ್ತಿದ್ದ ರೈತರನ್ನು ತಡೆದು ಮಂಡ್ಯದ ಹೊರ ಭಾಗಗಳಿಂದಲೇ ವಾಪಸ್ಸು ಕಳಿಸಲಾಯಿತು.

ರೈತರು ಮತ್ತು ಅವರನ್ನು ಮುನ್ನಡೆಸುತ್ತಿದ್ದ ಕರ್ನಾಟಕ ರಾಜ್ಯ ರೈತ ಸಂಘ, ಕರ್ನಾಟಕ ಜನಪರ ವೇದಿಕೆ ಮತ್ತು ಇತರ ಸಂಘಟನೆಗಳು ಮುಂದಿಟ್ಟಿದ್ದ ಬೇಡಿಕೆ ಅತ್ಯಂತ ನ್ಯಾಯಯುತವಾಗಿತ್ತು, ಅಲ್ಲಿಯವರೆಗೆ ಸಾಧ್ಯವಿದ್ದ ಎಲ್ಲಾ ಕ್ರಮಗಳಿಂದ ತಮ್ಮ ಹಕ್ಕೊತ್ತಾಯಗಳನ್ನು ಸರ್ಕಾರದ ಗಮನಕ್ಕೂ ತಂದು ನಂತರ ರಸ್ತೆ ತಡೆ ಮಾಡಲು ಹೊರಟವರನ್ನು ತಡೆದದ್ದು ಪ್ರಜಾಪ್ರಭುತ್ವಕ್ಕೆ ಬೆಲೆ ತರುವಂಥದ್ದು ಅಲ್ಲ. ಈಗಾಗಲೇ ಭದ್ರಾವತಿ ಮತ್ತು ಹೊಸಪೇಟೆಗಳಲ್ಲಿ ಇದೇ ವಿಚಾರಕ್ಕೆ ಬಂದ್ ಆಚರಿಸಲಾಗಿದೆ. ರೈತಸಂಘದ ಪುಟ್ಟಣ್ಣಯ್ಯ ಬಣ ಜನವರಿ ತಿಂಗಳಲ್ಲಿ ರಾಜಭವನ ಚಲೋ ಮತ್ತು ಜೈಲ್‌ಭರೋ ಕಾರ್ಯಕ್ರಮವನ್ನು ರೂಪಿಸುವುದಾಗಿ ಹೇಳಿದೆ. ಈ ಎಲ್ಲಾ ಸಂಘಟನೆಗಳು ಮತ್ತು ಚಳವಳಿಗಳು ಒಂದೆಡೆ ಸೇರಿ ರೈತರ ಬದುಕಿನ ಹೋರಾಟಕ್ಕೆ ಒಂದು ಸ್ಪಷ್ಟ ದಿಕ್ಕು ಮತ್ತು ಸ್ವರೂಪವನ್ನು ನೀಡಬೇಕಾದ್ದು ಇಂದಿನ ಅಗತ್ಯವಾಗಿದೆ.

-ಡಾ.ವಾಸು ಎಚ್.ವಿ

ಲಂಡನ್‌ನಲ್ಲಿ ರಾಧಿಕಾಗೆ ಮಗು...!



ನಟಿ ರಾಧಿಕಾಗೆ ಗಂಡು ಮಗುವಾಗಿದೆ.

ಅಚ್ಚ ಕನ್ನಡದ 'ಮಣ್ಣಿನ ಮೊಮ್ಮಗು' ಇದು! ಕಳೆದ ಜುಲೈ-ಆಗಸ್ಟ್ ತಿಂಗಳಿಂದಲೇ ಸಾರ್ವಜನಿಕವಾಗಿ ಎಲ್ಲೂ ಕಾಣಿಸಿಕೊಂಡಿರದಿದ್ದ ರಾಧಿಕಾ ಡಿಸೆಂಬರ್ ಮಧ್ಯಭಾಗದಲ್ಲಿ ನೇರ ಲಂಡನ್‌ಗೆ ಹಾರಿ ಹೋಗಿದ್ದಳು. ಅವತ್ತು ಹೀಥ್ರೂ ಏರ್‌ಪೋರ್ಟಿನಲ್ಲಿ ರಾಧಿಕಾಳನ್ನು ಅಲೆಮಾರಿ ಕನ್ನಡಿಗ ವೈದ್ಯರೊಬ್ಬರು ನೋಡಿದ್ದೂ ಉಂಟು. ಈಗ ರಾಧಿಕಾ ಲಂಡನ್‌ನ ಯಾವ ಆಸ್ಪತ್ರೆಯಲ್ಲಿದ್ದಾಳೆಂಬುದು ಗೊತ್ತಿಲ್ಲ. ಅಲ್ಲಿ ಸಾಮಾನ್ಯ ಮಹಿಳೆಯರು ಹೆರಿಗೆಗೆಂದು ಸಾಮಾನ್ಯ ಆಸ್ಪತ್ರೆಗಳಿಗೆ ಹೋದರೆ ಅಸಾಮಾನ್ಯ ಶ್ರೀಮಂತ ಸ್ತ್ರೀಯರಿಗೆ ಪ್ರತ್ಯೇಕ ಮೆಟರ್ನಿಟ್ ಹೋಂಗಳಿವೆ. ಇವು ಹೆರಿಗೆಗೆಂದೇ ಮೀಸಲಾಗಿರುವ, ಪ್ರತ್ಯೇಕ ಡಾಕ್ಟರು, ನರ್ಸ್‌ಗಳಿರುವ ವ್ಯವಸ್ಥೆ. ಶುಲ್ಕ ಬಲು ದುಬಾರಿ, ಹತ್ತಿರತ್ತಿರ 10 ಲಕ್ಷ ರೂಪಾಯಿವರೆಗೂ ಖರ್ಚಾಗುವ ಬಾಬ್ತು. ಆದರೆ ಇತ್ತೀಚಿನ ದಿನಗಳಲ್ಲಿ ಆಗರ್ಭ ಶ್ರೀಮಂತ ಮಹಿಳೆಯಾಗಿ ಭಡ್ತಿ ಪಡೆದಿರುವ ರಾಧಿಕಾಗೆ ದುಡ್ಡಿನ ಬಗ್ಗೆ ಯೋಚಿಸುವ ಅಗತ್ಯವಿಲ್ಲ ಬಿಡಿ. ಜನತಾದಳ ಸರ್ಕಾರವಿದ್ದಾಗ ಬೇಕಾದಷ್ಟು ತಿಜೋರಿ ಹಣ ಹರಿದು ಆಕೆಯ ಕೈ ಸೇರಿತ್ತು.

ಕೆಲವು ಮಕ್ಕಳು ಹುಟ್ಟುವಾಗಲೇ ಅದೃಷ್ಟವನ್ನು ಹೊತ್ತು ತರುತ್ತವೆಂಬ ನಂಬಿಕೆ ನಮ್ಮ ಜನರಲ್ಲಿದೆ, ಹೌದು ತಾನೆ?

ಈಗ ರಾಧಿಕಾ ಮಗುವಿನ ವಿಚಾರವನ್ನೇ ತಗೊಳ್ಳಿ.

ಈ ಮಗು ಹುಟ್ಟಿದ ಗಳಿಗೆಯಲ್ಲೇ ರಾಜ್ಯದಲ್ಲಿ ಪ್ರವಾಹ ಇಳಿಮುಖವಾಗಿ ಬೆಳೆ ಚೆನ್ನಾಗಿ ಆಗುವಂತಾಗಿದೆ. ರಾಜ್ಯ ರಾಜಕೀಯದ ಗೊಂದಲಗಳೆಲ್ಲಾ ತೊಲಗಿ, ಬಿಜೆಪಿಯ ಯಡಿಯೂರಪ್ಪ ಅಧಿಕಾರದಿಂದ ಕೆಳಗಿಳಿದಿದ್ದಾರೆ. ಬೆಂಗಳೂರಿನ ಜನರ ಮನರಂಜನೆಗೆ ಜೆಮಿನಿ ಸರ್ಕಸ್ ಕಂಪನಿ ಬಂದಿದೆ ಹಾಗೂ ಅತೀ ಮುಖ್ಯವಾಗಿ ಮಣ್ಣಿನ ಮಗ, ಮಾಜಿ ಸಿಎಂ ಕುಮಾರಸ್ವಾಮಿ ಆಪತ್ತಿನ ಹೃದಯ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಈಗ ಆರೋಗ್ಯದಿಂದ ಇರುವಂತಾಗಿದೆ.

ಇದು ರಾಧಿಕಾಗೂ ನೆಮ್ಮದಿ ತರುವಂಥ ವಿಚಾರ ಅಲ್ಲವಾ?

ಇದರಲ್ಲಿ ರವಿ ಬೆಳಗೆರೆಯ 'ಮುಖ್ಯಮಂತ್ರಿ ಐ ಲವ್ ಯೂ' ಸಿನಿಮಾ ಟೀಂಗೆ ಮಾತ್ರ ಸ್ವಲ್ಪ ಗೊಂದಲವಾಗಬಹುದು. ಯಾಕೆಂದರೆ ಅದರಲ್ಲಿ ರಾಧಾ ಎಂಬ ಪಾತ್ರ ಮಾತ್ರವಿದೆ, ಆದರೀಗ ಆ ರಾಧಾಗೆ ಮಗು ಬೇರೆ ಹುಟ್ಟಿದೆಯಲ್ಲ.

ಯಾರು ಏನೇ ಲಾಗ ಹಾಕಿದರೂ ಸದ್ಯಕ್ಕಂತೂ ರಾಧಿಕಾ ಮಗನ ಮುಖ ದರ್ಶನ ಯಾರಿಗೂ ಸಿಗುವ ಸಾಧ್ಯತೆಗಳಿಲ್ಲ. ಕಳೆದ ಆರು ತಿಂಗಳಿಂದಲೂ ಹೊರಗೆಲ್ಲೂ ಕಾಣಿಸಿಕೊಳ್ಳದೆ ತನ್ನ ಸಿನಿಮಾ ಹಂಚಿಕೆ, ನಿರ್ಮಾಣದ ವ್ಯವಹಾರಗಳನ್ನು ರಾಧಿಕಾ ಒಂದೋ ಮನೆಯಲ್ಲೇ ಇರುತ್ತಾ ಫೋನ್‌ನಲ್ಲೇ ಮುಗಿಸಿಕೊಳ್ಳುತ್ತಿದ್ದಳು. ಉಳಿದಂತೆ ಆಕೆಯ ತಮ್ಮ ರವಿರಾಜ್ ಅದನ್ನೆಲ್ಲಾ ನಿರ್ವಹಿಸುತ್ತಿದ್ದ. ಆದರೆ ಈ ರವಿರಾಜ್ ಶತದಡ್ಡನೆಂದು ಗಾಂಧಿನಗರದಲ್ಲಿರುವ ಎಲ್ಲರಿಗೂ ಗೊತ್ತಾಗಿ ಹೋಗಿದೆ. ಯಾವಾಗ ಈ ಅಕ್ಕ-ತಮ್ಮ ಅನಾಥರು, ಈಶ್ವರ್ ಥರದ ಆವರೇಜ್ ಸಿನಿಮಾಗಳಿಗೂ ಕೋಟ್ಯಂತರ ರೂಪಾಯಿ ಕೊಟ್ಟು ಹಂಚಿಕೆ ಹಕ್ಕು ಖರೀದಿ ಮಾಡಿದರೋ ಆಗಲೇ ಈಪಾಟಿ ದುಡ್ಡು ಅವರ ಸ್ವಂತದ್ದಲ್ಲ ಎಂಬುದು ಜಗಜ್ಜಾಹೀರಾಗಿತ್ತು. ಏನಾಶ್ಚರ್ಯ ಅಂದರೆ ಈ ಸಿನಿಮಾಗಳಿಂದಾಗಿ ಐದಾರು ಕೋಟಿ ಲಾಸ್ ಆದರೂ ಇರುವೆ ಕಚ್ಚಿದಷ್ಟು ನೋವೂ ತೋರಿಸಿಕೊಳ್ಳದೆ ರಾಧಿಕಾ ತಾನೇ ಸ್ವಂತ ಸಿನಿಮಾ ನಿರ್ಮಿಸಲು ಹೊರಟಿದ್ದರು. ಎಂ.ಡಿ. ಶ್ರೀಧರ್ ನಿರ್ದೇಶಿಸಲಿರುವ ಈ ಸಿನಿಮಾದ ಕತೆ ಏನಂಥ ಮಾತ್ರ ಗೊತ್ತಾಗಿಲ್ಲ.

ಕಳೆದ ಎರಡು ವರ್ಷಗಳಿಂದ ಸಿನಿಮಾದ ಆಚೆಗಿನ ಘಟನೆಗಳಲ್ಲೇ ರಾಧಿಕಾ ಜಾಸ್ತಿ ಸುದ್ದಿ ಮಾಡಿದ್ದಳು ಬೋಂಡಾ-ಕಬಾಬು ಮಾರುತ್ತಿದ್ದ ಸಾಧಾರಣ ಫ್ಯಾಮಿಲಿಯಿಂದ ಬಂದು ಪ್ರತಿಭಾವಂತ ಸಿನಿಮಾ ನಟಿ ಎನಿಸಿಕೊಂಡರೂ ರಾಧಿಕಾಗೆ ಹಣ-ಹೆಸರು ಯಾವುದೂ ಸಿಕ್ಕಿರಲಿಲ್ಲ. ಹಾಗಿದ್ದಾಗ್ಯೂ ಸದಾಶಿವನಗರದಲ್ಲಿ 10 ಕೋಟಿ ರೂ. ನೀಡಿ ಬಂಗಲೆ ಕೊಂಡಳು. ಸ್ವತಃ ಇನ್‌ಕಂ ಟ್ಯಾಕ್ಸ್ ದಾಳಿ ಆಹ್ವಾನಿಸಿಕೊಳ್ಳುವಷ್ಟರ ಲೆವೆಲ್‌ಗೆ ಈಕೆಯ ಹಣಕಾಸಿನ ವ್ಯವಹಾರಗಳು ಬೆಳೆದಿದ್ದವು.

ಎಲ್ಲಾ ಕುಮಾರಕೃಪೆ....!

ಅಂದಹಾಗೆ ರಾಧಿಕಾಗೆ ಗಂಡು ಮಗುವಾದ ಸುದ್ದಿ ಕೇಳಿ,

"ನಮ್ದೂಕೆ ಜಂತಾದಳ ಪಾರ್ಟಿಗೆ ಹೊಸ ಮೆಂಬ್ರು ಬಂದ್ರು. ಇನ್ನು ಇಪ್ಪತ್ತು ವರ್ಷ ಆದ್ಮೇಲೆ ಅವರೇ ಲೀಡ್ರೂ ಆಯ್ತಾರೆ."

ಅಂತಿದ್ದರಂತೆ ಮೆರಾಜುದ್ದೀನ್ ಪಟೇಲ್. ಇದು ಜೆಡಿಎಸ್ ಆಫೀಸಿನಲ್ಲಿ ನಮ್ಮ ಕಿವಿಗೆ ಬಿದ್ದ ಜೋಕ್.

ರಿಟೈರ್ಡ್ ಆದ ಸಿದ್ದಪ್ಪನ ಜಾಗಕ್ಕೆ ಯಾವ ಪುಣ್ಯಾತ್ಮ ಬರ್‍ತಾನೇ ಅಂತ ಕಾದಿದ್ದವರಿಗೆ ಭರವಸೆಯಾಗಿ ಆದರೆ ಕೇವಲ ಇನ್‌ಚಾರ್ಜ್ ಎಸ್ಪಿಯಾಗಿ ಬಂದಿರುವುದು ಹಳೆ ಎಸ್ಪಿ ಪದ್ಮನಯನ. ಕೊಪ್ಪಳವು ಹಿಂದೆ ಕೂಡ ಇನ್‌ಚಾರ್ಜ್ ಎಸ್ಪಿಗಳನ್ನು ಕಂಡಿದೆ. ಆದರೆ ಅವರ್‍ಯಾರು ಪದ್ಮನಯನ ಕೊಟ್ಟ ಬಿಸಿ ಕೊಟ್ಟಿರಲಿಲ್ಲ, ಕೇವಲ 20 ದಿನಗಳ ಅವಧಿಯಲ್ಲಿ ಮಟ್ಕಾ ನಿಯಂತ್ರಣ ಉತ್ತಮವಾಗಿದೆ. ಮಟ್ಕಾ ನಂಬರ್ ಬರೆದುಕೊಳ್ಳುವ ಲಫಂಗರು ಊರೇ ಬಿಟ್ಟಿದ್ದಾರೆ. ಇಷ್ಟು ದಿನ ದುಡಿದಿದ್ದದನ್ನು ಖರ್ಚು ಮಾಡುತ್ತಾ ಬಿಟ್ಟಿಯಾಗಿ ಗಳಿಸಿದ ಹಣವನ್ನು ಧರ್ಮಸ್ಥಳ, ಹೊರನಾಡು, ತಿರುಪತಿ ದೇವರ ಹುಂಡಿಗೆ ದಕ್ಷಿಣೆ ಹಾಕಿ ತಲೆಗೂದಲು ಕೊಟ್ಟು ಬಂದಿದ್ದಾರೆ.

ಆದರೆ ಕೊಪ್ಪಳ ಪೊಲೀಸ್ ಠಾಣೆಯಿಂದ ತಪ್ಪಿಸಿಕೊಂಡು ಓಡಿಹೋಗಿರುವ ಸುರೇಶ್ ಎಂಬ ಮಟ್ಕಾ ಏಜೆಂಟ್ ಇವತ್ತಿಗೂ ಸಿಕ್ಕಿಲ್ಲ. ತಿರುಪತಿಯಿಂದ ಬಂದ ಮೇಲೆ ಉಮಚಗಿ ಗಯ್ಯಾ ಮತ್ತೆ ತನ್ನ ಚಾಳಿ ರಹಸ್ಯವಾಗಿ ಮುಂದುವರೆಸಿದ್ದಾನೆಂಬ ಸುದ್ದಿಯಿದೆ. ಜೋಟಾಜೋಟು ಜಾಲ ಮಟ್ಕಾ ವ್ಯವಹಾರದಲ್ಲಿ ಲೀನವಾಗಿದೆ ಎಂಬ ಗುಲ್ಲೂ ಎದ್ದಿದೆ.

ಕೊಪ್ಪಳ ಜಿಲ್ಲೆಯಲ್ಲಿ ಒಂದಿಷ್ಟು ಭರವಸೆ ಮೂಡಿಸಿರುವ ಪದ್ಮನಯನರು ಅಂದರ್‌ಬಾಹರ್ ಸೆಂಟರ್‌ಗಳತ್ತಲೂ ಕೊಂಚ ಗಮನ ಹರಿಸಲಿ.

-ವರದಿಗಾರ

ಬೆನಜೀರ್

(3ನೇ ಪುಟದಿಂದ)

ಇದೆಲ್ಲದರ ಮಧ್ಯೆ ಜೈಲಧಿಕಾರಿಗಳಿಂದ ಆಕೆಯನ್ನು ಸದ್ಯದಲ್ಲೇ ಗಲ್ಲಿಗೇರಿಸುವ ಬೆದರಿಕೆಗಳು. ಗಲ್ಲಿಗೇರು ವುದಕ್ಕಿಂತ ಆತ್ಮಹತ್ಯೆಯೇ ವಾಸಿ ಎಂದು ಆಕೆ ನಿರ್ಧರಿಸಿ ತನ್ನ ಜೀವವನ್ನು ಆಕೆಯೇ ಅಂತ್ಯಗೊಳಿಸಲಿ ಎಂದು ಆಗಾಗ್ಗೆ ಅವಳ ಕೊಠಡಿಯಲ್ಲಿ ವಿಷದ ಬಾಟಲಿಯನ್ನು ಇಡುತ್ತಿದ್ದರು. ಆದರೆ ಧೈರ್ಯಶಾಲಿ ಬೆನಜೀರ್ ಹೆದರಲಿಲ್ಲ, ಹೇಡಿಯಂತೆ ಆತ್ಮಹತ್ಯೆಗೆ ಶರಣಾಗಲಿಲ್ಲ, ಬದಲಾಗಿ ತನ್ನ ಧರ್ಮದ ಮೊರೆಹೊಕ್ಕಳು. "ನೀವು ನನ್ನಿಂದ ಎಲ್ಲವನ್ನು ಕಸಿದುಕೊಂಡಿದ್ದರೂ ನನ್ನ ದೇವರನ್ನು ನನ್ನಿಂದ ಕಸಿಯಲಾರಿರಿ" ಎಂದುಕೊಂಡ ಬೆನಜೀರ್ ಪ್ರಾರ್ಥಿಸಲಾರಂಭಿಸಿದಳು. ದಯಾಮಯದೇವ ಪ್ರತಿ ವ್ಯಕ್ತಿಯ ಶಕ್ತಿಗನುಸಾರವಾಗಿ



ಅವರ ಮೇಲೆ ಹೊರೆ ಹೊರುತ್ತಾನೆಂದೇ ನಂಬಿದ ಬೆನಜೀರ್ ತನಗೆ ಈ ಶಿಕ್ಷೆಯನ್ನೂ ಅನುಭವಿಸಿ ಜಯಗಳಿಸುವ ಶಕ್ತಿ ಇದೆ ಎಂದೇ ನಂಬಿದಳು. ಅದು ಆಕೆಯಲ್ಲಿ ಮತ್ತಷ್ಟು ಛಲವನ್ನು ಮೂಡಿಸಿತು.

ಈ ಕಾರಣಕ್ಕಾಗಿಯೇ ಆಕೆಯ ಮಿತ್ರರೊಬ್ಬರು "ಬೆನಜೀರ್ ರ್‍ಯಾಡ್‌ಕ್ಲಿಫ್‌ನಲ್ಲಿ ಪದವಿ ಪಡೆದರೆ, ಆಕ್ಸ್‌ಫರ್ಡ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದರೆ, ಸುಕ್ಕೂರ್ ಜೈಲಿನಲ್ಲಿ ಪಿಎಚ್‌ಡಿ ಪಡೆದರು" ಎಂದರು.

ತಂದೆಯ ಪಕ್ಕ ಚಿರನಿದ್ರೆ

ಆ ಜಾಗದ ಹೆಸರು ಗಡಿ ಖುದಾ ಭಕ್ಷ್. ಅಲ್ಲಿ ಭುಟ್ಟೋ ವಂಶದ ಹಲವಾರು ಜನರ ಸಮಾಧಿಗಳಿವೆ. ಜುನಾಗಢ್‌ದ ಪ್ರಧಾನಮಂತ್ರಿಯಾಗಿದ್ದ ಆಕೆಯ ತಾತ ಶಾ ನವಾಜ್ ಖಾನ್ ಭುಟ್ಟೋ, ಮದುವೆಗೆ ಮುನ್ನ ಹಿಂದೂ ಲಕ್ಷ್ಮಿಬಾಯ್ ಆಗಿದ್ದ ಆದರೆ ಶಾ ನವಾಜ್‌ನನ್ನು ಮದುವೆ ಆಗಲೆಂದೇ ಇಸ್ಲಾಮ್ ಧರ್ಮಕ್ಕೆ ಮತಾಂತರ ಗೊಂಡಿದ್ದ ಅಜ್ಜಿ ಖುರ್ಷಿದ್, ದೊಡ್ಡಪ್ಪ ಸಿಕಂದರ್ ಭುಟ್ಟೋ, ತ್ರಿಪುರಸುಂದರಾಂಗನಾಗಿದ್ದ ಮತ್ತೋರ್ವ ದೊಡ್ಡಪ್ಪ ಇಮಾದ್ ಅಲಿ, ಇತರೆ ಸಂಬಂಧಿಕರ ಸಮಾಧಿಗಳು ಅಲ್ಲಿವೆ.

ಆಗ ಆಕೆಗೆ ಇನ್ನೂ 16 ವರ್ಷ ವಯಸ್ಸು. ಅಮೆರಿಕದಲ್ಲಿ ವಿದ್ಯಾಭ್ಯಾಸ ಮಾಡಲು ಹೊರಟು ನಿಂತಿದ್ದಾಳೆ. ಆದರೆ ಹೋಗುವ ಮುನ್ನ ಮಗಳನ್ನು ಗಡಿ ಖುದಾ ಭಕ್ಷ್‌ಗೆ ಕರೆದುಕೊಂಡು ಹೋದ ಜುಲ್ಫೀಕರ್ ತನ್ನ ಪೂರ್ವಿಕರ ಸಮಾಧಿಗಳ ಮಧ್ಯೆ ನಿಂತು ಮಗಳಿಗೆ ಹೇಳಿದ: "ನೀನು ದೂರದ ಊರಿಗೆ ಹೋಗುತ್ತಿದ್ದಿ. ನೀನು ನೋಡಿರದ ಜಾಗಗಳಿಗೆ ಹೋಗುತ್ತಿ, ಕಂಡರಿಯದ ವಿಷಯಗಳ ಬಗ್ಗೆ ಅರಿತು ಕೊಳ್ಳುತ್ತಿ, ಆದರೆ ನೆನಪಿನಲ್ಲಿಟ್ಟುಕೋ, ನೀನು ಎಲ್ಲಿಗೇ ಹೋದರೂ, ಏನೇ ಆದರೂ ನೀನು ಅಂತಿಮವಾಗಿ ಬರುವುದು ಇಲ್ಲಿಗೆ. ಇದು ನಿನ್ನ ಭೂಮಿ, ನಿನ್ನ ಬೇರು ಇರುವುದೇ ಇಲ್ಲಿ, ಈ ಲರ್ಕಾನಾದ ಧೂಳು, ಮಣ್ಣು ಮತ್ತು ಗಾಳಿ ನಿನ್ನ ದೇಹದಲ್ಲಿದೆ. ಹಾಗೆಯೇ ಮುಂದೊಂದು ದಿನ ನಿನ್ನ ದೇಹವೂ ಈ ಧೂಳು, ಮಣ್ಣು ಮತ್ತು ಗಾಳಿಗೆ ಸೇರುತ್ತವೆ."

ವಿಧಿಯ ಮಗಳು, ಪೌರತ್ವ ಸಂಸ್ಕೃತಿಯ ಕೂಸು, ಭುಟ್ಟೋ ವಂಶದ ಕುಡಿ, ಬೆನಜೀರ್ ಭುಟ್ಟೊ ಇವತ್ತು ತನ್ನ ದೇಶದ ಮಣ್ಣಿನಲ್ಲಿ ಮಣ್ಣಾಗಿದ್ದಾಳೆ. ಜನ್ಮ ನೀಡಿದ ತಂದೆ, ಒಡಹುಟ್ಟಿದ ಸಹೋದರರ ಸಹಿತ ಚಿರನಿದ್ರೆಯಲ್ಲಿದ್ದಾಳೆ....

-ಗೌರಿ ಲಂಕೇಶ್

ಶಹಾಪುರ:

ಮುಕ್ಕುವೀರ ದರ್ಶನಾಪುರ


ಕಲಬುರ್ಗಿ ಜಿಲ್ಲೆಯ ಶಹಾಪುರ ತಾಲೂಕಿನ ರಾಜಕೀಯವನ್ನು ಇಲ್ಲಿನ ಜಾಣ ಮತದಾರ ತನಗೆ ಹೇಗೆ ಬೇಕೋ ಹಾಗೆ ತೀರ್ಮಾನಿಸಬಲ್ಲ ತಾಕತ್ತು ಉಳ್ಳವನು. ಸ್ವಾತಂತ್ರ್ಯದ ತರುವಾಯ ಯಾರೂ ಇಲ್ಲಿ ಕಂಟಿನ್ಯೂವಾಗಿ ಎರಡು ಅವಧಿಗೆ ಗೆದ್ದು ಬಂದ ಉದಾಹರಣೆಯೇ ಇಲ್ಲ. ಇಲ್ಲಿನ ಪುಢಾರಿಗಳು ಹಣ-ಆಸ್ತಿ ಕಮಾಯಿಸಿದಾಗ, ಜನಸಾಮಾನ್ಯರ ಜೊತೆ ಅಸಭ್ಯವಾಗಿ ವರ್ತಿಸಿದಾಗ ಮತದಾರ ಚುನಾವಣೆವರೆಗೂ ಕಾದಿದ್ದು ಆಗ ತನ್ನ ಮತಚಲಾಯಿಸುವ ಮೂಲಕ ಅಭೂತಪೂರ್ವ ಉತ್ತರವನ್ನು ನೀಡುತ್ತಾ ಬಂದಿದ್ದಾನೆ.

ಜೆಡಿಎಸ್‌ದಿಂದ ಮಾಜಿ ಮಂತ್ರಿ ಶರಣಬಸವಪ್ಪ ದರ್ಶನಾಪುರ ಮೊದಲ ಸಲ ಶಹಾಪುರ ಮತಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದಾಗ ಆತ ಇಂಜಿನಿಯರ್ ಆಗಿದ್ದರಿಂದ ಕೃ.ಮೇ.ಯೋ ಅಭಿವೃದ್ಧಿ ಹೊಂದಿ ಇಡೀ ತಾಲೂಕು ನೀರಾವರಿಯಿಂದ ಭರಪೂರವಾಗಬಹುದು ಎಂದು ಮತದಾರ ಅಂದುಕೊಂಡಿದ್ದ. ಆದರೆ ಅಳಿಯನ ಕುರುಡು ಇರುಳಾಗುತ್ತಲೇ ಬಯಲಾಯಿತು ಎನ್ನುವಂತೆ ಹೆಗಡೆ ಸರಕಾರದಲ್ಲಿ ವಿದ್ಯುತ್ ಖಾತೆಯ ಮಂತ್ರಿಯಾಗುತ್ತಲೇ ದರ್ಶನಾಪುರ "ತನ್ನ ಬದುಕಿನ ಆರ್ಥಿಕ ಕತ್ತಲನ್ನೇ ಕಳೆದುಕೊಂಡ". ಜೊತೆಗೆ ತನ್ನ ಸುತ್ತ ಮುತ್ತ ಯಾವಾಗಲೂ ಮುಕುರಿಕೊಂಡಿರುವ ಜಾತಿಬಂಧುಗಳ ಬಡತನವನ್ನೂ ನೀಗಿಸಿಬಿಟ್ಟ. ಕಡು ಜಾತಿವಾದಿಯೂ, ಭ್ರಷ್ಟತನದಲ್ಲಿ ಎತ್ತಿದ ಕೈ ಎಂದೂ ತೋರಿಸಿಕೊಂಡ. ಇದನ್ನು ಕಂಡೂಕಾಣದಂತೆ ಸುಮ್ಮನಿದ್ದ ಮತದಾರ ದರ್ಶನಾಪುರ ಚುನಾವಣೆಯಲ್ಲಿ ಹರಿಸಿದ ಭ್ರಷ್ಟ ಹೊಳೆಯಲ್ಲಿ ತೇಲಾಡಿಯೂ ಆತನನ್ನು ಅನಾಮತ್ತಾಗಿ ಮುಳುಗಿಸಿದ.

ಆಗ ತಲೆ ಎತ್ತಿದ ಶಾಸಕನೇ "ಫೇರ್ ಅಂಡ್ ಲವ್ಲಿ" ಖ್ಯಾತಿಯ ಶಿವಶೇಖರಪ್ಪಗೌಡ ಶಿರವಾಳ. ಹೆಸರಿನ ಜೊತೆ 'ಗೌಡ' ಎಂದಿದ್ದರೂ ಎಂದೂ 'ಗೌಡಿಕೆ'ಯನ್ನು ತೋರಿಸಿದವನಲ್ಲ, ತಾಲೂಕಿನ ಬಹುತೇಕ ಜನಗಳ ಲಗ್ನ, ತೊಟ್ಟಿಲು ಕಾರ್ಯಕ್ರಮದಿಂದ ಹಿಡಿದು ಅವರಲ್ಲಿ ಹಲವರ ಅಂತಿಮ ಯಾತ್ರೆಗಳಲ್ಲೂ ಚಾಚೂತಪ್ಪದೆ ಭಾಗವಹಿಸುವುದು ಈತನ ಹೆಗ್ಗಳಿಕೆ. ಯಾರಿಗೂ ಕೇಡು ಬಗೆಯದ, ತೊಂದರೆ ಉಂಟು ಮಾಡದ, ಈರ್ಷೆಯ ರಾಜಕೀಯವನ್ನು ಎಂದೂ ಮಾಡಿದವರಲ್ಲ.

ಆದರೆ ಅದೇ ವೇಳೆಗೆ ಬೌದ್ಧಿಕ ದಾರಿದ್ರ್ಯದಿಂದ ಮಾತ್ರ ಎಂದೂ ದೂರ ಇದ್ದವನಲ್ಲ, ತನ್ನ ಸುತ್ತ ಮುತ್ತ ಹುಂಬ ಜನಗಳನ್ನು ಕಟ್ಟಿಕೊಂಡು ಬದನಾಮೆ ಆಗುವುದೇ ಶಿವಶೇಖರಪ್ಪನ ಕ್ರೆಡಿಟ್. ಶಾಸಕನಾಗುತ್ತಲೇ ಧರ್ಮಸಿಂಗ್ ಸುತ್ತ ತಿರುಗಾಡುತ್ತಿದ್ದರೆ, ಶಾಸಕರ ಭವನದಲ್ಲಿ ಕುಳಿತು ಇಸ್ಪಿಟ್ ಎಳೆಗಳನ್ನು ತಟ್ಟುತ್ತಿದ್ದರೆ ಶಹಾಪುರ ಕ್ಷೇತ್ರದ ಕಾಮಗಾರಿಗಳು ನೆನಪಾಗಲೂ ಸಾಧ್ಯವಾಗುವುದು ಹೇಗೆ? ಹೀಗಾಗಿ ಈತನ ಮಗ ಗುರು ಪಾಟೀಲ ತನ್ನ ಪಡ್ಡೆ ಹುಡುಗರ ಪಟಾಲಂ ಜೊತೆ ಸರಕಾರಿ ಕಚೇರಿಗಳಲ್ಲಿ ರೋಲ್‌ಕಾಲ್ ಶುರುವಿಟ್ಟುಕೊಂಡ.

ಇದನ್ನೆಲ್ಲ ಐದು ವರ್ಷಗಳ ಕಾಲ ನೋಡಿ ಬೇಸತ್ತ ಶಹಾಪುರದ ಪ್ರಜೆ 'ಹಳೆಗಂಡನ ಪಾದವೇ ಗತಿ' ಎಂಬಂತೆ ಮತ್ತೆ ಆಯ್ಕೆ ಮಾಡಿದ್ದು ಶರಣಬಸವಪ್ಪ ದರ್ಶನಾಪುರನನ್ನೇ. ಆದರೆ ಶರಣಬಸವಪ್ಪ ಈ ಬಾರಿ ಮಾತ್ರ ತನಗೆ ಸಿಕ್ಕ ಎಂ.ಎಲ್.ಎ. ಚಾನ್ಸನ್ನು ಸುಮ್ಮನೆ ವೇಸ್ಟ್ ಮಾಡಲು ರೆಡಿಯಿರಲಿಲ್ಲ.



ಶಿವಶೇಖರಪ್ಪಗೌಡ ಶಿರವಾಳ

ಹೇಗಿದ್ದರೂ ಮುಂದಿನ ಚುನಾವಣೆಯಲ್ಲಿ ಶಹಾಪುರದ ಜನ ಮತ್ತೆ ಐದು ವರ್ಷಗಳ ಕಾಲ ತನ್ನನ್ನು ಮನೆಯಲ್ಲಿ ಕೂರಿಸುವುದು ಗ್ಯಾರಂಟಿ ಎಂದು ಗೊತ್ತಾಗುತ್ತಲೆ ಲೂಟಿಯನ್ನು ಶುರುಹಚ್ಚಿಕೊಂಡರು. 'ಪೇಮೇಂಟ್ ಶೀಟ್'ನಲ್ಲಿ ಮಿನಿಸ್ಟರ್‌ಗಿರಿಯನ್ನೂ ಪಡೆದುಕೊಂಡ ದರ್ಶನಾಪುರ ಕೃಷಿ ಮತ್ತು ಮಾರುಕಟ್ಟೆಯ ಸಚಿವರಾಗಿ ಸಾಧಿಸಿದ್ದು ತನ್ನ ಖಜಾನೆಯ ಮಾರ್ಕೆಟನ್ನು ವಿಸ್ತೃತವಾಗಿ ವಿಸ್ತರಿಸಿಕೊಂಡಿದ್ದು ಮಾತ್ರ. ಹೆಸರಿಗೆ ಈತ ಜಿಲ್ಲಾ ಉಸ್ತುವಾರಿ ಮಂತ್ರಿ ಆಗಿದ್ದರೂ ಈತನಲ್ಲಿ ಲೀಡರಶಿಪ್ ಗುಣದ ಕೊರತೆಯಿಂದ ಶಹಾಪುರ ಉಸ್ತುವಾರಿ ಮಂತ್ರಿ ಮಾತ್ರ ಆಗಿದ್ದ. ಆದ್ದರಿಂದ ಈತನ ಉಸ್ತುವಾರಿಯಲ್ಲಿ ನಡೆದ ಗುಲಬರ್ಗಾ ನಗರಪಾಲಿಕೆ ಚುನಾವಣೆಯಲ್ಲಿ ಜೆ.ಡಿ.ಎಸ್ ಮಕಾಡೆ ಮಲಗಿತು.



ಇದೆಲ್ಲದರ ಮಧ್ಯೆ ಸಕಾಲಕ್ಕೆ ಆಸ್ತಿ ವಿವರವನ್ನು ಲೋಕಾಯುಕ್ತರಿಗೆ ನೀಡದೆ ಎಸ್.ಕೆ.ಕಾಂತಾ ಎಂಬ ಮಾಜಿ ಮಂತ್ರಿಯ ಕೈಗೆ ಸಿಕ್ಕು ಫಜೀತಿ ಅನುಭವಿಸಿದ. ಇದರಿಂದ ಪಾರಾಗಲು ಮತ್ತೆ ದರ್ಶನಾಪುರ ಆಯ್ಕೆ ಮಾಡಿಕೊಂಡ ದಾರಿ ಯಾವುದೆಂದರೆ ದೇವೇಗೌಡರ ಕುಟುಂಬಕ್ಕೆ ಮತ್ತೆ ಕಪ್ಪ ಕಾಣಿಕೆ ಅರ್ಪಿಸುವುದು.

ಈತನಿಗೆ ಯಾವುದೇ ತತ್ವ, ಸಿದ್ಧಾಂತ, ವಿಚಾರಗಳ ಬಗ್ಗೆ ಗೊತ್ತೂ ಇಲ್ಲ, ಅವುಗಳ ಬಗ್ಗೆ ಕೊಂಚ ಕುತೂಹಲವೂ ಇಲ್ಲ. ಈತನ ಗುರಿ ಏನಿದ್ದರೂ ಮುಕ್ಕುವುದು ಮಾತ್ರ. ಹೀಗಾಗಿಯೇ ದರ್ಶನಾಪುರನ ಸಂಬಂಧಿಗಳಾದ ಗುಂಡ ಗುರ್ತಿ ಶರಣಗೌಡ, ಸಿದ್ಧರಾಮರೆಡ್ಡಿ ಪಾಟೀಲ, ವಿಶ್ವನಾಥರೆಡ್ಡಿ ಮಾಸ್ಟರ್ ಮುಂತಾದವರು ಇಂದು ಇಡೀ ಜಿಲ್ಲೆಗೆ ಕುಬೇರರಾಗಿ ಮೆರೆಯುತ್ತಿದ್ದಾರೆ. "ಕಂಟ್ರ್ಯಾಕ್ಟರ್ ಗಿರಿ" ಎಂಬ "ಕಂತ್ರಾಟ ದಂಧೆ"ಯ ಮೂಲಕವೇ ಇವರೆಲ್ಲ ಶ್ರೀಮಂತರಾದದ್ದು ಎಂಬುದು ಇಲ್ಲಿನ ಜನಸಾಮಾನ್ಯರಿಗೆ ಗೊತ್ತಿರುವ ಸಂಗತಿಯೇ ಆಗಿದೆ.

ಸ್ವತಃ ದರ್ಶನಾಪುರರ ಕುಟುಂಬದ ಶ್ರೀಮಂತಿಕೆಯನ್ನು ವಿವರಿಸಲು ನಮ್ಮ ಪತ್ರಿಕೆಯ ಪುಟಗಳು ಸಾಕಾಗುವುದಿಲ್ಲ. ಈತನ ತಮ್ಮ ಅಮರೇಶಗೌಡ, ಕಾಕ ಬಸವರಾಜಪ್ಪಗೌಡ ಮಾಡಿಕೊಂಡ ಆಸ್ತಿಗಳನ್ನು ನೋಡಲು ನೂರಾರು ಕಣ್ಣುಗಳೂ ಸಾಲದು. ಹಿಂದೆಲ್ಲಾ ಶಹಾಪುರ ಪಟ್ಟಣ ಪ್ರದೇಶದಲ್ಲಿ ಒಂದೆರಡು ಜಾಗ ಬಿಟ್ಟರೆ ಇವರ ಹೆಸರಿಗೆ ಯಾವ ಪ್ಲಾಟ್‌ಗಳೂ ಇರಲಿಲ್ಲ. ಈಗ ಎತ್ತೆತ್ತ ನೋಡಿದರೂ ದರ್ಶನಾಪುರರ ಕುಟುಂಬದ ಪ್ಲಾಟ್‌ಗಳು, ಹೋಟೆಲ್‌ಗಳು, ಬೇನಾಮಿ ಆಸ್ತಿಗಳೇ ಕಾಣಸಿಗುತ್ತವೆ.

ಸ್ಥಳೀಯ ಪುರಸಭೆಗೆ ತನಗೆ ಬೇಕಾದ ವ್ಯಕ್ತಿಗಳನ್ನು ಅಧ್ಯಕ್ಷರನ್ನಾಗಿಸಿ ದರ್ಶನಾಪುರ ಮಾಡಿದ ದಗಾಕೋರತನ ಈಗ ಜಗಜ್ಜಾಹೀರಾಗಿದೆ. ಹಣಮಂತಗೌಡ ಎಂಬ ದರ್ಶನಾಪುರ ಸಂಬಂಧಿ ಚೀಫ್ ಆಫೀಸರ್ ಮತ್ತು ರಾಜಕುಮಾರ್ ಎಂಬ ಮಾಜಿ ಕ್ಲಾಸ್‌ಮೇಟ್ ಜೆ.ಇ. ಆಗಿದ್ದು ಇವರಿಬ್ಬರು ಶಹಾಪುರದ ಬಚ್ಚಲ ಮೋರಿ, ಗಟಾರ, ರಸ್ತೆ, ಲೈಟುಗಳು, ಕೊನೆಗೆ ಬ್ಲೀಚಿಂಗ್ ಪೌಡರ್ ಎಲ್ಲವನ್ನೂ ಮುಕ್ಕಿದ್ದು ಎಲ್ಲರಿಗೂ ಗೊತ್ತಿದೆ.

ಆದರೆ ಇದನ್ನೆಲ್ಲ 'ಎನ್‌ಕ್ಯಾಶ್' ಮಾಡಿಕೊಂಡು ಹೋರಾಟವನ್ನು ರೂಪಿಸಬೇಕಾದ ತಾಕತ್ತು ಹಾಗೂ ಜಾಣತನ ವಿರೋಧ ಪಕ್ಷವಾದ ಕಾಂಗ್ರೆಸ್ ಮುಖಂಡರಿಗೇಗಲಿ, ಮಾಜಿ ಶಾಸಕ ಶಿವಶೇಖರಪ್ಪ ಪಾಟೀಲರಿಗಾಗಲಿ ಇಲ್ಲ, ಧಾಣಾಧಂಗುರವಾಗಿ ದರ್ಶನಾಪುರ ಭ್ರಷ್ಟಾಚಾರದ ಹೊಳೆಯಲ್ಲಿ ಈಜಾಡುತ್ತಿದ್ದರೂ ಒಂದೇ ಒಂದು ಪತ್ರಿಕೆ ಬೀದಿಪಾಲಾಗಿತ್ತು.




ನಿಮ್ಮ ಶಾಸಕರು ಕಡಿದಿದ್ದೇನು?

ಕಾರವಾರ:

ಶಾಸಕನಾಗಿ ಗಂಗಾಧರ ಭಟ್ಟ ಗಳಿಸಿದ್ದೆಷ್ಟು?

ಕಾರವಾರದ ಚಡ್ಡಿ ಶಾಸಕ ಗಂಗಾಧರ ಭಟ್ಟ ತನ್ನ ಕಚ್ಚೆ ಸರಿಪಡಿಸಿಕೊಂಡು ಮತ್ತೆ ಚುನಾವಣೆಗಾಗಿ ತಾಲೀಮು ನಡೆಸುತ್ತಿದ್ದಾನೆ. ಕಳೆದ ಚುನಾವಣೆಯಲ್ಲಿ ಆತನ ವಿರೋಧಿಗಳ ಲೆಕ್ಕಾಚಾರಗಳು ತಲೆಕೆಳಗಾಗಿ ಕಡೆ ಗಳಿಗೆಯಲ್ಲಿ ಅವರಿವರ ಆಶೀರ್ವಾದದಿಂದ ಹೇಗೋ ಗೆದ್ದುಬಂದುಬಿಟ್ಟಿದ್ದ. ಈ ಬಾರಿಯೂ ಅದೃಷ್ಟ ತನಗೇ ಒಲಿಯಲಿ ಎಂದು ಹಪಹಪಿಸುತ್ತಿದ್ದಾನೆ.

ಕಾರವಾರದಲ್ಲಿ ಪ್ರಬಲ ಶಕ್ತಿ ಎಂದೇ ಗುರುತಿಸಬಹುದಾದ ಮಾಜಿ ಶಾಸಕ ದಿ. ವಸಂತ ಆಸ್ನೋಟಿಕರ್ ಅಭಿಮಾನಿಗಳ ಸಂಘದ ಬೆಂಬಲದಿಂದ ಮತ್ತು ಮಾಜಿ ಸಚಿವ ಆರ್.ವಿ. ದೇಶಪಾಂಡೆಯವರ ಕೃಪಾಕಟಾಕ್ಷದಿಂದ ಈತ ಎಮ್ಮೆಲ್ಲೆಯಾಗಿದ್ದ. ವಾಸ್ತವದಲ್ಲಿ ಆಸ್ನೋಟಿಕರ್ ಗುಂಪು ತಮ್ಮದೇ ಆದ ಕ್ಯಾಂಡಿಡೇಟ್‌ನ್ನು ಕಾಂಗ್ರೆಸ್‌ನಿಂದ ಕಣಕ್ಕಿಳಿಸಬೇಕು ಎಂದು ಪ್ರಯತ್ನಿಸುತ್ತಿದ್ದಾಗ ಮಾರ್ಗರೆಟ್ ಆಳ್ವ ಬೆಂಬಲಿತ ಅಶೋಕ್ ನಾಯ್ಕ ಮಾಡಬಾರದ ರಾಜಕೀಯ ಮಾಡಿ ಟಿಕೆಟ್ ಗಿಟ್ಟಿಸಿಕೊಂಡ. ಆಸ್ನೋಟಿಕರ್ ಅಭಿಮಾನಿಗಳ ಸಂಘದ ಅಧ್ಯಕ್ಷೆ ಮತ್ತು ವಿಧಾನಪರಿಷತ್ ಸದಸ್ಯೆ ಪುಷ್ಪಲತಾ ಆಸ್ನೋಟಿಕರ್ ಮತ್ತು ಪುತ್ರ ಆನಂದ ಆಸ್ನೋಟಿಕರ್ ಮುಂತಾದವರು ಸೇರಿಕೊಂಡು ಏನಾದರೂ ಮಾಡಿ ಅಶೋಕ್ ನಾಯ್ಕನನ್ನು ಸೋಲಿಸಿಯೇ ತೀರಬೇಕೆಂದು ಪಣತೊಟ್ಟುಬಿಟ್ಟಿದ್ದರು. ಇನ್ನೊಂದೆಡೆ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಪ್ರಭಾಕರ್ ರಾಣೆ ಕೂಡ ಇವರ ಕಟ್ಟಾ ವೈರಿಯಾಗಿದ್ದರಿಂದ ಅವನಿಗೂ ಬೆಂಬಲಿಸುವ ಹಾಗಿರಲಿಲ್ಲ, ಹೀಗಾಗಿ ಅವರೆಲ್ಲ ಬಿಜೆಪಿಯ ಗಂಗಾಧರ್ ಭಟ್‌ಗೆ ಬೆಂಬಲಿಸಿದರು. ತನ್ನ ಪಕ್ಷದ ಓಟುಗಳು, ಆಸ್ನೋಟಿಕರ್ ಅಭಿಮಾನಿಗಳ ಓಟುಗಳು ಸೇರಿ ಎಮ್ಮೆಲ್ಲೆ ಆಗಲು ಲಾಯಕ್ ಇಲ್ಲದ ಭಟ್‌ನನ್ನು ಗೆಲ್ಲಿಸಿಯೇಬಿಟ್ಟವು.



ಗಂಗಾಧರ ಭಟ್ಟ

ಗೆದ್ದಿದ್ದೇ ತಡ, ಸಿಕ್ಕಿದ್ದೊಂದು ಛಾನ್ಸು ಅಂತ ಭಟ್ ಗೆಬರಲು ನಿಂತುಬಿಟ್ಟ. ವಾಸ್ತವದಲ್ಲಿ ಬಂಗಾರ ಕೆಲಸ ಮಾಡುತ್ತಾ ತನ್ನ ಮೂಲ ಸ್ಥಳವಾದ ಗೋಕರ್ಣದಿಂದ ಬಂದಿದ್ದ ಭಟ್ ಒಂದು ಕಾಲದಲ್ಲಿ ತುತ್ತು ಕೂಳಿಗೂ ಗತಿಇಲ್ಲದ ತಿರಬೋಕಿಯಾಗಿದ್ದ. ಆದರೆ, ಇವತ್ತು ಕೋಟ್ಯಾಧೀಶನಾಗಿದ್ದಾನೆಂದರೆ ಅವನ ಗೆಬರುವಿಕೆ ಯಾವ ಮಟ್ಟದಲ್ಲಿದೆ ಎಂಬುದು ಅರ್ಥವಾಗುತ್ತದೆ.

ಕಾರವಾರದ ಅಭಿವೃದ್ಧಿಗೆ ಏನೇ ಯೋಜನೆಗಳು ಬಂದರೂ ಅವುಗಳ ಗುತ್ತಿಗೆ ನೀಡುವುದರಿಂದ ಹಿಡಿದು ಜಾರಿಯಾಗುವ ತನಕ ಹತ್ತು ಹಲವು ಹಂತಗಳಲ್ಲಿ ಕಮೀಷನ್ ಕೀಳುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾನೆ ಈ ಭಟ್ಟ. ತಾನು ಕೇಳಿದಷ್ಟು ಕಮೀಷನ್ ಕೊಡಲು ಯಾರಾದರೂ ಒಪ್ಪದಿದ್ದರೆ ಕಾಮಗಾರಿ ತನಿಖೆಯ ನೆಪವೊಡ್ಡಿ ಹಿಂಸಿಸಿಯಾದರೂ ದುಡ್ಡು ಕೀಳುತ್ತಾನೆ. ಅದಕ್ಕೂ ಬಗ್ಗದಿದ್ದಾಗ ಈತ ಚಪ್ಪಲಿಯಿಂದ ಹೊಡೆದಿದ್ದ ಎಂದರೆ ಇವನ ಹಣದಾಸೆ ಎಷ್ಟಿದೆ ಎಂದು ಗೊತ್ತಾಗುತ್ತದೆ.

ಒಂದು ಟಾಟಾ ಸುಫಾರಿ, ಎರಡು ಟೊಯೋಟ, ಸದಾಶಿವಗಡದಲ್ಲಿ ಅರ್ಧ ಕೋಟಿಗೂ ಮೀರಿದ ಎರಡು ಬೃಹತ್ ಬಂಗಲೆಗಳು, ಕಾರವಾರದ ಗೀತಾಂಜಲಿ ಟಾಕೀಸ್ ಬಳಿ ಸರ್ವೇ ನಂಬರ್ 418ರಲ್ಲಿ ಇರುವ ಕೋಟ್ಯಂತರ ರೂ. ಬೆಲೆಬಾಳುವ 1.4 ಎಕರೆ ಜಾಗ, ಕಳೆದ 12 ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಗ್ರೋಸರ್ಸ್ ಕ್ಲಬ್ ಇತ್ಯಾದಿ... ಇತ್ಯಾದಿ... ಇವು ಕೇವಲ ಲೆಕ್ಕಕ್ಕೆ ಸಿಕ್ಕಿರುವಂತಹುಗಳು. ಲೆಕ್ಕಕ್ಕಿಲ್ಲದವುಗಳು ಇನ್ನೂ ಎಷ್ಟಿವೆಯೋ?

ಈತ ಲಂಚಗುಳಿತನದಲ್ಲಿ ಎಷ್ಟರಮಟ್ಟಿಗೆ ಮುಳುಗಿದ್ದಾನೆ ಎಂಬುದಕ್ಕೆ ಒಂದು ಚಿಕ್ಕ ಉದಾಹರಣೆ ಕೊಡಬಹುದು. ಹೊಳೆ ಗುತ್ತಿಗೆ ಕಾಮಗಾರಿ ನಡೆಸುತ್ತಿದ್ದ ಮಾಧವ ನಾಯಕ್ ಎಂಬುವವರಿಂದ ನಲವತ್ತು ಸಾವಿರ ಲಂಚ ಬೇಕೆಂದು ಈತ ದುಂಬಾಲು ಬಿದ್ದಿದ್ದ. ಮೊದಲು ತನ್ನ ರೌಡಿಪಡೆಯನ್ನು ಕಳಿಸಿ ವಿಫಲನಾದ ಮೇಲೆ ತಾನೇ ಖುದ್ದಾಗಿ ಮಾಧವ್ ನಾಯಕ್‌ರ ಹಿಂದೆ ಬಿದ್ದ. ಭಟ್ಟನೇ ಖುದ್ದಾಗಿ ಬರುತ್ತಿರುವುದನ್ನು ಮೊದಲೇ ಗ್ರಹಿಸಿದ್ದ ಮಾದವ್ ನಾಯಕರು ಟಿವಿ ಚಾನೆಲ್ ಒಂದಕ್ಕೆ ವಿಚಾರ ತಿಳಿಸಿ ಹಿಡನ್ ಕ್ಯಾಮೆರಾವನ್ನು ಸಿದ್ಧಗೊಳಿಸಿಕೊಂಡಿದ್ದರು. ಹಿಡನ್ ಕ್ಯಾಮೆರಾವಿರುವುದು ಗೊತ್ತಿಲ್ಲದ ಭಟ್ಟ "ಮೂವತ್ತು ಲಕ್ಷದ ಕಾಮಗಾರಿ ಮಾಡಿಸಿದ್ದೀರಿ, ನನ್ನ ಕ್ಲಬ್‌ಗೆ ನಲವತ್ತು ಸಾವಿರ ಕೊಡಿ. ನನಗೆ ಹತ್ತು ಸಾವಿರ ಸಾಕಾಗುವುದಿಲ್ಲ, ನಾನು ಶಾಸಕ. ನಿಮ್ಮ ಹತ್ತಿರ ಭಿಕ್ಷೆ ಬೇಡುತ್ತಿಲ್ಲ" ಎಂದೆಲ್ಲಾ ಮಾತನಾಡಿರುವುದು ಹಿಡನ್ ಕ್ಯಾಮರಾದಲ್ಲಿ ರೆಕಾರ್ಡ್ ಆಗಿ ಕೊನೆಗೆ ರಾಜ್ಯಾದ್ಯಂತ ಭಿತ್ತರವಾಗಿ ಅವನ ಮಾನ ಮರ್ಯಾದೆ ಬೀದಿಪಾಲಾಗಿತ್ತು.



ಶಿವಾನಂದ ನಾಯ್ಕ

ಈತನಿಗೆ ಹಣ ಬೇಕಷ್ಟೆ. ಅದಕ್ಕಾಗಿ ಎಂತಹ ನೀಚ ಕೃತ್ಯಕ್ಕಾದರೂ ಇಳಿದುಬಿಡುತ್ತಾನೆ. ಇದೇ ಮಾಧವ ನಾಯ್ಕರು ಮಾಡಿಸಿದ್ದ ಕೆರವಾಡಿಯ ಕಾಮಗಾರಿಯನ್ನು ವೀಕ್ಷಿಸಲು ಪತ್ರಕರ್ತರೊಂದಿಗೆ ಬಂದಿದ್ದ ಭಟ್ಟ ಮತ್ತವನ ಗೂಂಡಾ ಗ್ಯಾಂಗ್ ಗುತ್ತಿಗೆದಾರನ ಮೇಲೆ ಹಲ್ಲೆಗಿಳಿದಿತ್ತು. ಅವರ ವಿರುದ್ಧ ದೂರು ಕೊಡಲು ಹೋದರೆ ಪೊಲೀಸರು ಆಗಲೇ ಭಟ್ಟನ ದೂರನ್ನು ತೆಗೆದುಕೊಂಡು ಹಲ್ಲೆಗೊಳಗಾದವನ ವಿರುದ್ಧವೇ ಕ್ರಮ ಜರುಗಿಸಲು ಮುಂದಾಗಿದ್ದರು. ಇದನ್ನು ವಿರೋಧಿಸಿ ಜನ ಎಸ್‌ಪಿ ಕಚೇರಿ ಎದುರು ಧರಣಿ ಕುಳಿತು, ಅದು ಐಜಿಪಿವರೆಗೆ ಹೋಗಿ ದೊಡ್ಡ ರಾದ್ಧಾಂತವೇ ಆಗಿತ್ತು.

ತನಗೆ ನಿರಂತರ ಆಮದಾನಿಯಿರಬೇಕೆಂದು ಆಲೋಚಿಸಿ ಜಿಲ್ಲಾ ಪಂಚಾಯತ್‌ನಲ್ಲಿ ಸಹಾಯಕ ಕಾರ್ಯನಿರ್ವಾಹಕನನ್ನಾಗಿ ಇವನ ಭಟ್ಟಂಗಿಯೊಬ್ಬನನ್ನು ಕೂರಿಸಿದ್ದಾನೆ. ಈತ ಜಿ.ಪಂ.ನನ್ನು ಕೊಳ್ಳೆಹೊಡೆದು ತಾನೂ ತಿಂದು ಅತ್ತ ದೇಶಪಾಂಡೆಗೂ ಇತ್ತ ಭಟ್ಟನಿಗೂ ತಿನ್ನಿಸುತ್ತಾನೆ.

ಇನ್ನೂ ಒಂದು ವಿಚಾರ ಎಂದರೆ ಈತ ಶಾಸಕನಾಗಿ ಕ್ಷೇತ್ರದ ಅಭಿವೃದ್ಧಿಗೆ ದುಡಿದಿದ್ದಕ್ಕಿಂತ ಹೆಚ್ಚಾಗಿ ಅಲ್ಲಿ ಇಲ್ಲಿ ತಿರುಗಾಡಿ ಬಂಗಾರ ವ್ಯಾಪಾರ ಮಾಡಿದ್ದೇ ಹೆಚ್ಚು. ಕಾಂಗ್ರೆಸ್ ಇಲ್ಲಿ ಇನ್ನೂ ಕುಂಭಕರ್ಣ ನಿದ್ದೆಯಿಂದ ಎದ್ದಿಲ್ಲ. ಕಾಂಗ್ರೆಸ್‌ನ ದೌರ್ಬಲ್ಯವೇ ವಾಸ್ತವದಲ್ಲಿ ಭಟ್ಟನನ್ನು ಕಳೆದ ಚುನಾವಣೆಯಲ್ಲಿ ಗೆಲ್ಲಿಸಿದ್ದು. ಈ ಬಾರಿಯಾದರೂ ಅದು ಒಂದಿಷ್ಟು ಚುರುಕುತನ ತೋರಿಸುತ್ತದೆಯೇ ಎಂಬುದನ್ನು ಕಾದು ನೋಡಬೇಕಷ್ಟೆ. ಭಟ್ಟನಂತಹ ಒಬ್ಬ ಗೆಬರು ಗಿರಾಕಿಯನ್ನು ಶಾಸಕನನ್ನಾಗಿ ಆರಿಸಿ ಕಳಿಸಿದ್ದ ಮಹಾಪರಾಧಕ್ಕೆ ಕಾರವಾರದ ಜನ ಶಿಕ್ಷೆ ಅನುಭವಿಸಿದ್ದೂ ಆಗಿದೆ. ಅದೇ ತಪ್ಪನ್ನು ಈ ಬಾರಿಯೂ ಅವರು ಮಾಡದಿರಲಿ.

–ವರದಿಗಾರ


ಸ್ನೇಹಿತ ಎಂದರೆ ಯಾರು? ಎರಡು ಹೃದಯಗಳಲ್ಲಿ ನೆಲೆಸುವ ಒಂದೇ ಆತ್ಮ -ಅರಿಸ್ಟಾಟಲ್

ಹೋಳಿಕೆ ಕೊಡುವ ತಾಕತ್ತು ಇಲ್ಲಿನ ಕಾಂಗ್ರೆ ಮುಖಂಡರಿಗಳಿಗೆ ಇಲ್ಲ ಎಂದರೆ ಅವರೆಷ್ಟು ಲದ್ದು ಹೊಡೆದಿರಬೇಕೆಂದು ನೀವೇ ಊಹಿಸಿ! ಅಮಾತೆಪ್ಪ ಕಂದಕೂರ, ಚಂದ್ರಶೇಖರ ಅರಬೋಳ, ಶರಣಪ್ಪ ಸಲಾದಪೂರ, ನೀಲಕಂಠ ಬದಿಗೇರ ಮುಂತಾದವರಿಗೆಲ್ಲ ಏನಾಗಿದೆಯೋ ತಿಳಿಯುತ್ತಿಲ್ಲ. ಬಿಜೆಪಿಯ ಚೆಡ್ಡಿ ಚತುರರ ಮುಖಂಡನಾಗಿರುವ ಡಾ. ಮಲ್ಲಣ್ಣಗೌಡ ಉಕ್ಕನಾಳ ಹೇಳಿ ಕೇಳಿ ಎಲ್ಲ ತುಂಬಿರುವ ಮನುಷ್ಯ. ಈತನಿಗೆ ಬಿಜೆಪಿ ಅಧ್ಯಕ್ಷ ಸ್ಥಾನ ಒಂದು ಶೋಕಿಯೇ ಹೊರತು, ಅದು ಹೋರಾಟವೆಂದು ತಿಳಿದುಕೊಂಡಿಲ್ಲ. ಹೀಗಾಗಿ ಚೆಡ್ಡಿ ಇಲ್ಲಿ ವಿಜೃಂಭಿಸುವುದು ಸಾಧ್ಯವಿಲ್ಲ.



ಮಲ್ಲಣ್ಣ ಮಡ್ಡಿ

ಈಗ ಮತ್ತೆ ಚುನಾವಣೆ ಸಮೀಪಿಸಿರುವುದರಿಂದ ಮಾಜಿ ಶಾಸಕ ಶಿವಶೇಖರಪ್ಪ ಶಿರವಾಳ ಮತ್ತೆ ತಾಲೂಕಿನ ಕಡೆ ಮುಖ ಮಾಡಿ ಕುಳಿತುಕೊಂಡಿದ್ದಾನೆ. ಆದರೆ ಈತನಿಗೆ ತೊಡರುಗಾಲು ಹಾಕಿ ತಾನು ಟಿಕೆಟು ಪಡಕೊಳ್ಳಬೇಕೆಂದು ಜಿಲ್ಲಾ ಪಂಚಾಯತ್ ಸದಸ್ಯ ಬಸ್ಸನಗೌಡ ಪಾಟೀಲ ಸುಬೇದಾರರ ಸಹೋದರ ಡಾ. ಚಂದ್ರಶೇಖರ ಪಾಟೀಲ ಸುಬೇದಾರ ತಯಾರಿ ನಡೆಸಿದ್ದಾನೆ. ವೈದ್ಯ ವೃತ್ತಿಯಲ್ಲಿ ನಿಷ್ಣಾತನೂ, ಜನಾನುರಾಗಿಯೂ ಹಾಗು ಸಹೃದಯಿಯೂ ಆಗಿರುವ ಪಾಟೀಲರ ಕಡೆ ಪ್ರಜ್ಞಾವಂತ ಮತದಾರನ ಒಲವು ಇದೆ. ವಿದ್ಯಾವಂತನೊಬ್ಬ ತಮ್ಮ ಮತಕ್ಷೇತ್ರದಿಂದ ಗೆದ್ದು ಬಂದರೆ ತಾಲೂಕಿನ ಭವಿಷ್ಯವೇ ಬದಲಾಗಬಹುದು ಎಂಬ ಕನಸು ಕಟ್ಟಿಕೊಂಡಿದ್ದಾರೆ. ಅಂದಂತೆ ಪಾಟೀಲರ ತಂದೆ ಅಚ್ಚಪ್ಪಗೌಡ ಸುಬೇದಾರ ಒಬ್ಬ ಸ್ವಾತಂತ್ರ್ಯ ಹೋರಾಟಗಾರ. ಈತನ ಕೈಗೆ ತಾಲೂಕಿನ ಚುಕ್ಕಾಣಿ ಬಂದುದೇ ಆದರೆ ಶಹಾಪುರದ 'ಲಕ್' ಖುಲಾಯಿಸಿದಂತೆ ಎಂದು ಜನ ಭಾವಿಸಿದ್ದಾರೆ.



ಚಂದ್ರಶೇಖರ ಪಾಟೀಲ್ ಸುಬೇದಾರ

ಜೆಡಿಎಸ್ ಅನ್ನೂ ದರ್ಶನಾಪುರ ತೊರೆದಿದ್ದರಿಂದ ಈಗ ತಾಲೂಕು ಜೆಡಿಎಸ್ ಮುಖಂಡನಾಗಿರುವ ಮಲ್ಲಣ್ಣ ಮಡ್ಡಿ ಒಂದು ಕೈ ನೋಡಬೇಕೆಂದು ಹೊಂಚು ಹಾಕಿರುವುದು ಸಹಜವೇ ಆಗಿದೆ. ಸ್ವಲ್ಪ ಧಾಡಸಿಯೂ, ಕ್ಷೇತ್ರದ ತುಂಬೆಲ್ಲ ಹೆಸರುವಾಸಿಯೂ ಆಗಿರುವ ಮಲ್ಲಣ್ಣ ಮಡ್ಡಿ ಅಖಾಡಕ್ಕೆ ಇಳಿದುದೇ ಆದರೆ ದರ್ಶನಾಪುರನ ಜಂಘಾಬಲವೇ ಮುರಿದು ಹೋಗಲಿದೆ. ಆದರೆ ಮಲ್ಲಣ್ಣನನ್ನೂ ಮಳ್ಳು ಮಾಡುವ ತಾಕತ್ತು ಶರಣಬಸವಪ್ಪ ಅಂಡ್ ಕಂಪನಿಗೆ ಇದೆ ಎಂಬುದು ಜನರಾಡಿಕೊಳ್ಳುವ ಮಾತಾಗಿದೆ.

ಆದರೆ ಜೆಡಿಎಸ್ ತೊರೆದು ಎಂ.ಪಿ.ಪ್ರಕಾಶ ಜೊತೆ ಗುರುತಿಸಿಕೊಂಡಿರುವ ದರ್ಶನಾಪುರನೇ ಕಾಂಗ್ರೆ ಮಡಿಲನ್ನು ಸೇರಿದರೆ? ಶಿವಶೇಖರಪ್ಪ ಪಾಟೀಲ ಆಟೋಮ್ಯಾಟಿಕ್ ಆಗಿ ಬಿಜೆಪಿಯ ತೆಕ್ಕೆಗೆ ಹೋಗಲಿದ್ದಾನೆ. ದರ್ಶನಾಪುರನೇನಾದರೂ ಬಿಜೆಪಿಯ ಮಡಿಲು ಸೇರಿಕೊಂಡರೆ 20 ಸಾವಿರ ಅಲ್ಪಸಂಖ್ಯಾತರ ಮತದಾರರ ಮತಗಳಿಗೆ ಎಳ್ಳು ನೀರು ಬಿಟ್ಟುಕೊಂಡಂತಾಗುತ್ತದೆ. ಇಷ್ಟು ಮಾತ್ರ ಸತ್ಯ. ದರ್ಶನಾಪುರ ಈ ಬಾರಿ ಎಷ್ಟೇ ಎಗರಾಡಿದರೂ, ಯಾವುದೇ ಪಾರ್ಟಿಗೆ ಹೋಗಿ ನಿಂತರೂ ಗೆಲ್ಲುವುದು ಕಷ್ಟ ಎಂದೇ ಜನ ಮಾತಾಡಿಕೊಳ್ಳುತ್ತಿದ್ದಾರೆ.

-ವರದಿಗಾರ




ಎಸ್.ಆರ್. ಮೋರೆ

ಧಾರವಾಡ:

ಮೋರೆಯನ್ನು ನಂಬಿದರೆ ಕಾಂಗ್ರೆಸ್ ಮೋರಿಗೆ

ಧಾರವಾಡದ ಮಾಜಿ ಶಾಸಕ ಕಾಂಗ್ರೆಸ್‌ನ ಮೋರೆ ಈಗ ಮೋರಿ ಸೇರುವ ಹಂತ ತಲುಪಿದ್ದಾನೆ. ಇವನನ್ನೇ ನಂಬಿಕೊಂಡರೆ ಶಹರದಲ್ಲಿ ಕಾಂಗ್ರೆಸ್ ಕೂಡ ಮೋರಿ ಸೇರುವುದರಲ್ಲಿ ಅನುಮಾನವಿಲ್ಲ. ಕಳೆದ ಬಾರಿಯ ಚುನಾವಣೆಯಲ್ಲಿ ಗುಲಾಮ್‌ನಬಿ ಆಜಾದ್‌ಗೆ 25 ಲಕ್ಷ ಕೊಟ್ಟು ಕಾಂಗ್ರೆಸ್ ಸೀಟು ಗಿಟ್ಟಿಸಿದ್ದ ಈತ ಚುನಾವಣೆಯಲ್ಲಿ ದುಡ್ಡನ್ನೇ ಚೆಲ್ಲಿ ಗೆದ್ದುಬಂದಿದ್ದ. ಆಗ ಚುನಾವಣೆಯಲ್ಲಿ ನಿರ್ಣಾಯಕ ಪಾತ್ರ ವಹಿಸುವ ಮುಸ್ಲಿಮರು ಇವನ ಮೇಲೆ ಒಂದಿಷ್ಟು ವಿಶ್ವಾಸ ಇಟ್ಟಿದ್ದರಿಂದ ಮುಸ್ಲಿಮ್ ಮತಬ್ಯಾಂಕ್ ಕೂಡ ಇವನ ಪಾಲಾಗಿತ್ತು. ಅಲ್ಲದೆ, ಇವನ ಎಡಬಲದಲ್ಲಿಯೇ ಇರುತ್ತಿದ್ದ ಲ್ಯಾಂಡ್ ಮಾಫಿಯಾದ ಸುಭಾಷ್ ಶಿಂಧೆ, ಪ್ರತಾಪ ಚವ್ಹಾಣ, ನವಲೂರ, ಗಂಭೀರ ಮತ್ತು ರಸೂಲ ಧಾರವಾಡಕರ ಎಂಬ ಶಿಷ್ಯರೂ ಇವನ ಗೆಲುವಿಗೆ ಶ್ರಮಿಸಿದ್ದರು. ಆದರೆ, ಇವರೆಲ್ಲ ಈ ಬಾರಿ ಮೋರೆಗೆ ಕೈಕೊಟ್ಟು ಮೋರಿಗೆ ಕೆಡವಲು ಸಜ್ಜಾಗಿದ್ದಾರೆ.



ನಿಮ್ಮ ಶಾಸಕರು ಕಡಿದಿದ್ದೇನು?

ಮೋರೆ ಗೆದ್ದುಬಂದ ಮೇಲೆ ತನ್ನನ್ನು ಗೆಲ್ಲಿಸಿದ ಜನರಿಗೆ ಏನು ಕೊಟ್ಟನೋ ಬಿಟ್ಟನೋ ಯಾರಿಗೂ ಗೊತ್ತಿಲ್ಲ, ಆದರೆ ತನ್ನ ಜೇಬು ತುಂಬಿಸಿಕೊಳ್ಳಲು ಅಡ್ಡ ದಾರಿ ಹಿಡಿದದ್ದನ್ನು ಮಾತ್ರ ಎಲ್ಲರೂ ಬಲ್ಲರು. ಉದಾಹರಣೆಯಾಗಿ ಹೇಳಬೇಕೆಂದರೆ ಧಾರವಾಡದ ಸಪ್ತಾಪುರದಲ್ಲಿ ಆತ ನುಂಗಿದ 16 ಗುಂಟೆ ಜಾಗ.

ಬಿಜಾಪುರ ಮೂಲದ ಕಾಖಂಡಿಕಿ ಎಂಬುವವರಿಗೆ ಸಪ್ತಾಪುರದಲ್ಲಿ 16 ಗುಂಟೆ ಜಾಗವಿತ್ತು. ತಮ್ಮದೇನೋ ವ್ಯವಹಾರಕ್ಕಾಗಿ ಅವರು ಮೋರೆ ಪರಿವಾರದ ಶರದರಾವ್, ಸಜ್ಜನರಾವ್ ಮೋರೆ ಎಂಬುವವರಿಂದ ಒಂದಿಷ್ಟು ಹಣವನ್ನು ಬಡ್ಡಿ ಸಾಲವಾಗಿ ಪಡೆದುಕೊಂಡಿದ್ದರು. ಸಾಲದ ಗ್ಯಾರಂಟಿಯಾಗಿ ಮೋರೆ ಫ್ಯಾಮಿಲಿ ಕಾಖಂಡಿಕಿಯ ಜಾಗದ ಪತ್ರಗಳನ್ನು ಇಟ್ಟುಕೊಂಡಿದ್ದರು. ಅಸಲಿಗೆ ಬಡ್ಡಿ, ಚಕ್ರಬಡ್ಡಿ ಸೇರಿ ಸಾಲದ ದುಪ್ಪಟ್ಟು ಬಡ್ಡಿ ಬೆಳೆಸಿಟ್ಟಿದ್ದರು. ಕೊನೆಗೆ ಕಾಖಂಡಿಕಿಗೆ ಬಿಸಿನೆಸ್‌ನಲ್ಲಿ ಲಾಸ್ ಆಗಿ ಸಾಲ ಕಟ್ಟಲಾರದ ಪರಿಸ್ಥಿತಿ ಏರ್ಪಟ್ಟಾಗ ತಾವೇ ಮುಂದೆಬಂದು ಅವರ ಜಾಗವನ್ನು ಕೇವಲ 24 ಲಕ್ಷಕ್ಕೆ ಕೊಂಡುಕೊಂಡರು. ಇವರ ಸಾಲ, ಬಡ್ಡಿ ಸೇರಿ 8 ಲಕ್ಷ ಮಾಡಿಟ್ಟಿದ್ದರು. ಇದನ್ನು ಕಳೆದರೂ ಕಾಖಂಡಿಕಿಗೆ 16 ಲಕ್ಷ ವಾಪಸ್ಸು ಕೊಡಬೇಕಿತ್ತು. ಆದರೆ, ಇಂದು ಕೊಡ್ತೇವೆ, ನಾಳೆ ಕೊಡ್ತೇವೆ ಅಂತ ಕಾಲ ತಳ್ಳುತ್ತಲೇ ಹೋದರೆ ವಿನಃ ದುಡ್ಡು ಮಾತ್ರ ಕಾಖಂಡಿಕಿಗೆ ಸೇರಲೇ ಇಲ್ಲ. ಈ ನಡುವೆ ಎಸ್. ಆರ್. ಮೋರೆ, ಪುತ್ರ ಸತ್ಯಜಿತ್ ಮೋರೆ, ಪತ್ನಿ ಮತ್ತು ಸಜ್ಜನರಾವ್ ಹೆಸರಿನಲ್ಲಿ ಸೇಲ್ ಡೀಡ್ ಕೂಡ ಆಗಿದೆ. ಇದು ಮೋರೆ ಅಂಡ್ ಫ್ಯಾಮಿಲಿ ಮಾಡುತ್ತಿರುವ ಸಹಸ್ರ ಸಹಸ್ರ ವಂಚನೆಗಳ ಒಂದು ಸಣ್ಣ ಸ್ಯಾಂಪಲ್. ಇಂತಹ ಕೊಳ್ಳೆಯಿಂದಲೇ ಈತ ತನ್ನ ಮಗ ಸತ್ಯಜಿತ್ ಮೋರೆಗೆ ಗೋವಾದಲ್ಲಿ ದೊಡ್ಡ ಬಿಸಿನೆಸ್ ಹಾಕಿಕೊಟ್ಟಿದ್ದಾನೆ.


ಈತನ ದೇಹ ಕಾಂಗ್ರೆಸ್‌ನಲ್ಲಿದ್ದರೂ ಮನಸ್ಸು ಮತ್ತು ಬುದ್ಧಿ ಸಂಘಪರಿವಾರದಲ್ಲಿ, ಬಿಜೆಪಿಯಲ್ಲಿ ಸುತ್ತುತ್ತಿರುತ್ತದೆ. ಇತ್ತೀಚೆಗಂತೂ ದೇಹವೂ ಅಲ್ಲಿ ಸುತ್ತತೊಡಗಿದೆ. ಮೊನ್ನೆ ನಡೆದ ಬಕ್ರೀದ್ ಹಬ್ಬದ ಸಮಯದಲ್ಲಿ 'ಮುಸ್ಲಿಮರು ದನಗಳ ಮಾಂಸವನ್ನು ತಿಂದರು, ಗೋಹತ್ಯೆ ಮಾಡಿದರು, ಅವರು ಈ ದೇಶದ ಸಂಸ್ಕೃತಿವಿರೋಧಿಗಳು' ಎಂದು ಮಾಮೂಲಿ ಬಾಯ್ಬಡಕು ತೀರಿಸಿಕೊಂಡ ಚೆಡ್ಡಿ ಮುತಾಲಿಕ್‌ಗೆ ಸಾಥ್ ನೀಡಿದವನು ಇದೇ ಮೋರೆ. ಇವರೊಂದಿಗೆ ಪೊಲೀಸರೂ ಸೇರಿಕೊಂಡು ಇಬ್ಬರು ಮುಸ್ಲಿಮ್ ಯುವಕರ ಮೇಲೆ ಕೇಸ್ ಜಡಿದಿದ್ದಾರೆ.

ಮೋರೆಯ ಇಂತಹ ಅಲ್ಪಸಂಖ್ಯಾತ ವಿರೋಧಿ ಕೃತ್ಯಗಳಿಂದ ಧಾರವಾಡದ ಜನ ರೋಸಿಹೋಗಿದ್ದಾರೆ. ಈತ ದಿನೇ ದಿನೇ ಸಂಘಪರಿವಾರಕ್ಕೆ ಹತ್ತಿರವಾಗುತ್ತಿರುವುದೂ ಅವರಲ್ಲಿ ಅಸಹನೆ ಮೂಡಿಸಿದೆ. ಅಲ್ಲದೇ ತಮ್ಮ ಸಮುಸ್ಯೆಯನ್ನು ಕಾಂಗ್ರೆಸ್ ಜಿಲ್ಲಾಧ್ಯಕ್ಷ, ಮಾಜಿ ಸಚಿವ ಹಾಗೂ ತಮ್ಮದೇ ಸಮುದಾಯದ ಜಬ್ಬರ್‌ಖಾನ್ ಹೊನ್ನಳ್ಳಿಯ ಮುಂದೆಯಾದರೂ ತೋಡಿಕೊಳ್ಳೋಣವೆಂದರೆ ಆತ ಕೈಗೇ ಸಿಗುವುದಿಲ್ಲ. ಹೀಗಾಗಿ ಈ ಚುನಾವಣೆಯಲ್ಲಿ ಮುಸ್ಲಿಮರು ಜೆಡಿಎಸ್ ಕಡೆ ಹೊರಳುವ ತಯಾರಿಯಲ್ಲಿದ್ದಾರೆ.

ಈ ಕ್ಷೇತ್ರದಲ್ಲಿ ಸುಮಾರು ಎರಡು ಲಕ್ಷ ಮತದಾರರಿದ್ದಾರೆ. ಅವರಲ್ಲಿ ಸುಮಾರು 55,000 ಮುಸ್ಲಿಮರು, 65,000 ಲಿಂಗಾಯತರು, 23,000 ಬ್ರಾಹ್ಮಣರು, 20,000 ದಲಿತರು ಮತ್ತು 13,000 ಮರಾಠರು ಇದ್ದಾರೆ. ಇಲ್ಲಿ ನಿರ್ಣಾಯಕವಾಗಿರುವುದು ಮುಸ್ಲಿಮ್ ಮತ್ತು ಲಿಂಗಾಯತ ಮತಗಳೆ. ಕಾಂಗ್ರೆಸ್ ಈತನಕ ಮುಸ್ಲಿಮ್ ಮತ್ತು ದಲಿತ ಓಟುಗಳ ಮೇಲೇ ಅವಲಂಬಿತವಾಗಿದೆ. ಒಂದು ವೇಳೆ ಅವರು ಮೋರೆಯ ಮಾರಿ ನೋಡಲಾಗದೇ ಈ ಬಾರಿ ಜೆಡಿಎಸ್ ಕಡೆ ಹೊರಳಿದರೆ ಕಾಂಗ್ರೆಸ್ ಚರಂಡಿ ಸೇರುವುದು ಖಚಿತ.

ಮೋರೆಯ ಹಾದಿಯಲ್ಲಿ ಇನ್ನೂ ಕೆಲವು ಮುಳ್ಳುಗಳಿವೆ. ಜಬ್ಬರ್‌ಖಾನ್ ಹೊನ್ನಳ್ಳಿ ಹೆಸರಿಗೆ ಮಾತ್ರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ. ದರ್ಬಾರು ನಡೆಸುವುದೆಲ್ಲ ಮೋರೆ. ಮೊನ್ನೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಟಿಕೆಟ್ ಹಂಚಿದ್ದೇ ಮೋರೆ. ಪರಿಣಾಮ ಒಟ್ಟು 23 ವಾರ್ಡ್‌ಗಳಲ್ಲಿ ಕಾಂಗ್ರೆಸ್‌ಗೆ ದಕ್ಕಿದ್ದು ಕೇವಲ ಏಳು. ತನಗೆ ಬೇಕಾದವರಿಗೆ ಟಿಕೆಟ್ ಕೊಟ್ಟು ಸಮರ್ಥ ಅಭ್ಯರ್ಥಿಗಳನ್ನು ಮೂಲೆಗುಂಪು ಮಾಡಿದ್ದರಿಂದ ಕಾಂಗ್ರೆಸ್ ಚುನಾವಣೆಯಲ್ಲಿ ನೆಲಕಚ್ಚಿದ್ದು ಮಾತ್ರವಲ್ಲ, ಟಿಕೆಟ್ ವಂಚಿತ ಸಮರ್ಥರು ಆ ಸೇಡನ್ನು ಬರುವ ಚುನಾವಣೆಯಲ್ಲಿ ತೀರಿಸಿಕೊಳ್ಳಲಿದ್ದಾರೆ. ಅದರಲ್ಲೂ, ದಾನಪ್ಪ ಕಬ್ಬೇರ್, ರಾಬರ್ಟ್ ದದ್ದಾಪೂರಿಯಂತವರಿಗೆ ಒಂದೆಡೆ ಕಾಂಗ್ರೆಸ್ ಟಿಕೆಟ್ ಕೊಟ್ಟು ಇನ್ನೊಂದೆಡೆ ಎದುರಾಳಿ ಬಿಜೆಪಿ ಮತ್ತು ಜೆಡಿಎಸ್‌ನೊಂದಿಗೆ ರಹಸ್ಯವಾಗಿ ಕೈಜೋಡಿಸಿ ಅವರನ್ನು ಸೋಲಿಸಿದ್ದಾನೆ. ಇದಾಗಲೇ ಅವರಿಗೂ ಗೊತ್ತಾಗಿದ್ದು ಅವರೂ ಬರುವ ಚುನಾವಣೆಯಲ್ಲಿ ಮೋರೆಯ ವಿರುದ್ಧ ಕಚ್ಚೆ ಕಟ್ಟಿ ನಿಲ್ಲಲಿದ್ದಾರೆ. ಮತ್ತೊಂದೆಡೆ ತನ್ನ ಸ್ವಜಾತಿ ಬಂಧು ಎನ್ನುವ ಒಂದೇ ಕಾರಣಕ್ಕೆ ಲಕ್ಷ್ಮಣ್ ಭೋಸಲೆ ಎಂಬ ಮಾಜಿ ಕಾರ್ಪೋರೇಟರ್‌ನನ್ನು ಎಪಿಎಂಸಿ ಗದ್ದುಗೆಗೆ ಕೂಡ್ರಿಸಿದ್ದರಿಂದ ಅಲ್ಲಿಯೂ ಸಮರ್ಥ ಅಭ್ಯರ್ಥಿಗಳ ವೈರತ್ವ ಕಟ್ಟಿಕೊಂಡಿದ್ದಾನೆ.

ಬಿಜೆಪಿ ಇಲ್ಲಿ ಏಳಿಗೆ ಹೊಂದುವ ಲಕ್ಷಣ ಕಾಣುತ್ತಿಲ್ಲ. ಯಡ್ಡಿಯ ಶಿಷ್ಯ ಮಾಜಿ ಶಾಸಕ ಚಂದ್ರಕಾಂತ್ ಬೆಲ್ಲದ್ ತಮ್ಮದೇ ಪಕ್ಷದ ದತ್ತಾ ಡೋರ್ಲೆ, ಈರೇಶ್ ಅಂಚಟಗೇರಿಯಂತವರ ವಿರೋಧದ ನಡುವೆಯೂ ಟಿಕೆಟ್ ಗಿಟ್ಟಿಸಲು ಪ್ರಯತ್ನ ನಡೆಸಿದ್ದಾನೆ. ದತ್ತಾ ಡೋರ್ಲೆಯಂತೂ ಚಂದ್ರಕಾಂತ ಬೆಲ್ಲದ್‌ನ ಖಾಸಾ ತಮ್ಮ ಶಿವಣ್ಣ ಬೆಲ್ಲದ್‌ನನ್ನು ಎತ್ತಿಕಟ್ಟಿ ಅವನಿಗೇ ಟಿಕೆಟ್ ಕೊಡಿಸುವ ಹುನ್ನಾರ ನಡೆಸಿದ್ದಾನೆ. ಮುಸ್ಲಿಮ್ ಮತಗಳು ಬಾರದಿರುವುದು, ಪಕ್ಷದೊಳಗಿನ ಅಂತಃಕಲಹ, ಎಲ್ಲವನ್ನೂ ಗುಡ್ಡೆ ಹಾಕಿದರೆ ಬಿಜೆಪಿ ಇಲ್ಲಿ ಗೆಲ್ಲುವುದು ಕಷ್ಟವೆ.



ಬೆಲ್ಲದ್

ಮುಸ್ಲಿಮರು ಮೋರೆ ಮತ್ತು ಹೊನ್ನಳ್ಳಿಯ ಮೇಲಿನ ಸೇಡನ್ನು ತೀರಿಸಿಕೊಳ್ಳುವುದಕ್ಕಾಗಿ ಈ ಬಾರಿ ಯುವಕ ಇಸ್ಮಾಯಿಲ್ ತಮಾಟ್‌ಗಾರ್‌ನನ್ನು ಜೆಡಿಎಸ್‌ನಿಂದ ಕಣಕ್ಕಿಳಿಸುವ ಯೋಜನೆ ರೂಪಿಸಿದ್ದಾರೆ. ಇಸ್ಮಾಯಿಲ್ ಇದ್ದುದರಲ್ಲಿ ಉತ್ಸಾಹಿ ಯುವಕ ಮತ್ತು ತಮ್ಮ ಸಮುದಾಯದ ಸಮಸ್ಯೆಗಳಿಗೆ ಮಾತ್ರವಲ್ಲ ಒಟ್ಟಾರೆ ಜನಸಮುದಾಯದ ಸಮಸ್ಯೆಗಳಿಗೆ ಸ್ಪಂದಿಸುವ ಸ್ವಭಾವದವನು. ಜೆಡಿಎಸ್ ಇಸ್ಮಾಯಿಲ್‌ಗೆ ಟಿಕೆಟ್ ಕೊಟ್ಟರೆ ಬಿಜೆಪಿ ಕಾಂಗ್ರೆಸ್ ಎರಡೂ ಧೂಳೀಪಟವಾಗುವುದರಲ್ಲಿ ಸಂದೇಹವಿಲ್ಲ.



ತಮಾಟ್‌ಗಾರ್

ಇನ್ನು ಮಾಜಿ ಮೇಯರ್ ದಂಬಳ ಹಾಗೂ ನೀರಲಗಿ ಬಿಎಸ್‌ಪಿ ಟಿಕೆಟ್ ಗಿಟ್ಟಿಸಲು ಪ್ರಯತ್ನ ನಡೆಸಿದ್ದರೆ, ಸಮಾಜವಾದಿ ಪಾರ್ಟಿಯಿಂದ ಎಂ.ಎಂ. ಹಿರೇಮಠ್ ಕಣಕ್ಕಿಳಿಯಲು ಸಜ್ಜಾಗಿದ್ದಾರೆ. ಆದರೆ ಇವರೆಲ್ಲ ಆಟಕ್ಕುಂಟು ಲೆಕ್ಕಕ್ಕಿಲ್ಲ. ಇದನ್ನೆಲ್ಲಾ ನೋಡಿ ಮೋರೆ ಈ ಚಳಿಯಲ್ಲೂ ಬೆವರಲಾರಂಭಿಸಿದ್ದಂತೂ ಸತ್ಯ.

- ಹುಬ್ಬಳ್ಳಿಯಿಂದ


ಅಂಕೋಲದಿಂದ ವಿಶ್ವೇಶ್ವರ ಹೆಗಡೆ ಕಾಗೇರಿ ಮೂರು ಬಾರಿ ಶಾಸಕನಾಗಿ ಆಯ್ಕೆಯಾಗಿದ್ದಾನೆ. ತನ್ನ ಕ್ಷೇತ್ರಕ್ಕಾಗಿ, ತನ್ನ ಜನಗಳಿಗಾಗಿ ಈತ ಕಡಿದು ಗುಡ್ಡೆಹಾಕಿದ್ದೇನೂ ಇಲ್ಲದಿದ್ದರೂ ಜನ ಅವನನ್ನು ಮತ್ತೆ ಮತ್ತೆ ಆರಿಸಿಕಳಿಸಿದ್ದಾರೆ ಎಂಬುದು ಆಶ್ಚರ್ಯವಾದರೂ ಸತ್ಯ. ಕ್ಷೇತ್ರದಲ್ಲಿ ಹೇಳೋ ಅಂತ ಕೆಲಸವನ್ನಂತೂ ಈತ ಮಾಡಿಲ್ಲ. ಹೊನ್ನಳ್ಳಿ, ಗುಂಡಬಾಳ, ಸಂತೆ ಪೇಟೆ, ರಾಮನಗುಳಿ ಏತನೀರಾವರಿ ಯೋಜನೆಗೆ ಶಂಕುಸ್ಥಾಪನೆಯಾಗಿ 15 ವರ್ಷ ಕಳೆದಿದೆ. ಅದಿನ್ನೂ ಪರಿಪೂರ್ಣ ಪ್ರಮಾಣದಲ್ಲಿ ಜಾರಿಗೇ ಬಂದಿಲ್ಲ. ಕ್ಷೇತ್ರಗಳ ರಸ್ತೆಗಳನ್ನೊಮ್ಮೆ ನೋಡಿದರೆ ಅವು ರಸ್ತೆಗಳೋ ಕೊಚ್ಚೆ ಗುಂಡಿಗಳೋ ಎಂಬ ಅನುಮಾನ ಬಾರದಿರದು. ಮಿನಿ ಜಲವಿದ್ಯುತ್ ಯೋಜನೆ, ಗಂಗಾವಳಿ ನಾಲೆ ಯೋಜನೆ ಇವ್ಯಾವೂ ಆಗಿಲ್ಲ. ಹೀಗಿದ್ದರೂ ಆತ ಮೂರು ಬಾರಿ ಆರಿಸಿಬಂದಿದ್ದಾನೆಂದರೆ ಇದಕ್ಕೆ ಕಾರಣ ಇಲ್ಲದಿಲ್ಲ.

ಮೊದಲನೇ ಕಾರಣ ಎಂದರೆ, ಇಲ್ಲಿ ಕಾಂಗ್ರೆಸ್ ನಾಯಕನಿಲ್ಲದೇ ನರಸತ್ತು ಕುಳಿತಿರುವುದು ಬಿಜೆಪಿ ಮತ್ತು ಕಾಗೇರಿ ಕೊಬ್ಬಲು ಅನುಕೂಲವಾಗಿದೆ.

ಅಂಕೋಲ:

ನಸುಗುನ್ನಿ ವಿಶ್ವೇಶ್ವರ ಹೆಗಡೆ ಕಾಗೇರಿ

ಇನ್ನು ಎರಡನೇ ಕಾರಣ ಎಂದರೆ, ಪಕ್ಕಾ ಆರ್‌ಎಸ್‌ಎಸ್ ಗರಡಿಯಲ್ಲಿ ಪಳಗಿದ ಕಾಗೇರಿ ಜನರಿಗೆ ಟೋಪಿ ಹಾಕುವ ಕಲೆಯನ್ನು ಚೆನ್ನಾಗಿ ಕರಗತ ಮಾಡಿಕೊಂಡಿದ್ದಾನೆ. ಆಗಾಗ ಅಂಕೋಲಕ್ಕೆ ಬರೋದು, ಒಂದು ಪತ್ರಿಕಾಗೋಷ್ಠಿ ನಡೆಸಿ ತಾನು ಕ್ಷೇತ್ರದಲ್ಲೇ ಇದ್ದೇನೆ ಅಂತ ಜನರನ್ನು ನಂಬಿಸುತ್ತಿರುತ್ತಾನೆ. ಪತ್ರಿಕಾ ವಲಯದಲ್ಲಿ ಈತ ಸಾಕಿಕೊಂಡಿರುವ ಕೆಲ ಪತ್ರಕರ್ತರೂ ಇದ್ದಾರೆ, ಇನ್ನು ಕೆಲವರ ಹೆಗಲ ಮೇಲೆ ಕೈಯಿಟ್ಟು ಸ್ನೇಹವನ್ನೂ ಸಂಪಾದಿಸುತ್ತಿರುತ್ತಾನೆ. ಅವರೆಲ್ಲ ಇವನ ಬಗ್ಗೆ ಹಾಡಿ ಹೊಗಳುತ್ತಿರುತ್ತಾರೆ.



ವಿಶ್ವೇಶ್ವರ ಹೆಗಡೆ ಕಾಗೇರಿ

ಹಳ್ಳಿಹಳ್ಳಿಗೆ ಆಗಾಗ ಭೇಟಿ ಕೊಟ್ಟು ತಾನೊಬ್ಬ ಬ್ರಾಹ್ಮಣನಾಗಿದ್ದರೂ ದಲಿತ ಕೇರಿಗಳಿಗೆ, ಮನೆಗಳಿಗೆ ಹೋಗಿಬರುತ್ತಿರುತ್ತಾನೆ. ಒಬ್ಬ ಬ್ರಾಹ್ಮಣ - ಅದರಲ್ಲೂ ಶಾಸಕನಾದವನು - ದಲಿತರ ಕೇರಿಗೆ ಹೋಗೋದು ಮಹಾಸಾಧನೆ ಎಂಬಂತೆ ದೊಡ್ಡ ಮಟ್ಟದ ಪ್ರಚಾರವನ್ನೂ ಗಿಟ್ಟಿಸಿಕೊಳ್ಳುತ್ತಾನೆ. ಆದರೆ ತನ್ನ ಮನೆಗೆ ಹಿಂದಿರುಗಿದ ನಂತರ ನಾಲ್ಕುಬಾರಿ ಸೋಪು, ಕಡ್ಲೆ ಹಿಟ್ಟು ಹಾಕಿ ತಿಕ್ಕಿ ತಿಕ್ಕಿ ಮೈತೊಳೆದುಕೊಳ್ಳುತ್ತಾನೆ ಎಂಬ ಜೋಕ್ ಅಂತೂ ಜನರ ನಡುವೆ ಚಾಲ್ತಿಯಲ್ಲಿದೆ.

ಇವನಿಗೆ ಗೊತ್ತಿರೋ ಇನ್ನೊಂದು ಕಲೆ ಎಂದರೆ ಚೆನ್ನಾಗಿ ಭಾಷಣ ಮಾಡೋದು. ಇದನ್ನಾತ ಎಬಿವಿಪಿಯಂತಹ ಚೆಡ್ಡಿ ವಿದ್ಯಾರ್ಥಿ ಸಂಘಟನೆಯಲ್ಲಿದ್ದಾಗಲೇ ಕರಗತ ಮಾಡಿಕೊಂಡಿದ್ದಾನೆ. ಭರ್ಜರಿ ಭಾಷಣ ಬಿಗಿದು, ಲಿಂಗ ಮೆಚ್ಚಿ ಅಹುದಹುದೆನ್ನಬೇಕು ಎಂಬಂತೆ ನುಡಿಗಳನ್ನುದುರಿಸಿ ಜನರನ್ನು ಮರುಳು ಮಾಡಿ ಟೋಪಿ ಹಾಕುವುದರಲ್ಲಿ ನಿಸ್ಸೀಮನೀತ. ಅದಕ್ಕೇನೆ ಈತನಿಗೆ ನಸುಗುನ್ನಿ ಕಾಗೇರಿ ಅಂತ ಜನ ಕರೆಯೋದು.

ಮಾಸ್ತರ್‌ವಾದಕ್ಕೆ ದಸಂಸ ಹೋಳು


ಉಡುಪಿ

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ)ಯು ಉಡುಪಿ ಜಿಲ್ಲಾ ಘಟಕವನ್ನು ಬರ್ಖಾಸ್ತುಗೊಳಿಸಿ, ನೂತನ ಸಮಿತಿಯನ್ನು ರಚಿಸಲಾಗಿದೆ. ಬರ್ಖಾಸ್ತಿಗೆ ಒಳಗಾದ ಸಮಿತಿಯ ಮುಖಂಡರು, ದಸಂಸ (ಅಂಬೇಡ್ಕರ್‌ವಾದ) ದಿಂದ ಹೊರಗೆ ಬಂದು ಹೊಸ ಸಂಘಟನೆಯನ್ನು ಅಸ್ತಿತ್ವಕ್ಕೆ ತಂದಿದ್ದಾರೆ.

ವಿಘಟಿತಗೊಂಡಿರುವ ದಲಿತ ಸಂಘಟನೆಗಳು ಒಂದಾಗುವ ಪ್ರಯತ್ನದಲ್ಲಿರುವಾಗಲೇ ಹೋಳಾಗಿರುವ ದಲಿತ ಸಂಘಟನೆ ಮತ್ತೆ ಮತ್ತೆ ಹೋಳು ಹೋಳಾಗುತ್ತಿರುವುದಕ್ಕೆ ಉಡುಪಿ ಸಾಕ್ಷಿಯಾಗಿದೆ.

ನಕಲಿ ಲೆಟರ್‌ಹೆಡ್!

ದಸಂಸ (ಅಂಬೇಡ್ಕರ್ ವಾದ)ದ ಮೈಸೂರು ವಿಭಾಗೀಯ ಸಂಚಾಲಕರಾದ ಸುಂದರ್ ಮಾಸ್ತರ್ ಹಾಗೂ ಸಂಘಟನಾ ಸಂಚಾಲಕರಾದ ಮಂಗಳೂರಿನ ರೋಹಿತಾಕ್ಷ. ಕೆ ಅವರು ರಾಜ್ಯ ಸಮಿತಿಯ ನಕಲಿ ಲೆಟರ್‌ಹೆಡ್‌ನಲ್ಲಿ ಜಯನ್ ಮಲ್ಪೆ ಸಂಚಾಲಕರಾಗಿರುವ ಜಿಲ್ಲಾ ಘಟಕವನ್ನು ಬರ್ಖಾಸ್ತುಗೊಳಿಸುವ ಆದೇಶಕ್ಕೆ ಸಹಿ ಹಾಕಿದ್ದಾರೆ.



ಜಯನ್ ಮಲ್ಪೆ


2007 ರ ಡಿಸೆಂಬರ್ 15 ರಂದು ಹೊರಡಿಸಿದ ಈ ಬರ್ಖಾಸ್ತು ಆದೇಶದಲ್ಲಿ ಜಯನ್ ಮಲ್ಪೆ ಮೇಲೆ ನಿಷ್ಕ್ರಿಯತೆ ಮತ್ತು ರಾಜ್ಯ ಸಮಿತಿ ಸಭೆಗೆ ನಿರಂತರ ಗೈರುಹಾಜರಾಗುತ್ತಿರುವ ಆರೋಪವನ್ನು ಹೊರಿಸಲಾಗಿದೆ.

ಜಿಲ್ಲಾ ಸಮಿತಿಯು ಹೊಂದಾಣಿಕೆಯ ಕೊರತೆ ಎದುರಿಸುತ್ತಿರುವುಯಲ್ಲಿ ಕಟ್ಟಿ ಬೆಳೆಸಿದವರಲ್ಲಿ ಮುಖ್ಯ ವ್ಯಕ್ತಿ. ಅಂಬೇಡ್ಕರ್ ವಾದವನ್ನು ಓದಿ, ತಿಳಿದುಕೊಂಡು, ಆಚರಣೆಯಲ್ಲಿ ತರಲು ಪ್ರಾಮಾಣಿಕ ಪ್ರಯತ್ನ ನಡೆಸುತ್ತಿರುವ ಜಯನ್, ಜಿಲ್ಲೆಯಲ್ಲಿಯೇ ಇದ್ದುದರಲ್ಲಿ ಅತೀ ಹೆಚ್ಚು ಸಕ್ರಿಯರಾಗಿರುವ ದಲಿತ ಚಿಂತಕ.

ಪ್ರಗತಿಪರರ ಜತೆಗೂ ಗುರುತಿಸಿಕೊಂಡು ಕೋಮುವಾದಿ ವಿರೋಧಿ ಹೋರಾಟದಲ್ಲೂ ತೊಡಗಿಸಿಕೊಂಡಿರುವ ಜಯನ್ ಮಲ್ಪೆಯವರನ್ನು ಮಟ್ಟ ಹಾಕಲು ಬಜೆಪಿಯ ಮಾಜಿ ಶಾಸಕ ಕೆ. ರಘುಪತಿ ಭಟ್ಟ ಕಳೆದೊಂದು ವರ್ಷದಿಂದ ಭಾರೀ ಯತ್ನ ನಡೆಸಿದ್ದಾರೆ.

ಈ ಯತ್ನದಲ್ಲಿ ಪ್ರತಿಬಾರಿಯೂ ಭಟ್ಟರು ವಿಫಲಗೊಂಡಿದ್ದಾರೆ. ಜಯನ್ ಗೆದ್ದು ಬೆಳೆದಿದ್ದಾರೆ. ಆದರೆ ನವೆಂಬರ್

ರಾಜ್ಯ ಸಮಿತಿಯ ಸದಸ್ಯರೇ ಅಲ್ಲದ ಜಯನ್ ಮಲ್ಪೆ ಮೇಲೆ ರಾಜ್ಯ ಸಮಿತಿ ಸಭೆಗೆ ನಿರಂತರ ಗೈರುಹಾಜರಾಗುತ್ತಿದ್ದಾರೆ ಎಂಬ ಆರೋಪ ಹೊರಿಸಲಾಗಿದೆ. ಹೀಗೊಂದು ಗಂಭೀರ ಆರೋಪ ಹೊರಿಸಿದ್ದು ಮೊದಲಿಗೆ ರಾಜ್ಯ ಸಮಿತಿ ಕೂಡ ಅಲ್ಲ ಎನ್ನುವುದು ಗಮನಾರ್ಹ.



ಸುಂದರ್ ಮಾಸ್ತರ್

ಸುಂದರ ಮಾಸ್ತರ್ ಅವರೇ ತಿಳಿಸುವಂತೆ, ನವೆಂಬರ್ 18 ರಂದು ಉಡುಪಿಯ ಬನ್ನಂಜೆ ಗಾಂಧಿ ಭವನದಲ್ಲಿ ರಾಜ್ಯ ಸಂಘಟನಾ ಸಂಚಾಲಕರಾದ ರೋಹಿತಾಕ್ಷ ಅವರ ಅಧ್ಯಕ್ಷತೆಯಲ್ಲಿ ನೆರವೇರಿದ ಜಿಲ್ಲಾ ಸಮಿತಿ ಸಭೆಯಲ್ಲಿ ವಿವಿಧ ತಾಲೂಕು ಮತ್ತು ಜಿಲ್ಲಾ ಪದಾಧಿಕಾರಿಗಳು ವಿಷಯ ಪ್ರಸ್ತಾಪಿಸಿ ಜಿಲ್ಲಾ ಸಂಚಾಲಕರನ್ನು ಬದಲಾಯಿಸಲು

ಜಯನ್‌ರವರು ಏಕಪಕ್ಷೀಯ ನಿರ್ಧಾರ ಮತ್ತು ಪ್ರಜಾಸತ್ತಾತ್ಮಕವಾದ ತೀರ್ಮಾನಗಳಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆಂದು ನಿರ್ಣಯದಲ್ಲಿ ದೂರಲಾಗಿದೆ. ರಾಜ್ಯ ಸಮಿತಿ ನೀಡಿದ ಕಾರಣ ಒಂದಾದರೆ ಸುಂದರ ಮಾಸ್ತರ್ ಕೊಟ್ಟ ಕಾರಣ ಇನ್ನೊಂದು. ಮತ್ತೊಂದು ವಿಶೇಷವೆಂದರೆ ರಾಜ್ಯ ಸಮಿತಿ ನಿರ್ಣಯ ಕೈಗೊಂಡದ್ದು ಜಯನ್ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು. ಆದರೆ ಸುಂದರ ಮಾಸ್ತರ್ ಕ್ರಮ ಕೈಗೊಂಡದ್ದು ಇಡೀ ಜಿಲ್ಲಾ ಸಮಿತಿಯ ಮೇಲೆಯೇ!

ಸುಂದರ ಮಾಸ್ತರ್ ಎಷ್ಟು ಬೇಜವಾಬ್ದಾರಿ ಮೆರೆದಿದ್ದಾರೆಂದರೆ, ಜಿಲ್ಲಾ ಸಮಿತಿಯನ್ನು ಬರ್ಖಾಸ್ತುಗೊಳಿಸಿ ಆದೇಶದ ಪತ್ರದಲ್ಲಿ "ದಿನಾಂಕ 25.11.07 ರಂದು ಧಾರವಾಡದಲ್ಲಾದ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ವಿಚಾರ ಚರ್ಚೆಗೆ ಬಂದು ರಾಜ್ಯ ಸಂಚಾಲಕರನ್ನು ಬದಲಾಯಿಸಲು ನಿರ್ಧರಿಸಲಾಗಿದೆ" ಎಂದು ಬರೆದುದರಿಂದ, ರಾಜ್ಯ ಸಮಿತಿಯ ನಿರ್ಣಯ ಮತ್ತು ರಾಜ್ಯ ಸಂಚಾಲಕರ ಅಭಿಪ್ರಾಯ ಪಡೆದು ಹಾಲಿ ಜಿಲ್ಲಾ ಸಮಿತಿಯನ್ನು ರದ್ದುಗೊಳಿಸಲಾಗಿದೆ ಎಂದು ಆದೇಶ ಪತ್ರದಲ್ಲಿ ಸ್ಪಷ್ಟಪಡಿಸಲಾಗಿದೆ.

ವಡ್ಡರ್ಸೆ ರಘುರಾಮ ಶೆಟ್ಟಿ ಪ್ರಶಸ್ತಿ ಪುರಸ್ಕೃತ ಹವ್ಯಾಸೀ ಪತ್ರಕರ್ತರೂ ಆದ ಜಯನ್ ಮಲ್ಪೆ ದಸಂಸವನ್ನು ಉಡುಪಿ ನಿಂದೀಚೆಗೆ ಮತ್ತೆ ಆರಂಭಿಸಿದ ಯತ್ನದಲ್ಲಿ ಭಟ್ ಯಶಸ್ವಿಯಾಗಿದ್ದಾರೆ. ದಲಿತ ಚಳವಳಿಯ ರಥ ಹಿಂದಕ್ಕೆ ತಳ್ಳಲ್ಪಟ್ಟಿದೆ. ದಲಿತ ಚಳವಳಿಯಲ್ಲಿ ಸಕ್ರಿಯರಾಗಿ ತೊಡಗಿಕೊಂಡಿರುವ ಜಯನ್ ಮಲ್ಪೆ ಹೆಸರು ರಾಜ್ಯ ಸಮಿತಿಯಲ್ಲಿಲ್ಲ, ಮಾವಳ್ಳಿ ಶಂಕರ್ ಪ್ರಧಾನ ಸಂಚಾಲಕರಾಗಿರುವ ರಾಜ್ಯ ಸಮಿತಿಯಲ್ಲಿ ಮಾವಳ್ಳಿಯೂ ಸೇರಿದಂತೆ ಒಟ್ಟು 18 ಮಂದಿ ಇದ್ದಾರೆ. ಒತ್ತಡ ಹೇರಿದ್ದಾರೆ.

ನವೆಂಬರ್ 25 ರಂದು ಧಾರವಾಡದ ಹೋಟೆಲ್ ಮಂದಾರದಲ್ಲಿ ಮಾವಳ್ಳಿ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಕಾರ್ಯನಿರ್ವಾಹಕ ಪದಾಧಿಕಾರಿಗಳ ಸಭೆಯು, ಜಯನ್ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ನಿರ್ಣಯ ಜರುಗಿಸಿ ಸುಂದರ ಮಾಸ್ತರ್ ಹಾಗೂ ರೋಹಿತಾಕ್ಷ ಅವರಿಗೆ ಅಧಿಕಾರ ನೀಡಿದೆ.

ಹುಬ್ಬಳ್ಳಿ ಬಿಟ್ಸ್

ಎತ್ತಿನ ಗುಡ್ಡದಲ್ಲಿ ಗುಂಡಿನ ಮೊರೆತ

ಹುಬ್ಬಳ್ಳಿ-ಧಾರವಾಡಗಳಲ್ಲಿ ಕೇವಲ 15 ದಿನಗಳ ಅವಧಿಯಲ್ಲಿ ಎರಡು ಗುಂಡಿನ ಪ್ರಕರಣಗಳು ನಡೆದಿವೆ. ಮೊದಲನೆಯದು ಹುಬ್ಬಳ್ಳಿಯ ಕಿಮ್ಸ್ ಅಧೀಕ್ಷಕ ಡಾ. ಶಿವಾನಂದ ದೊಡಮನಿಯ ಮೇಲೆ ನಡೆದ ಹತ್ಯಾ ಯತ್ನವಾದರೆ ಅದಾದ ಬರೊಬ್ಬರಿ ಹದಿನೈದು ದಿನಗಳಿಗೆ ಧಾರವಾಡದ ಎತ್ತಿನ ಗುಡ್ಡದಲ್ಲಿ ಮತ್ತೊಂದು ಗುಂಡು



ಹಾರಿದೆ. ಮೊದಲನೆಯ ಪ್ರಕರಣದಲ್ಲಿ ದೊಡಮನಿ ಆಸ್ಪತ್ರೆ ಸೇರಿದರೆ, ಎರಡನೆ ಪ್ರಕರಣದಲ್ಲಿ ಅದೃಷ್ಟವಶಾತ್ ಯಾರಿಗೂ ಗಂಭೀರ ಗಾಯಗಳಾಗಿಲ್ಲ.

ಮಹಾನಗರ ಪಾಲಿಕೆ ಚುನಾವಣಾ ವೈಷಮ್ಯವೇ ಎರಡನೇ ಗುಂಡು ಹಾರುವುದಕ್ಕೆ ಕಾರಣ. ಹೊಡೆದವರು ಮತ್ತು ಹೊಡೆಸಿಕೊಂಡವರು ಇಬ್ಬರೂ ನಾಯಕ ಸಮುದಾಯಕ್ಕೆ ಸೇರಿದವರು. ಬಸವರಾಜ ಪರಸಣ್ಣನವರ್, ಅರ್ಜುನ್ ಪರಸಣ್ಣನವರ್, ಶರಣಪ್ಪ ಪರಸಣ್ಣನವರ್, ಚಾಂಗದೇವ ಪರಸಣ್ಣನವರ್ ಎಂಬುವರು ಮಹಾನಗರ ಪಾಲಿಕೆಯ ಚುನಾವಣಾ ಸಂದರ್ಭದಲ್ಲಿ ವಿರೋಧ ಪಕ್ಷಗಳಿಗೆ ಸಹಾಯ ಮಾಡಿದರು ಎಂಬ ಕಾರಣಕ್ಕೆ, ದೊಡ್ಡ ನಿಂಗಪ್ಪ ತೆಗೂರ್, ಲಕ್ಷ್ಮಣ್ ಜಮ್ನಾಳ್, ಅರ್ಜುನ್ ತಳವಾರ್, ಮಾರುತಿ ದೊಡವಾಡ್ ಮುಂತಾದವರು ಸೇರಿಕೊಂಡು ಅವರ ಮೇಲೆ ಯದ್ವಾತದ್ವಾ ಗುಂಡು ಹಾರಿಸಿದ್ದಾರೆ.

ಹುಬ್ಬಳ್ಳಿ-ಧಾರವಾಡಗಳಿಗೆ ಬಂದೂಕು ಸಂಸ್ಕೃತಿ ಹೊಸದೇನೂ ಅಲ್ಲ, ಹಿಂದೆ ತೊಂಭತ್ತರ ದಶಕದಲ್ಲಿ ಹತನಾದ ಲಾಲವಾಡ ಶೇಖರಪ್ಪ, ಕಳೆದ ನಾಲ್ಕೈದು ವರ್ಷಗಳ ಹಿಂದೆ ಬಲಿಯಾದ ಕಾಂಗ್ರೆಸ್ ಯುವ ಮುಖಂಡ ಉದಯಗೌಡರ್ ಎಲ್ಲರೂ ಬಂದೂಕಿನ ಗುಂಡಿಗೇ ಬಲಿಯಾದವರು.


ಬಂದೂಕುಗಳು ಸುಲಭವಾಗಿ ಕಂಡಕಂಡವರಿಗೆ ಸಿಗುತ್ತಿರುವುದೇ ಇಲ್ಲಿ ಬಂದೂಕು ಸಂಸ್ಕೃತಿ ಬೇರು ಬಿಡಲು ಪ್ರಧಾನ ಕಾರಣವಾಗಿದೆ. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ಮೊದಲಿನಿಂದಲೂ ಬಂದೂಕು, ರಿವಾಲ್ವಾರ್ (ದೇಶೀ) ತಯಾರಿಕೆಗೆ ಹೆಸರು ಮಾಡಿದ ಜಾಗ. ಅಲ್ಲಿ ಅಕ್ರಮವಾಗಿ ತಯಾರಾಗುವ ಬಂದೂಕುಗಳು ಹುಬ್ಬಳ್ಳಿ, ಧಾರವಾಡ, ಬೆಳಗಾಂವ್ ಮುಂತಾದ ಉತ್ತರ ಕರ್ನಾಟಕದ ನಗರಗಳ ಭೂಗತ ಜಗತ್ತಿನಲ್ಲಿ, ರಾಜಕೀಯ ಪುಢಾರಿಗಳ ಗೂಂಡಾ ವಲಯದಲ್ಲಿ ಸದ್ದು ಮಾಡುತ್ತಿರುತ್ತವೆ. ಅಷ್ಟೇ ಏಕೆ, ಹಳ್ಳಿಹಳ್ಳಿಗಳಿಗೂ ಸಪ್ಲೈಯಾಗಿ ಜನರ ಮಧ್ಯೆ ಗುಂಡುಗಳು ಸಿಡಿಯುತ್ತಿವೆ. ಆದರೆ, ಆ ಪ್ರಕರಣಗಳು ಹೊರ ಜಗತ್ತಿಗೆ ಗೊತ್ತಾಗುವುದು ತೀರಾ ವಿರಳ.

ಈ ಹಿಂದೆ ಜಿಲ್ಲೆಯ ಕೆಲ ಗ್ರಾಮಗಳಲ್ಲಿ ಡಕಾಯತಿ ಪ್ರಕರಣಗಳು ನಡೆದಾಗ ಗ್ರಾಮಗಳಿಗೆ ತೆರಳಿದ ಹಿರಿಯ ಪೊಲೀಸ್ ಅಧಿಕಾರಿಗಳ ತಂಡ "ನೀವು ಡಕಾಯತರಿಗೆ ಹೆದರಬೇಡಿ, ನಿಮಗೆ ಸುಲಭವಾಗಿ ಬಂದೂಕು ಲೈಸನ್ಸ್ ಕೊಡುತ್ತೇವೆ. ಡಕಾಯತರನ್ನು ಹಿಡಿಯಿರಿ" ಎಂದು ತಾವು ಮಾಡಬೇಕಾದ ಕೆಲಸವನ್ನು ಗ್ರಾಮಸ್ಥರಿಗೆ ವಹಿಸಿ ಕೊಟ್ಟಿದ್ದರು. ಆಗ ಅನೇಕ ಅಕ್ರಮ ಬಂದೂಕುಗಳು ಸಕ್ರಮವಾಗಿಹೋದವು.

ಇಂದು ಎತ್ತಿನ ಗುಡ್ಡದಲ್ಲಿ ಪ್ರಾಣಹಾನಿಯಾಗಿರದೇ ಇರಬಹುದು. ಆದರೆ ಬೆಳೆಯುತ್ತಿರುವ ಬಂದೂಕು ಸಂಸ್ಕೃತಿಯನ್ನು ನೋಡಿದರೆ ಪರಿಸ್ಥಿತಿ ಹೀಗೇ ಇರುತ್ತೆ ಎಂದು ಹೇಳಲಾಗುವುದಿಲ್ಲ.

ಡಾ. ಶಿವಾನಂದ ದೊಡಮನಿ ಮೇಲೆ ಗುಂಡು ಹಾರಿಸಿದ್ದು ನಕ್ಸಲರು!

ಹೌದಾ ಎಂದು ಹುಬ್ಬೇರಿಸಬೇಡಿ. ಇದು 'ವಿಜಯ ಕರ್ನಾಟಕ' ಎಂಬ ಸೋ ಕಾಲ್ಡ್ ಪತ್ರಿಕೆ ಸತತ ಸಂಶೋಧನೆಯಿಂದ ಕಂಡುಹಿಡಿದ ಅಂಶವೋ ಅಥವಾ ಅವರಿಗೆ ಬಿದ್ದಿರುವ ಕನಸನ್ನೇ ಸಂಶೋಧನೆ ಅಂದ್ಕೊಂಡರೋ ಗೊತ್ತಿಲ್ಲ, ಅಂತೂ ಇಂತಹದ್ದೊಂದು ವರದಿಯನ್ನು ಅವರು ಡಿಸೆಂಬರ್ 28ರ ಸಂಚಿಕೆಯ



ನಾನು ರಾಯಚೂರ ಜಿಲ್ಲೆಯವನು. ಕೆಎಂಸಿ ಡಾಕ್ಟರ್ ದೊಡ್ಡಮನಿಗೆ ಗುಂಡು ಹಾಕಿದ್ದು ನಾನೇ. ಆತ ಮನುಷ್ಯನೇ ಅಲ್ಲ. ರೋಗಿಗಳನ್ನು ಸುಲಿದು ತಿನ್ನುತ್ತಾನೆ. ನನ್ನನ್ನು ಪೊಲೀಸರು ಹಿಡಿಯಲು ಸಾಧ್ಯವಿಲ್ಲ...' ಎಂದು ಸಾಗುತ್ತದೆ ಪತ್ರದ ಒಕ್ಕಣೆ. ಪತ್ರದಲ್ಲಿ ಸಾಕಷ್ಟು ಕಾಗುಣಿತ ದೋಷಗಳಿದ್ದು 'ಶಿರಸಿ' ಅಂಚೆ ಕಚೇರಿಯಿಂದ ಪೋಸ್ಟ್ ಮಾಡಲಾಗಿದೆ.

ಮುಖಪುಟದಲ್ಲಿ ಪ್ರಕಟಿಸಿದ್ದಾರೆ. "ಅಲ್ಲಿ ನಕ್ಸಲೈಟರು ಯಾರನ್ನೇ ಕೊಂದರೂ ಅದನ್ನು ತಾವೇ ಮಾಡಿದ್ದೆಂದೂ, ಅದಕ್ಕೆ ಕಾರಣಗಳನ್ನೂ ಬಹಿರಂಗವಾಗಿ ಕೊಟ್ಟು ತಮ್ಮ ಕೃತ್ಯವನ್ನು ಸಮರ್ಥಿಸಿಕೊಳ್ಳುತ್ತಾರಲ್ಲೀ?" ಎಂದು ಯಾರೋ ಕೇಳಿದ್ದಕ್ಕೆ, "ನಮಗೆ ಕೆಂಪು ಮಸಿಯಲ್ಲಿ ನಕ್ಸಲೀಯನೊಬ್ಬ ಪತ್ರ ಬರೆದಿದ್ದಾನೆ. ಅದನ್ನು ಶಿರಸಿ ಪೋಸ್ಟಾಫೀಸಿನಲ್ಲಿ ಹಾಕಲಾಗಿದೆ. ಕೆಎಂಸಿ ಡಾಕ್ಟರ್ ದೊಡಮನಿ ಬಡ ರೋಗಿಗಳನ್ನು ಸುಲಿದು ತಿನ್ನುತ್ತಾನೆ, ಹಾಗಾಗಿ ಅವನನ್ನು ಕೊಲ್ಲುವ ಪ್ರಯತ್ನ ಮಾಡಿದೆ, ನನ್ನನ್ನು ಪೊಲೀಸರು ಹಿಡಿಯಲು ಸಾಧ್ಯವೇ ಇಲ್ಲ ಎಂದೆಲ್ಲಾ ಆತ ಬರೆದಿದ್ದಾನೆ" ಎಂಬುದಾಗಿ ವಿ.ಕ ಮಂಗಿ ಊದುತ್ತದೆ.

ಆ ನಕ್ಸಲೀಯ ಜಿಲ್ಲೆಯ ಯಾವ ಪತ್ರಿಕೆಗಳಿಗೂ, ಟಿ.ವಿ. ಮಾಧ್ಯಮ ಗಳಿಗೂ ಕಳಿಸದೇ ಕೇವಲ ವಿ.ಕ.ಕ್ಕೆ ಮಾತ್ರ ಏಕೆ ಕಳಿಸಿದ ಎಂಬುದನ್ನಾಗಲೀ, ಆ ತಥಾಕಥಿಥ ಪತ್ರದ ಯಥಾರ್ಥತೆಯನ್ನು ಒರೆಗೆ ಹಚ್ಚಿ ನೋಡುವುದನ್ನಾಗಲೀ ಮಾಡುವ ಗೊಡವೆಗೆ ಹೋಗದೇ ಅದನ್ನು ಮುಖ ಪುಟದಲ್ಲಿ ಪ್ರಕಟಿಸಿ ತನ್ನ ಪತ್ರಿಕಾಧರ್ಮವನ್ನು ಪ್ರದರ್ಶಿಸಿದೆ! ವಾಸ್ತವದಲ್ಲಿ ಇದು ವಿ.ಕ ಪತ್ರಿಕೆಯ ಸಂಶೋಧನಾ ಪತ್ರಿಕೋದ್ಯಮದ ಪರಿ.

ಸೋಜಿಗದ ಸಂಗತಿಯೆಂದರೆ, ಇಂತಹದ್ದೊಂದು ಸುದ್ದಿ ಪ್ರಕಟವಾಗುತ್ತಿದ್ದಂತೆ ಪೊಲೀಸರು ದೊಡಮನಿ ಹತ್ಯಾ ಆರೋಪಿಗಳನ್ನು ಬಂಧಿಸುವುದಕ್ಕಾಗಿ ತಾವು ಮಾಡಬೇಕಾದ ಸಂಶೋಧನೆಯನ್ನು ಅರ್ಧಕ್ಕೆ ನಿಲ್ಲಿಸಿ ವಿ.ಕ.ಗೆ ಬಂದಿದೆಯೆನ್ನಲಾದ ಪತ್ರದ ಹಿಂದೆ ಬಿದ್ದಿದ್ದಾರೆ. ಪ್ರಕರಣದಲ್ಲಿ ನೇರವಾಗಿ ಭಾಗಿಯಾಗಿರುವ ದೊಡಮನಿಯ ಹೆಂಡತಿ ಚಂದನರಾಣಿ, ಕಾಂಗ್ರೆಸ್ ಮುಖಂಡರುಗಳಾದ ಬಂಗಾರೇಶ, ಹಿರೇಮಠ್, ಅನಿಲ ಪಾಟೀಲ್, ವಿಜಯ ಕುಲಕರ್ಣಿ ಮುಂತಾದವರು ತಾವು ಬಚಾವಾಗುವುದಕ್ಕೆ ಪೊಲೀಸರೊಂದಿಗೆ ಸೇರಿ ಈ ನಕ್ಸಲೀಯ ಪತ್ರವನ್ನು ಬರೆದಿದ್ದರೂ ಬರೆದಿರಬಹುದು.


ಅದನ್ನೆಲ್ಲಾ ವಿ.ಕ ಯಾಕೆ ಯೋಚಿಸುತ್ತೆ ಹೇಳಿ? ಒಂದು ಸೆನ್ಸೇಷನಲ್ ಸುದ್ದಿ ಸಿಗ್ತು ಅಂತ ಪ್ರಕಟಿಸಿಬಿಟ್ಟರು ಅಷ್ಟೆ. ಆದರೆ, ವಿ.ಕದ ದುರಂತಕ್ಕೆ ಅದು ಸೆನ್ಸೇಷನ್ ಆಗಲೇ ಇಲ್ಲ!

ಬಾಬಾ ರಾಮ್‌ದೇವ್ ಅವರ ಡಬಲ್ ಬ್ಲೇಡ್ ಶಿಬಿರ!

ಹುಬ್ಬಳ್ಳಿಯ ರೈಲ್ವೇ ಮೈದಾನದಲ್ಲಿ ಯೋಗ ಗುರು ರಾಮ್‌ದೇವನ ಶಿಬಿರ ಶುರುವಾಗಿದೆ. ವಿಆರ್‌ಎಲ್‌ನ ಮಾಲಿಕ ವಿಜಯ ಸಂಕೇಶ್ವರ್ ಮತ್ತವನ ಪಟಾಲಂ ಇದಕ್ಕೆ ಸಾರಥ್ಯ ವಹಿಸಿದೆ. ಆದರೆ, ಈ ಯೋಗ ಶಿಬಿರದಲ್ಲಿ ಭಾಗವಹಿಸಲು ನೀವು ಕಕ್ಕಬೇಕಾದ ಫೀಸನ್ನು ಗಮನಿಸಿದರೆ ರಾಮ್‌ದೇವ್ ಒಬ್ಬ ಯೋಗ ಗುರುವೋ ಅಥವಾ ಭೋಗ ಗುರುವೋ ಎಂಬ ಅನುಮಾನ ಬಾರದಿರಲಾರದು.

ಇಲ್ಲಿ ಪ್ರವೇಶ ಪಡೆಯುವುದಕ್ಕೆ ಬೇರೆ ಬೇರೆ ರೀತಿಯ ಎಂಟ್ರನ್ಸ್ ಫೀಗಳಿವೆ. ಪ್ಲಾಟಿನಂ ಪ್ರವೇಶ ಪತ್ರಕ್ಕೆ 2,100 ರೂ.ಗಳು, ಡೈಮಂಡ್ ಪತ್ರಕ್ಕೆ 1,100 ರೂ.ಗಳು, ಗೋಲ್ಡ್ ಪತ್ರಕ್ಕೆ 500 ರೂ.ಗಳು ಮತ್ತು ಕೊನೆಯದಾಗಿ ಸಿಲ್ವರ್ ಪತ್ರಕ್ಕೆ 100 ರೂ.ಗಳು. ಈಗಾಗಲೇ ಹದಿನೈದು ಸಾವಿರಕ್ಕೂ ಹೆಚ್ಚಿನ ಜನ. ಈ ಪತ್ರಗಳನ್ನು ಖರೀದಿಸಿದ್ದಾರೆ.

ರಾಮ್‌ದೇವ್ ಅವರು ಹರಿದ್ವಾರದಲ್ಲಿ 'ಪತಂಜಲಿ ಯೋಗ ಪೀಠ' ಸ್ಥಾಪನೆ ಮಾಡಲು ಹೊರಟಿದ್ದಾರೆ. ಆದರ ಕಟ್ಟಡ ನಿರ್ಮಾಣಕ್ಕೆ, ವೈದ್ಯಕೀಯ ಪೀಠೋಪಕರಣ ಖರೀದಿಗೆ 500 ಕೋಟಿ ಖರ್ಚಾಗುತ್ತದಂತೆ. ಅಷ್ಟೊಂದು ಮೊತ್ತದ ಹಣವನ್ನು ಗುಡ್ಡೆಹಾಕುವುದಕ್ಕಾಗಿ ಈ ಯೋಗ ಶಿಬಿರ ಎಂಬ ಬ್ಲೇಡ್ ಕಂಪೆನಿಯನ್ನು ರಾಮ್‌ದೇವ್ ಶುರು ಮಾಡಿ ಕಂಡವರ ಜೇಬಿಗೆ ಕೈಹಾಕಿದ್ದಾರೆ.



"ವೈದ್ಯಕೀಯ ಜಗತ್ತು ಸಾಧಿಸಲಾಗದಿದ್ದುದ್ದನ್ನು ನಾನು ಸಾಧಿಸುತ್ತೇನೆ, ಎಲ್ಲಾ ರೋಗಗಳನ್ನು ಯೋಗ ದಿಂದಲೇ ಗುಣಪಡಿಸುತ್ತೇನೆ" ಎಂದು ಬಡಾಯಿ ಕೊಚ್ಚುವ ರಾಮ್‌ದೇವ್ ತಾನು ನಡೆಸುವ ಯೋಗ ಶಿಬಿರಗಳ ಪಕ್ಕದಲ್ಲಿ ಔಷಧಿ ಅಂಗಡಿಗಳನ್ನೂ ತೆರೆಯು ತ್ತಾನೆ. ಅಲ್ಲಿ ಅಲೋಪಥಿಕ್ ಆಯುರ್ವೇದಿಕ್ ಔಷಧಿಗಳನ್ನೇ ನಿಡುತ್ತಾನಾದರೂ ಬಡಾಯಿ ಕೊಚ್ಚುವುದನ್ನು ಮಾತ್ರ ಬಿಡುವುದಿಲ್ಲ. "ಯೋಗದಿಂದ ರೋಗ ಗುಣಪಡಿಸ್ತೇನೆ ಅಂತೀರಿ ಆದರೆ ಔಷಧಿಗಳನ್ನೂ ಮಾರಾಟ ಮಾಡ್ತೀರಾ?" ಅಂತ ಯಾರೋ ಪತ್ರಕರ್ತರು ರಾಮ್ ದೇವ್ ಅವರನ್ನು ಕೇಳಿಯೇಬಿಟ್ಟರು. ಅದಕ್ಕೆ ಪಾಪ ಅವರ ಹತ್ತಿರ ಉತ್ತರವಿರಲಿಲ್ಲ, ಅದಕ್ಕೇ ನಕ್ಕು ಸುಮ್ಮನಾಗಿ ಬಿಟ್ಟರು. ನೆನಪಿರಲಿ, ಎಂಟ್ರೆನ್ಸ್ ಫೀ ಅಲ್ಲದೇ ನೀವು ಈ ಔಷಧಿಗಳಿಗೂ ದುಡ್ಡು ಕಕ್ಕಬೇಕು. ಹೇಗಿದೆ ರಾಮ್‌ದೇವ್ ಅವರ ಡಬಲ್ ಬ್ಲೇಡ್ ಶೇವ್?

ಸ್ನೇಹಿತನಾಗಿರುವುದೇ ಸ್ನೇಹಿತನನ್ನು ಗಳಿಸುವುದಕ್ಕಿರುವ ಏಕೈಕ ಮಾರ್ಗ -ರಾಲ್ಫ್ ವಾಲ್ಡೋ ಎಮರ್ಸನ್.

ಟ್ಟುತ್ತಾನೆ. ಸುಂದರ ಮಾಸ್ತರ್ ಅವರು ಇನ್ನೆಲ್ಲಾ ಕಿತಾಪತಿ ಮಾಡಲು ಉಪಯೋಗಿಸಿದ್ದು ರಾಜ್ಯ ಸಮಿತಿಯ ನಕಲು ಲೆಟರ್ ಹೆಡ್‌ನ್ನು!

ರಾಜ್ಯ ಸಮಿತಿಯ ಲೆಟರ್‌ಹೆಡ್‌ನಲ್ಲಿ ರಾಜ್ಯ ಸಮಿತಿ ಸಮಿತಿಯಿಂದ ಬಂದ ಪತ್ರದಲ್ಲಿನ ಅಕ್ಷರಗಳ ಮೇಲೆ ಬಿಳಿ ಕಾಗದವಿಟ್ಟು ಕಲರ್ ಜೆರಾಕ್ಸ್ ತೆಗೆದು ಹೊಸ ದೊಂದು ಲೆಟರ್‌ಹೆಡ್‌ನ್ನು ಉಡುಪಿಯಲ್ಲೇ ಸೃಷ್ಟಿಸಿದ ಮಾಸ್ತರ್‌ಗಿರಿಗೆ ಬಿಜೆಪಿ ನಾಯಕರೇ ಡೈರೆಕ್ಟರ್?

ಮಾಸ್ತರ್ ಗಿರಿ

ಬಿಜೆಪಿ ನಾಯಕರೊಂದಿಗೆ ಕೈಜೋಡಿಸಿ, ಉಡುಪಿ ನಗರಸಭೆಯ ಶೇ.18ರ ನಿಧಿಯನ್ನು ದುರುಪಯೋಗ ಪಡಿಸಿಕೊಂಡ ಕುಖ್ಯಾತಿ ಸುಂದರ ಮಾಸ್ತರ್‌ರವರದ್ದು.

ಬಿಜೆಪಿ ಋಣ ತೀರಿಸಲು ಕಳೆದ ನಗರಸಭಾ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲುವಿಗಾಗಿ ದಲಿತ ಕಾಲನಿಯಲ್ಲಿ ಬಿರಿಯಾನಿ ವಿತರಿಸಿದ್ದು ಮಾಸ್ತರ್‌ರವರ ಪಾಲಿಗೆ "ಎಮ್ಮೆ"ಯ ವಿಚಾರ. ಮಾತ್ರವಲ್ಲ, ದಲಿತ ಚಳವಳಿಯ ಸಕ್ರಿಯತೆಗೆ ಉದಾಹರಣೆ.

ಮೂವರು ಹೆಂಡಿರ ಮುದ್ದಿನ ಗಂಡನಾಗಿರುವ ಸುಂದರ್ ಅವರು ಉಡುಪಿ ತಾಲೂಕಿನ ಕೊಡವೂರು ಸರಕಾರಿ ಶಾಲೆಯ ಮುಖ್ಯ ಮಾಸ್ತರ್ ಬೇರೆ!


ಸುಂದರ ಮಾಸ್ತರ್ ಸರ್ವಾಧಿಕಾರಿಯಂತೆ ವರ್ತಿಸುತ್ತಾ ದಲಿತ ಚಳವಳಿಯ ರಥವನ್ನು ಹಿಂದಕ್ಕೆಳೆಯುತ್ತಿದ್ದಾರೆಂದು ಆರೋಪಿಸುವ ಜಯನ್ ಮಲ್ಪೆ ಡಿ.30 ರಂದು ಸಮಾನ ಮನಸ್ಕ ಚಿಂತಕರ ಸಭೆ ನಡೆಸಿ, ಹೊಸ ಸಂಘಟನೆ ಮತ್ತು ಮುಂದಿನ ಹೋರಾಟದ ರೂಪು-ರೇಷೆ ಸಿದ್ಧಪಡಿಸಿದ್ದಾರೆ.

-ಶ್ರೀರಾಮ ದಿವಾಣ

ಸೌಹಾರ್ದದಲ್ಲೂ ಭಯೋತ್ಪಾದನೆ ಕಾಣುವ ಮಾಸ್ತರ್

ದಸಂಸ ಜಿಲ್ಲಾ ಸಮಿತಿಯನ್ನು ಬರ್ಖಾಸ್ತುಗೊಳಿಸಿದ ಸುಂದರ ಮಾಸ್ತರ್ ಸ್ಥಳೀಯವಾಗಿ ಮತ್ತು ಮೌಖಿಕವಾಗಿ ಕೊಡುತ್ತಿರುವ ಕಾರಣ ಮಾತ್ರ ತುಂಬಾ ಹಾಸ್ಯಾಸ್ಪದವಾದದು.

ಡಿ.9 ರಂದು ಪ್ರಗತಿಪರ ಸಂಘಟನೆಗಳು ಒಟ್ಟಾಗಿ ಆಯೋಜಿಸಿದ ಸೌಹಾರ್ದ ಸಾಹಿತ್ಯ ಸಮ್ಮೇಳನಕ್ಕೆ ದಸಂಸ (ಅಂಬೇಡ್ಕರ್‌ವಾದ) ಜಿಲ್ಲಾ ಸಮಿತಿ ಸಹಭಾಗಿ ಸಂಘಟನೆಯಾಗಲು ಒಪ್ಪಿಗೆ ಕೊಟ್ಟು ಸಕ್ರಿಯವಾಗಿ ತೊಡಗಿಸಿಕೊಂಡದ್ದು ಅಪರಾಧವಂತೆ!


ಮಾವಳ್ಳಿ ಶಂಕರ್

ಸಾಹಿತ್ಯ ಸಮ್ಮೇಳನ ಹಮ್ಮಿಕೊಂಡ ಸಂಘಟನೆಗಳಲ್ಲಿ ಕೆಎಫ್‌ಡಿ ಸಂಘಟನೆಯೂ ಒಂದಾಗಿದ್ದು, ಇದು ಒಂದು ಭಯೋತ್ಪಾದಕ ಸಂಘಟನೆ ಎನ್ನುವುದು ಮಾಸ್ತರ್‌ವಾದ.

ಆರೋಪಕ್ಕೆ ಸಾಕ್ಷಿ ಕೇಳಿದರೆ ಆಕಾಶ-ಭೂಮಿ ನೋಡುವ ಸುಂದರ ಮಾಸ್ತರ್‌ರವರಿಗೆ, ಬೆಂಗಳೂರಿನಲ್ಲಿ ಮಾವಳ್ಳಿ ಶಂಕರ್ ಸಹ ಕೆಎಫ್‌ಡಿ ಜತೆಗೆ ಸಹಭಾಗಿಯಾಗಿ ಪ್ರತಿಭಟನಾ ಸಭೆಯಲ್ಲಿ ಭಾಗವಹಿಸಿದ್ದು ಮತ್ತು ಭಾಷಣದ ವೇದಿಕೆಯನ್ನು ಹಂಚಿಕೊಂಡದ್ದು ಯಾವುದೂ ನೆನಪಿಲ್ಲ.

ಬಿಜೆಪಿ ಮಾಸ್ತರ್‌ರಿಗೆ ಮುಂದಿನ ಗುರಿ ಮಾವಳ್ಳಿ ಶಂಕರ್ ಆದರೂ ಯಾರೂ ಆಶ್ಚರ್ಯ ಪಡಬೇಕಾದ್ದಿಲ್ಲ.

ಒಂದು ಚೂರನಾರ ರಾಮನ ಗುಣ ಬ್ಯಳಿಸಿಗಳಿರ್ಲಾ

ಥೂತ್ತೇರಿ

ಯಾಹೂ

ಕಷ್ಟಪಟ್ಟು ಪ್ರೇಮ ಮಾಡಿ, ಮದುವೆಯಾಗಿ, ಅದಕ್ಕಿಂತಲೂ ಕಷ್ಟಪಟ್ಟು 'ಪ್ರೀತಿ ಏಕೆ ಭೂಮಿ ಮೇಲಿದೆ' ಎಂಬ ಅಸಂಬದ್ಧ ಹೆಸರಿನ ಸಿನಿಮಾ ಮಾಡಿ, ಸುಧಾರಿಸಿಕೊಂಡು ಕುಳಿತಿರುವಾಗಲೇ ಪ್ರೇಮ್ ಮೇಲೆ ವಾನರ ಸೇನೆ ದಾಳಿ ಮಾಡಿದೆಯಂತಲ್ಲಾ. ಈ ದಾಳಿಕೋರ ಗುಂಪಿನ ಗಡವನ ಪ್ರಕಾರ ಪ್ರೇಮ್ ಮಾಡಿರುವ ಚಿತ್ರದಲ್ಲಿ "ರಾಮ ಇಲ್ಲ, ಎಲ್ಲಾ ಅಲ್ಲಾ" ಎಂಬ ಹಾಡಿದೆಯಂತೆ. ಈ ರೀತಿ ಹಿಂದೂ ಧರ್ಮದ ದೇವತೆಗೆ ಅವಮಾನ ಮಾಡುವಾಗ ಜೊತೆಗೆ ಮುಸ್ಲಿಂ ದೇವರು ಮತ್ತು ಕ್ರಿಶ್ಚಿಯನ್ ದೇವರನ್ನು ಸೇರಿಸಿಕೊಳ್ಳಬೇಕಿತ್ತು. ಈಗಲೂ ಸೇರಿಸಿ ಬಿಡಿ ಎಂಬುದಾಗಿದೆಯಂತಲ್ಲಾ. ಈ ರೀತಿ ಅಸಂಬದ್ಧವಾಗಿ ವಾದಿಸುವವನು ಏನ್ಹೇಳುತ್ತಾನೆಂದು ಪ್ರೇಮ್‌ರಿಂದಲೇ ಫೋನ್ ನಂಬರ್ ತೆಗೆದುಕೊಂಡು ಫೋನ್ ಮಾಡಿದರೇ ಸಿಕ್ಕೇ ಬಿಡಬೇಕೆ! ಗುರುತು ಹೇಳಿಕೊಳ್ಳದೆ, ದಾಳಿ ಮಾಡಿದೆ.

"ಹಲೋ ವಸಂತ ಎಲ್ಲಿದ್ದಿಲಾ?"

"ಇಲ್ಲೇ ಕಪಾಲಿ ಟಾಕೀಸ್ ಗಲ್ಲಿಲಿದ್ದೀನಿ ಕಣಣ್ಣ."

"ಅಲ್ಲೇನು ಮಾಡ್ತಯಿದ್ದಿಲಾ ನೀನು?"

"ಇಲ್ಲೆ ಅವುತಗಂಡಿದ್ದಿನಿ ಕಣಣ್ಣ."

"ಅದ್ಯಾಕ್ಲ ಅವುತಗಂಡಿದ್ದಿ ಕೋತಿ ಬಡ್ಕೆತ್ತುದ್ದೆ?"

"ಪ್ರೀತಿ ಯಾಕೆ ಭೂಮಿ ಮ್ಯಾಲದೆ" ಅನ್ನೋ ಸಿನುಮ ರಿಲೀಸ್ ಮಾಡದಂಗೆ ತಡಿಬೇಕು ಅಂತ ನಮ್ಮೋರ್ಯಲ್ಲ ಬಂದ್ರು ಕಣಣ್ಣ. ಅದ್ಕೆ ನಾನು ಬಂದಿದ್ದೆ."


"ನಿಮ್ಮೋರು ಅಂದ್ರ್ಯಾರ್ಲ?"

"ಸೀರಾಮ ಸೇನೆ ಸದಸ್ಯರು."

"ಶ್ರೀರಾಮ ಸೇನೆ ಅಂದ್ರೇನು ಗೊತ್ತೇನ್ಲ?"

"ಗೊತ್ತಿಲ್ಲ ಹೇಳಣ್ಣ."

"ಶ್ರೀರಾಮ ಸೇನೆ ಅಂದ್ರೆ ಕಪಿಸೇನೆ. ಅವು ಯಾರ ತೋಟ ಅಂತ ನೋಡಲ್ಲ, ನುಗ್ಗಿ ಹಣ್ಣು ಕಾಯಿ ಈಚು ಹೂವು ಮೊಗ್ಗು ಒಂದುನೂ ಬುಡದಿಲ್ಲ. ಯಾಕೆ ಗೊತ್ತಾ?"



"ಯಾಕಣ್ಣ?"

"ಮದ್ಲೆ ಕೋತಿ ಬಡ್ಕೆತ್ತವಲವೆ, ಅವುಕೆ ಯಾವ ತಿಳಿವಳಿಕೆನೂ ಇರದಿಲ್ಲ, ತೋಟ ಹಾಳು ಮಾಡದಷ್ಟೇ ಅವುರ ಕ್ಯಲ್ಸ. ಅಂತ ಸೇನೆ ಯಾಕ್ಲ ಸೇರಿದೆ? ಆ ನಾರಾಯಣಗೌಡ್ರ ವೇದಿಕೆನಾರ ಸೇರಿವುಲ."

"ಏ, ಅವುರು ಓಡಿಸಿಗಂಡು ಬಂದಿದ್ದ ನೋಡಿದ್ರೆ ನಾವೆ ವಾಸಿ ಅನ್ನುಸ್ತದೆ ಕಣಣ್ಣ."

"ಅವುರ್‍ಯಾಕ್ಲ ಓಡಿಸಿಗಂಡು ಬಂದ್ರು?"

"ನಾವು ಸಿನುಮ ರಿಲೀಜ್ ತಡಿಯಕ್ಕೆ ಅಂತ ಹೋಗಿದ್ವೊ. ಅವುರು ಓಡಿಸಿಗಂಡು ಬಂದ್ರು. ನಮ್ಮೋರ್ಯಲ್ಲ ತಪ್ಪಿಸಿಗಂಡ್ರು. ನಾನು ಕಪಾಲಿ ಟಾಕೀಸ್ ಗಲ್ಲಿಲಿದ್ದಿನಿ."

"ಪಕ್ಕದಲ್ಲಿರೊ ರಾಮಕೃಷ್ಣ ಲಾಡ್ಜತ್ರ ಒಂದು ಮರ ಅದೆ. ಅದ್ರು ಮ್ಯಾಕ್ಕತಿಗಳ್ಳ."

"ಯಾಕಣ್ಣ ಅಂಗಂತಿ?"

"ಇನ್ನೆನ್ಲ ಮತ್ತೆ ಪೋಲಿ ಬಡ್ಕತ್ತುದ್ದೆ? ಯಾವನೊ ರಾಮ ಇಲ್ಲ ಅಂದೇಟಿಗೆ ಇಲ್ದಂಗಾಯ್ತನೇನ್ಲ? ಈ ದೇಶದಲ್ಲಿರೊ ಲಕ್ಷಾಂತರ ಗುಡಿಗಳು ಇಲ್ದಂಗಾಯ್ತವೇನ್ಲ?"

"ನಿಜ ಕಣಣ್ಣ ನೀನೇಳದು."

"ಅಲ್ಲ ಕಣಲೇ, ನೀನು ಹೋಗಿ ಹೋಗಿ ಆ ಕೋತಿಗಳ ಜ್ವತೆ ಸೇರಿಕಂಡು ಅವುರಂಗೆ ಆಗಿದ್ದಿಯಲ್ಲಾ, ನಿನ್ನದೆ ಅದ ಸ್ವಂತ ಮೆದುಳಿಲ್ವೇನ್ಲ?"

"ಅದೆ ಕಣಣ್ಣ"

"ಇದ್ರೆ ಯೋಚನೆ ಮಾಡ್ಲ, ಪಾಪ ರಾಮ ನಮ್ಮ ನಿಮ್ಮಂಗೆ ಇದ್ದ ಕಂಡ್ಲ, ಅವುರಪ್ಪ ದಸರಥ, ಅವುರವ್ವ ಕೌಸಲ್ಯ, ಅವುನ ತಮ್ಮ ಶತ್ರುಘ್ನ...."

"ಲಕ್ಷ್ಮಣ ಅಲವೇನಣ್ಣ?"

"ಅವುನು ಅವುರ ಚಿಗವ್ವನ ಮಗ ಕಂಡ್ಲ, ರಾಮನಿಗೆ ಮಿಥಿಲಾ ಪಟ್ನದ ಜನಕರಾಜನ ಮಗಳ ಕೊಟ್ಟದ್ರು. ಒಂದು ಪೈಸ ವರದಕ್ಷಿಣೆ ಇಲ್ದೆ ಮದುವೆ ನಡದಿತ್ತು."

"ಅದು ನನಗೂ ಗೊತ್ತು ಕಣಣ್ಣ"

"ಇದ್ಯಲ್ಲ ಇರುವಾಗ ರಾಮ ಇಲ್ಲ ಅಂದೇಟಿಗೆ ಅದ್ಯಂಗೆ ಇಲ್ದಂಗಾಯ್ತನೆ? ಅವುನ ಕಳ್ಳು ಬಳ್ಳಿ ಕಿತಿಯೇನೂ?"

"ಅದ್ನೆ ಕಣಣ್ಣ ನಾವು ಕೇಳಕ್ಕೆ ಬಂದಿದ್ದು."

"ಪೋಲಿ ಬಡ್ಕೆತ್ತವ, ಪ್ರೀತಿ ಯಾಕೆ ಭೂಮಿ ಮ್ಯಾಲದೆ ಅಂತ ಕೇಳೋನು, ರಾಮನ ಬಗ್ಗೆನು ಕೇಳ್ತನೆ, ಉತ್ರ ಕೊಡ್ತನೆ. ಕೊಡದಿದ್ರೆ ಹಾಳುಬಿದ್ಹೋಗ್ಲಿ, ನಿಮ್ಮಪ್ಪನ ಮನೆ ಗಂಟೇನೋಯ್ತು?"

"ಅಲ್ಲ ಕಣಣ್ಣ, ರಾಮದೇವರೆ ಇಲ್ಲ ಅಂದ್ರೆ ಸುಮ್ಮನಿರಕ್ಕಾಯ್ತದೇನಣ್ಣ?"

"ಅಯ್ಯೋ ಮಂಗಮುಂಡೆದೆ, ರಾಮ ನಿನ್ನಂಗೆ ನರಮನ್ಸ ಕಂಡ್ಲ. ಅವುನು ನಿನ್ನಂಗೆ ಮದಿವಾಗಿದ್ದ. ಕಿರಿ ಹೆಡತಿ ಮಾತ ಕೇಳಿದ ಅಪ್ಪನ ದ್ಯಸಿಂದ ಕಾಡಿಗೋದ. ಅಲ್ಲಿ, ಬಿಲ್ಲು ಬಾಣದಲ್ಲಿ ಇಲಿಯಿಂದ ಹಿಡಿದು ಹುಲಿವರಿಗೂ ಏಡಕಂಡು ತಿಂದು ಜೀವವುಳಿಸಿಗಂಡು ತಿರಗಿದ್ದ. ಹೆಡತಿ ಬಸುರಾದ್ರೆ ಕಾಡಲ್ಲಿ ಬಾಣಂತನ ಮಾಡೋರ್‍ಯಾರು ಅಂತ ದೂರ ಮನಿಕತ್ತಿದ್ದ. ರಾವಳ ಬಂದು ಅವುನೆದ್ದಿ ಹೊತಗಂಡೋದ. ಈಗಿರೋ ನೀವೆಲ್ಲ ಆಗ ಕಪಿಸೈನ್ಯ ಆಗಿದ್ರಿ. ಆಗ ನಿಮ್ಮ ಸಾಕಾರದಿಂದ ರಾವಳನ ಮ್ಯಾಲೆ ಯುದ್ಧ ಮಾಡಿ ಸೀತೆ ತಂದು ಪಟ್ನ ಸೇರಿಕಂಡ. ನೀವೆಲ್ಲ ತಿರಗ ಕಾಡುಸೇರಿಕಂಡ್ರಿ. ತಿರಗ ಯಾಕ್ಲ ಬಂದ್ರಿ ಇಲ್ಲಿಗೆ?"

"ಊರಲ್ಲಿದ್ದೇನು ಮಾಡದಣ್ಣ? ನೀನೇ ನೋಡಿದಿಯಲ್ಲ ಊರಲ್ಲಿ ಯಾರಾರ ಇರಕ್ಕಾದತೆ? ಅದ್ಕೆ ಬಂದಿಲ್ಲಿ ಸೀರಾಮಸೇನೆ ಸೇರಿಕಂಡೆ."

"ರಾಮಸೇನೆ ಸೇರಿಕಂಡ್ರೆ, ಒಂದು ಚೂರನಾದ್ರು ರಾಮನ ಗುಣ ಕಲಿಯಕ್ಕೆ ಟ್ರೈಮಾಡ್ಕೆ. ಅವುನು ಹಿರಿಯೋರಿಗೆ, ಜ್ವತೆಲುಟ್ಟಿದೋರಿಗೆ ಎಷ್ಟು ಗೌರವ ಕೊಡತಿದ್ದ ಗೊತ್ತೆ? ಕಪಿಸೈನ್ಯ ಕೂಡ ಅವುನಿದ್ರೆ ಒಂಚೂರು ಗಲಾಟ ಮಾಡ್ದೆ ಏನ್ಹೋಡಿ ಕಂಡು, ಕ್ಯರಕಂಡು ಸುಮ್ಮನೆ ಕುಂತಗಳವು. ಬೇಜಾರಾದ್ರೆ ರಾಮನ ಭಜನೆ ಮಾಡವು. ಅಂತ ಗುಣ ಬ್ಯಳಿಸಿಗಳಿರ್ಲಾ.

"ಆಯ್ತು ಕಣಣ್ಣ, ನೀನೆಲ್ಲಿದ್ದಿಯಣ್ಣ?"

"ಇಲ್ಲೆ ಪತ್ರಿಕೆ ಆಪೀಸಲ್ಲಿ."

"ಯಾವ ಪತ್ರಿಕೆ ಸೇರಿದಣ್ಣಾ?"

"ಗೌರಿ ಲಂಕೇಶ್ ಪತ್ರಿಕೆಲಿದ್ದಿನಿ."

"ಆ ಲಂಕಿಣಿ ಪತ್ರಿಕೆ ಯಾಕ್ ಸೇರಿದಣ್ಣಾ? ಅವ್ರುಳಿಗೂ, ನಮಿಗೂ ಆಗದಿಲ್ಲ ಕಣಣ್ಣಾ!"

"ಥೂತ್ತೇರಿ!!!


ಸುಳ್ಯ ತಾಲೂಕು ಸಾಹಿತ್ಯ ಸಮ್ಮೇಳನ 'ದ್ರೌಪದಿ-ದುಶ್ಯಾಸನ' ಪ್ರಸಂಗ

ಒಂದು ಪತ್ರ

"ನನ್ನ ಗುರು ಋಣವನ್ನು ಅವನು ತೀರಿಸಲಿಲ್ಲ... ಕೆ.ಪಿ. ಸುರೇಶರಿಗೆ ರಾಜಕಾರಣಿಯೊಬ್ಬ ಬೈದಾಗ ಬೆಂಬಲಕ್ಕೆ ಬಂದ ಸುಳ್ಯದ ಸಾಹಿತಿಗಳು ಅರವಿಂದನೆಂಬ ದುಶ್ಯಾಸನ ದ್ರೌಪದಿಯಂತಾಗಿರುವ ನನ್ನ ಸೀರೆ ಸೆಳೆಯುತ್ತಿದ್ದರೂ ಮೌನವಾಗಿದ್ದರು...." ಇವು ಜನವರಿ 5 ರಂದು ನಡೆಯುವ ಸುಳ್ಯ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಪ್ರಭಾಕರ ಶಿಶಿಲರು ಸ್ಥಳೀಯ ಸುದ್ದಿ ಬಿಡುಗಡೆಯ ವಿಶೇಷ ಸಾಹಿತ್ಯ ಸಂವಾದ ಅಂಕಣದಲ್ಲಿ ಬರೆದ ಮಾತುಗಳು. ಆದರೆ ನಾನಾಗಲಿ, ಸಂವಾದದಲ್ಲಿ ಭಾಗವಹಿಸಿದ ಯಾರೇ ಆಗಲಿ, ಸಂವಾದ ನಡೆಸಿದ ಸುದ್ದಿ ಬಿಡುಗಡೆಯ ಸಂಪಾದಕರಾಗಲಿ ಪ್ರಶ್ನೆ ಇಟ್ಟುಕೊಂಡದ್ದು:

1. ಸಮ್ಮೇಳನದ ಪೂರ್ವಾಧ್ಯಕ್ಷರ ಪತ್ರ ಮತ್ತು ಸಲಹೆಗಳನ್ನು ಧಿಕ್ಕರಿಸಿ ಸಾಹಿತ್ಯ ಪರಿಷತ್ತು ತನ್ನ ಕಾರ್ಯಕಾರಿ ಸಮಿತಿಯ ಸದಸ್ಯರನ್ನೇ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವುದು ಸರಿಯೇ?

2. ಜಿ.ಎಸ್. ಉಬರಡ್ಕರನ್ನು ಕಳೆದ ಬಾರಿ ಅಧ್ಯಕ್ಷತೆ ವಹಿಸಲು ಕೇಳಿಕೊಂಡಾಗ ಈ ಸಮ್ಮೇಳನಕ್ಕೆ ನಾನು ಅಧ್ಯಕ್ಷನಾಗಲಾರೆ, ಮುಂದಿನ ಬಾರಿ ಆಗುತ್ತೇನೆ ಎಂದು ಹೇಳಿದ್ದಾಗ್ಯೂ ಅವರನ್ನು ಈ ಬಾರಿ ಆಯ್ಕೆ ಮಾಡದೆ ಯಾರ ಅಭಿಪ್ರಾಯವನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೆ ಶಿಶಿಲರನ್ನು ಆಯ್ಕೆ ಮಾಡಿದ ಪರಿಷತ್ತಿನ ಸರ್ವಾಧಿಕಾರಿ ಧೋರಣೆ ಸರಿಯೇ?



ಈ ಹಿಂದೆ ಸಮ್ಮೇಳನಾಧ್ಯಕ್ಷರ ಆಯ್ಕೆ ಸಮರ್ಪಕವಾಗಿರಲಿಲ್ಲ, ಆದ್ದರಿಂದ ವೈಯಕ್ತಿಕ ವಾಂಛೆಯನ್ನು ದೂರ ಇಟ್ಟು ಪ್ರಜಾಸತ್ತಾತ್ಮಕವಾಗಿ ಆಯ್ಕೆ ನಡೆಯಬೇಕು ಎಂದು ಪತ್ರ ಬರೆದು (ನಾನು, ಎಚ್. ಎಂ. ಕುಮಾರಸ್ವಾಮಿ ಮತ್ತು ಸಂಜೀವ ಕುದ್ಪಾಜೆ ಮುಂತಾದವರು) ಸ್ಥಳೀಯ ಪತ್ರಿಕೆಗೂ ಕ.ಸಾ.ಪ. ಅಧ್ಯಕ್ಷರಿಗೂ ಕಳಿಸಿದ್ದೆವು. ಅದರಲ್ಲಿ ಯಾವ ಪೂರ್ವಗ್ರಹವೂ ಇರಲಿಲ್ಲ, ಆಗ ಪತ್ರಿಕೆಯು ಅದನ್ನು ಪ್ರಕಟಿಸಿದ್ದರೆ, ಕ.ಸಾ.ಪ. ಸ್ಪಂದಿಸಿದ್ದರೆ ಒಮ್ಮತದ ಆಯ್ಕೆ ಸಾಧ್ಯವಿತ್ತು, ಶಿಶಿಲರು ಅಧುನಿಕ ದ್ರೌಪದಿಯಾಗುತ್ತಿರಲಿಲ್ಲ.

ಕಿರಣ ಅವರು "ಹಿರಿಯರಾಗಿ ಸುಪರಿಚಿತರಾಗಿರುವ ಜಿ.ಎಸ್. ಉಬರಡ್ಕ ಅವರು ಅಧ್ಯಕ್ಷರಾಗಬೇಕು" ಎಂದು ಸೂಚಿಸಿದ್ದರೆ ಸುಬ್ರಾಯ ಚೊಕ್ಕಾಡಿ ಅವರು "ಹಿರಿಯ ಕವಿ ಮತ್ತು ಕಥೆಗಾರ ಜಿ.ಎಸ್. ಉಬರಡ್ಕ ಅವರನ್ನು ಆಯ್ಕೆ ಮಾಡುವುದು ಅತ್ಯಂತ ಸೂಕ್ತ" ಎಂದಿದ್ದರು. ಜವಾಬ್ದಾರಿಯುತ ಸ್ಥಾನದಲ್ಲಿರುವ ಕ.ಸಾ.ಪ. ಮಾಜಿ ಅಧ್ಯಕ್ಷ ಎ.ಕೆ. ಹಿಮಕರ ಅವರ ಪತ್ರವನ್ನೂ ಸುದ್ದಿ ಬಿಡುಗಡೆ ಪತ್ರಿಕೆಯು ಪ್ರಕಟಿಸಲೇ ಇಲ್ಲ. ಈಗ ಹಿಮಕರ ಅವರು ಈ ಇಡೀ ಸಂವಾದದ ಎಲ್ಲ ಬರಹಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ.

ಚರ್ಚೆ ನಡೆಯುವಾಗ ಶಿಶಿಲರ ಭ್ರಷ್ಟತೆಯ ಬಗ್ಗೆಯೆಲ್ಲ ಪ್ರಸ್ತಾಪವಾಗಿದೆ. ಅವರೇ ಫಲಾನುಭವಿಯಾಗಿರುವುದರಿಂದ, ಆ ಫಲವನ್ನು ಪಡೆಯಲು ಅವರು ಅನುಸರಿಸಿದ ವಾಮಮಾರ್ಗಗಳನ್ನು ಸಮರ್ಥಿಸಲು ಅವರ ಈ ಹಿಂದಿನ ವಾಮಮಾರ್ಗಗಳನ್ನು ಉಲ್ಲೇಖಿಸುವುದು ಸಹಜ. ಶಿಶಿಲರು ನನ್ನನ್ನು ಭಯೋತ್ಪಾದಕ ಎಂದು ಕರೆದರು. ಒಬ್ಬ ರಾಜಕಾರಣಿಯಾಗಿ ಮುರಳೀಮನೋಹರ ಜೋಷಿ ಇರ್ಫಾನ್ ಹಬೀಬ, ರೋಮಿಲಾ ಥಾಪರ್ ಅವರನ್ನೆಲ್ಲ ಭಯೋತ್ಪಾದಕರು ಎನ್ನುವುದಕ್ಕೂ, ಒಬ್ಬ ಬರಹಗಾರರೇ ಆದ ಶಿಶಿಲ ಮತ್ತೊಬ್ಬ ಬರಹಗಾರನನ್ನು ಭಯೋತ್ಪಾದಕ ಎನ್ನುವುದಕ್ಕೂ ಇರುವ ಸಾಮ್ಯತೆ ಮತ್ತು ವ್ಯತ್ಯಾಸವನ್ನು ಊಹಿಸಿಕೊಳ್ಳಿ.

ಶಿಶಿಲರು ತಮ್ಮ ಒಂದಷ್ಟು ವಿದ್ಯಾರ್ಥಿಗಳಿಂದ 'ಶಿಶಿಲರು ಅರ್ಹರು' 'ಶಿಶಿಲರು ಸೇತುವೆ ಮಾಡಿದ್ದಾರೆ' (ಈ ಸೇತುವೆಯದ್ದು ಬೇರೆಯೇ ಒಂದು ಹಗರಣ ಇದೆ) ಎಂದು ಒಂದನ್ನೇ ನೂರು ಸಲ ಬರೆಸಿ ಹಾಕಿಸಿದರು. ಸುದ್ದಿ ಬಿಡುಗಡೆ ಅದನ್ನೇ ಹುಡುಕಿ ಹುಡುಕಿ ಪ್ರಕಟಿಸಿತು. ಒಮ್ಮೆ ವಿದ್ಯಾಸರಸ್ವತಿ ಎನ್ನುವ ವಿದ್ಯಾರ್ಥಿನಿ ಕಾಲೇಜು ಮ್ಯಾಗಜೀನ್‌ಗೆ ಬರೆದ ಲೇಖನಕ್ಕೆ ತೀವ್ರ ಪ್ರತಿಭಟನೆ ಬಂತು. ಆಗ ಸಹಜವಾಗಿ ಹೆದರಿದ ಅವರು, "ಅದು ನಾನು ಬರೆದದ್ದಲ್ಲ, ಶಿಶಿಲರು ಬರೆದುಕೊಟ್ಟದ್ದು" ಎಂದು ಸತ್ಯವನ್ನು ಹೇಳಿಬಿಟ್ಟರು. ಶಿಶಿಲರು "ಇಲ್ಲ ಇಲ್ಲ ಆಕೆಯೇ ಬರೆದದ್ದು" ಎಂದುಬಿಟ್ಟರು. ಇದು ಶಿಶಿಲರ ಸಾಹಿತ್ಯಸೇವೆಯ ವೈಖರಿ. ಆ ಎಲ್ಲಾ ಪ್ರಶ್ನೆಗಳನ್ನು ಎತ್ತುವುದರ ಮುಖಾಂತರ ಜನತಾಂತ್ರಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಪ್ರಯತ್ನವಂತೂ ನಡೆದಿದೆ. ಈ ಎಲ್ಲ ಅಸಮಾಧಾನ-ಆಕ್ರೋಶಗಳ ನಡುವೆಯೇ ಜನವರಿ 5 ರಂದು ಸುಳ್ಯ ಸಾಹಿತ್ಯ ಸಮ್ಮೇಳನ ನಡೆಯುತ್ತಿದೆ.

-ಅರವಿಂದ ಚೊಕ್ಕಾಡಿ

ಪ್ರೇಮ್-ಮುತಾಲಿಕ್ ಜಂಟಿ ದೊಂಬರಾಟ



ನಿಜಕ್ಕೂ 'ಪ್ರೀತಿ ಏಕೆ ಭೂಮಿ ಮೇಲಿದೆ?' ಹಿಂದೂ ವಿರೋಧಿ ಚಿತ್ರವಾ? ರಾಮ, ಸೀತೆ, ಹನುಮಂತರನ್ನು ಹಾಡೊಂದರಲ್ಲಿ ಟೀಕಿಸಿದ ಪ್ರೇಮ್ ವಿರುದ್ಧ ಶ್ರೀರಾಮಸೇನೆಯದು ಪ್ರಾಮಾಣಿಕ ಪ್ರತಿಭಟನೆಯಾ? ಆ ಕಾರಣಕ್ಕೇ ರಕ್ಷಣಾ ವೇದಿಕೆಯ ನಾರಾಯಣಗೌಡರ ಗ್ಯಾಂಗ್ ಪ್ರೇಮ್ ಪರ ವಹಿಸಿ ಶ್ರೀರಾಮಸೇನೆಯ ವಿರುದ್ಧ ಬೀದಿಗಿಳಿದಿದ್ದಾದರೂ ಪ್ರಾಮಾಣಿಕವಾ? ಇಷ್ಟೆಲ್ಲಾ ವಿವಾದದ ಅಸಲೀ ಮರ್ಮವೇನು?

ಕೋತಿ ಏಕೆ ಮರದ ಮೇಲಿದೆ?

* ಅಲ್ಲೀ ಆ ಶ್ರೀರಾಮ ಸೇನೆಯವರಿಗೇನಾದ್ರೂ ಬುದ್ಧಿ ಇದ್ದಿದ್ರೆ ಈ ರೀತಿ ಕೆಲಸವಿಲ್ದೆ ಪ್ರತಿಭಟನೆ ಮಾಡೋ ಬದಲು ಸಿನಿಮಾ ನೋಡಿಬಿಟ್ಟಿದ್ರೆ ಅವ್ರೇ ನಿಂತು ಪ್ರೇಮ್‌ಗೆ ಸನ್ಮಾನ ಮಾಡಬಹುದಿತ್ತಾ?
* ಈ ಸಿನಿಮಾನ್ನ ನೋಡೋರು ಹುಚ್ಚರಾ? ಅಥವಾ ಸಿನಿಮಾ ತೆಗೆದೋನು ಹುಚ್ಚನಾ? ಮೆಂಟ್ಲಾಸ್ಪತ್ರೆಗೆ ಯಾರನ್ನ ಸೇರಿಸ್ಬೇಕು?
* ಹಾಳಾದ್ದ ಸಿನಿಮಾ ನೋಡಿ ಬಸವನಗುಡಿಯಿಂದ ಬಸ್ ಹತ್ತಿ ಮತ್ತೆ ಬಸವನಗುಡಿಗೇ ಬಂದು ಇಳಿದಂತಾಯ್ತು!

ಕಪಾಲಿ ಥೇಟರಿನಿಂದ ಪ್ರೀತಿ ಏಕೆ.....? ನೋಡಿ ಹೊರಬಿದ್ದವರ ಅವಾಚ್ಯ ಅಭಿಪ್ರಾಯಗಳನ್ನು ಬದಿಗಿಟ್ಟು ಹೇಳಬಹುದಾದರೆ ಬಹುತೇಕರದು ಇಂಥದ್ದೇ ವಿಮರ್ಶೆಯಾಗಿತ್ತು. ಒಂದೂವರೆ ವರ್ಷಗಳ ಕಾಲ ತಪಸ್ಸು ಮಾಡಿ, ಸರಿಸುಮಾರು ಒಂಭತ್ತು ಕೋಟಿ ಖರ್ಚು ಮಾಡಿ, ಈಜಿಪ್ಟಿಗೆ ಹೋಗಿ ಶೂಟಿಂಗ್ ಮಾಡಿದ ಪ್ರೇಮ್ ಅದೆಂಥದ್ದೇ ಸಿನಿಮಾ ಮಾಡಿದ್ದರೂ ಅದು ಕೇವಲ ಸಿನಿಮಾದ ಕುರಿತ ಮಾತಷ್ಟೇ ಆಗುತ್ತಿತ್ತು. ಯಾವತ್ತು ಹಿಂದೂ ಖೋಮೇನಿ ಪ್ರಮೋದ್ ಮುತಾಲಿಕ್ ಅದರ ವಿರುದ್ಧ 'ಫತ್ವಾ' ಜಾರಿ ಮಾಡಿದನೋ ಆ ಕಾರಣಕ್ಕಾಗಿಯೇ ಇದನ್ನು ಗುಮಾನಿಯಿಂದ ನೋಡಬೇಕಿದೆ.

ನಿಜಕ್ಕೂ 'ಪ್ರೀತಿ ಏಕೆ ಭೂಮಿ ಮೇಲಿದೆ?' ಹಿಂದೂ ವಿರೋಧಿ ಚಿತ್ರವಾ? ರಾಮ, ಸೀತೆ, ಹನುಮಂತರನ್ನು ಹಾಡೊಂದರಲ್ಲಿ ಟೀಕಿಸಿದ ಪ್ರೇಮ್ ವಿರುದ್ಧ ಶ್ರೀರಾಮಸೇನೆಯದು ಪ್ರಾಮಾಣಿಕ ಪ್ರತಿಭಟನೆಯಾ? ಆ ಕಾರಣಕ್ಕೇ ರಕ್ಷಣಾ ವೇದಿಕೆಯ ನಾರಾಯಣಗೌಡರ ಗ್ಯಾಂಗ್ ಪ್ರೇಮ್ ಪರ ವಹಿಸಿ ಶ್ರೀರಾಮಸೇನೆಯ ವಿರುದ್ಧ ಬೀದಿಗಿಳಿದ್ದಾದರೂ ಪ್ರಾಮಾಣಿಕವಾ? ಇಷ್ಟೆಲ್ಲಾ ವಿವಾದದ ಅಸಲೀ ಮರ್ಮವೇನು?

ಇದು ಕೇವಲ ಪತ್ರಿಕೆಯ ಪ್ರಶ್ನೆಗಳಲ್ಲ, ಪ್ರೀತಿ ಏಕೆ....? ನೋಡಿ ಬಂದ ಪ್ರತಿಯೊಬ್ಬರಿಗೂ ಅರ್ಥವಾಗದ ಪ್ರಶ್ನೆಗಳೆ.

ಹುಚ್ಚರಿಗೆ ಮಾತ್ರ

ಯಾರಾದರೂ ಕೋತಿ ಏಕೆ ಮರದ ಮೇಲಿದೆ? ಎಂಬ ಪ್ರಶ್ನೆಯಿಟ್ಟರೆ ಜನ ಆತನನ್ನು ಖಂಡಿತಾ 'ಹುಚ್ಚ' ಅನ್ನುತ್ತಾರೆ. ಅಥವಾ ಪ್ರೀತಿ ಏಕೆ ಭೂಮಿ ಮೇಲಿದೆ? ಎಂದು ಕೇಳಿದ ಯಾರಿಗಾದರೂ ಕೋತಿ ಏಕೆ ಮರದ ಮೇಲಿದೆ? ಎಂದು ಕೇಳಿಬಿಟ್ಟರೆ ಜಾಗ ಖಾಲಿ ಮಾಡುತ್ತಾನೆ!

ಇಂಥ ವಿಚಿತ್ರ ಪ್ರಶ್ನೆಯಿಟ್ಟು ಪ್ರೇಮ್ ಸಿನಿಮಾ ಮಾಡಲು ಹೊರಟಾಗ ಜನ ಸಹಜವಾಗೇ ತಲೆ ಕೆಡಿಸಿಕೊಂಡರು. ಗೌತಮ ಬುದ್ಧ, ಯೇಸು, ಪೈಗಂಬರರೇ ತಲೆ ಕೆಡಿಸಿಕೊಳ್ಳದ ಪ್ರಶ್ನೆಗೆ ಪ್ರೇಮ್ ಇನ್ನೆಂಥಾ ಉತ್ತರ ಕೊಡಬಹುದು? ಯಾರಿಗೂ ತೋಚದ ಕತೆ ಇನ್ನು ಹೇಗಿರಬಹುದು? ಬಹುಶಃ ಆ ಕಾರಣಕ್ಕೇ ಒಂದೂವರೆ ವರ್ಷ ಹಿಡಿಯಿತಾ? ನಿರ್ಮಾಪಕ ಅಶ್ವಿನಿರಾಂಪ್ರಸಾದ್ ಒಂಭತ್ತು ಕೋಟಿ ಖರ್ಚಾಯಿತೆಂದು ಹೇಳಿದ್ದು ಸುಮ್ಮನೇನಾ? ಇತ್ಯಾದಿ ಏನೆಲ್ಲಾ ನಿರೀಕ್ಷೆ ಕುತೂಹಲಗಳು ಪ್ರೀತಿ ಏಕೆ ಭೂಮಿ ಮೇಲಿದೆ? ಚಿತ್ರದ ಮೇಲಿತ್ತೋ ಅದೆಲ್ಲವನ್ನೂ ಶುಕ್ರವಾರದ ಮಾರ್ನಿಂಗ್ ಶೋನಲ್ಲೇ ಪ್ರೇಮ್ ತಲೆಕೆಳಗು ಮಾಡಿದ್ದ!

ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಪ್ರೀತಿ ಏಕೆ....? ಒಂದು ಅಸಂಬದ್ಧ ಅಸಂಗತ, ಅತಾರ್ಕಿಕ, ಅಬದ್ಧ ಅವಿವೇಕ ಚಿತ್ರ. ಇದಕ್ಕೊಂದು ಕತೆಯೇ ಇಲ್ಲ, ಅದರ ಪಾತ್ರ-ಪ್ರಸಂಗಗಳಿಗೆ ಕಾರಣವೇ ಇಲ್ಲ, ಎತ್ತಿಂದೆತ್ತ ನೋಡಿದರೂ ಅದು ಯಾರಿಗೂ ಅರ್ಥವಾಗುವುದಿಲ್ಲ.

ರಾ. ಸೋಮನಾಥ್

ಸಿನಿಮಾ ಏಕೆ ಮಾಡಬೇಕು? ಅದನ್ನು ಯಾಕೆ ನೋಡಬೇಕು? ಎಂಬುದೇನಾದರೂ ಡೈರೆಕ್ಟರ್ ಪ್ರೇಮ್‌ಗೆ ಗೊತ್ತಿದ್ದರೆ ಆತ ಇಂಥ ಹುಚ್ಚಾಟಕ್ಕೆ ಕೈಹಾಕುತ್ತಿರಲಿಲ್ಲ. ಈ ವರದಿಗಾರ ಕಷ್ಟಪಟ್ಟು ಅದರ ಕತೆಯನ್ನು ಗ್ರಹಿಸಿದ ನಂತರ ಗೊತ್ತಾಗಿದ್ದೇನೆಂದರೆ; ಈ ಚಿತ್ರದ ಹೀರೋ ಮತ್ತು ಹೀರೋಯಿನ್‌ಗೆ ಕೊನೇತನಕ ಪ್ರೀತಿ ಹುಟ್ಟುತ್ತಲೇ ಇಲ್ಲ!

ಇದೊಂದು ಹುಚ್ಚು ಕತೆ. ಹೀರೋ ಅರೆಹುಚ್ಚ ಮತ್ತು ತಿಕ್ಕಲ. ಆತನ ಸ್ನೇಹಿತರ ಪ್ರಕಾರ ಆತ ಮೆಂಟಲ್! ಎಲ್ಲೋ ಯಾರೋ ಒಬ್ಬಳು ತನ್ನನ್ನು ಪ್ರೀತಿಸುತ್ತಿದ್ದಾಳೆಂಬ ಭ್ರಮೆಯಲ್ಲೇ ಅಂತರಪಿಶಾಚಿಯಂತೆ ಸುತ್ತಾಡುತ್ತಾನೆ. ಹಾಗೇ ದೂರದಲ್ಲೆಲ್ಲೋ ಹಳ್ಳಿಯೊಂದರಲ್ಲಿ ಹೀರೋಯಿನ್ ಒಬ್ಬಳು ಒಂದಲ್ಲ ಒಂದು ದಿನ ಆ ಚಂದಮಾಮ ಭೂಮಿಗಿಳಿದು ಬರುತ್ತಾನೆ, ತನ್ನನ್ನು ಸೇರುತ್ತಾನೆಂದು ಕಾಯುತ್ತಿರುತ್ತಾಳೆ. ನಿರ್ದೇಶಕ ಪ್ರೇಮ್ ಪ್ರಕಾರ ಅದು ದೇವರು ಬರೆದ ಹಣೆಬರಹ!

ದೇವರು ಪ್ರತಿಯೊಬ್ಬ ಹೆಣ್ಣಿಗೂ ಇಂಥದ್ದೇ ಗಂಡು ಎಂದು ಬರೆದಿರುತ್ತಾನಂತೆ. ಇದು ಪ್ರೀತಿ ಏಕೆ? ಚಿತ್ರದಲ್ಲಿ ಪ್ರೇಮ್ ಹೇಳಲು ಹೊರಟ ಥಿಯರಿ. ಆದರೆ ಇದೇ ಥಿಯರಿಗೆ





ಅಶ್ವಿನಿ ಎದುರು ಶ್ರೀರಾಮಸೇನೆಯವರ ಡ್ರಾಮಾ

ಪ್ರೇಮ್ ಉಲ್ಟಾ ಹೊಡೆದಿದ್ದಾನೆ. ಜಾಸ್ತಿ ಸಿಟಿಯಲ್ಲಿರುವ ಹೀರೋ ಕೆಲವೊ... ರಾಡಿಗಳ ಜೊತೆ ಗುದ್ದಾಡುತ್ತಾನೆ. ಮತ್ತೊಮ್ಮೆ ಜಾನಪದ ಗಾಯಕನಾಗುತ್ತಾ... ಇನ್ನೊಮ್ಮೆ ತಾನೆಂದೂ ನೋಡದ ಗೊತ್ತೇ ಇಲ್ಲದ, ಹುಚ್ಚು ಭ್ರಮೆ... ಹೀರೋಯಿನ್‌ಗಾಗಿ (ನಮ್ರತಾ) ಹುಡುಕಾಟ ನಡೆಸುತ್ತಾನೆ. ಅದೇ ಹೊತ್ತಿಗೆ ಮತ್ತೊ... ಹೀರೋಯಿನ್ ರೋಹಿಣಿ ಪ್ರೇಮ್‌ನನ್ನು ಪ್ರೀತಿಸುತ್ತಾಳಾದರೂ ಹೀರೋ ಅದ... ತಿರಸ್ಕರಿಸುತ್ತಾನೆ. ಅತ್ತ ಹಳ್ಳಿಯ ಹೀರೋಯಿನ್ ತನ್ನ 'ಚಂದಮಾಮ'ನನ್ನು ಹುಡು... ಕೊಂಡು ಸಿಟಿಗೆ ಬರುತ್ತಾಳೆ. ತಮಾಷೆಯೆಂದರೆ ಹೀರೋ ಮತ್ತು ಹೀರೋಯಿ... ಒಂದೆರಡು ಬಾರಿ ಮುಖಾಮುಖಿಯಾಗುತ್ತಾರಾದರೂ ತಾ... ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದೇವೆಂದು ಅವರಿಬ್ಬರಿಗೂ ಗೊ... ಆಗುವುದಿಲ್ಲ.

ಕೊನೆಗೊಮ್ಮೆ ಎರಡನೇ ಹೀರೋಯಿನ್ ಮತ್ತು ಹೀರೋ... ಗೆಳೆಯ ಶರಣ್ ಸೇರಿಕೊಂಡು ಈ ರೀತಿ ಒಬ್ಬರನ್ನೊಬ್ಬರು ಹುಡುಕ... ಅಲೆದಾಡುವ 'ಕಲ್ಪಿತ' ಪ್ರೇಮಿಗಳನ್ನು ಪರಿಚಯಿಸಲು ಮುಹೂ... ಗೊತ್ತು ಮಾಡುತ್ತಾರೆ. ಇಂಥದ್ದೇ ಜಾಗಕ್ಕೆ ಬರುವಂತೆ ಇಬ್ಬರಿಗೂ ಹೇಳುತ್ತಾ... ಆ ಪ್ರಕಾರ ಹೀರೋ ಮತ್ತು ಹೀರೋಯಿನ್ ಅದೇ ಜಾಗಕ್ಕೆ ಬರುತ್ತಾ... ಮುಖಾಮುಖಿಯಾಗುತ್ತಾರೆ ಹುಚ್ಚಾಟವೆಂದರೆ ಇಬ್ಬರಿಗೂ ತಾವೇ ಒಬ್ಬರನ್ನೊಬ... ಭೇಟಿಯಾಗಲು ಬಂದಿದ್ದೆಂದು ಗೊತ್ತೇ ಆಗುವುದಿಲ್ಲ!

ಕೊನೆಗಾದರೂ ಪ್ರೇಮಿಗಳು ಒಂದಾಗಬೇಕಲ್ಲವೆ? ಆದರೆ ಇಬ್ಬರನ್ನ... ಪರಿಚಯಿಸಲು ಬರಬೇಕಿದ್ದ ಶರಣ್ ಮತ್ತು ರೋಹಿಣಿಯೇ ಆಕ್ಸಿಡೆಂಟ್ ಆಗಿ ಸ... ಹೋಗುತ್ತಾರೆ. ವಿಧಿಯಿಲ್ಲದೆ ಹೀರೋ ಮತ್ತು ಹೀರೋಯಿನ್ ತಮ್ಮ ಪಾ... ತಾವು ಹೊರಟು ಹೋಗುವುದರೊಂದಿಗೆ ಸಿನಿಮಾ ಮುಗಿಯುತ್ತದೆ!

ಒಂದೋ ಪ್ರೇಮಿಗಳು ಕೊನೆಯಲ್ಲಿ ಒಂದಾಗಬೇಕು. ಅಥವಾ ಕೊನೆಯ... ದೂರಾಗಬೇಕು. ಆದರೆ ಯಾವತ್ತೂ ಒಬ್ಬರನ್ನೊಬ್ಬ... ಪರಿಚಯಿಸಿಕೊಳ್ಳದೆ, ಪ್ರೀತಿಸದೆ, ತಾವೇ ಒಬ್ಬರನ್ನೊಬ... ಹುಡುಕುತ್ತಿದ್ದೇವೆಂದು ಗೊತ್ತೇ ಆಗದೇ, ತಮ್ಮ ಪಾ... ತಾವು ಹೊರಟುಬಿಡುವ ಅಸಂಬದ್ಧ ಅಸಂಗತಕ್ಕೆ ಯಾರಾದ... ಕತೆ ಎನ್ನುತ್ತಾರಾ?

ಇಂಥ ಅತಾರ್ಕಿಕ ಕತೆಯ ಮಧ್ಯೆಯೇ 'ಸುಳ್ಳೇ ಸುಳ್ಳು' ಹಾಡಿದೆ. ರಾಮ ಸು... ಸೀತೆ ಸುಳ್ಳು, ಹನುಮಂತ ಲಂಕೆಗೆ ಹಾರಿದ್ದೇ ಸುಳ್ಳು ಇತ್ಯಾದಿ 'ಚಾವಾ... ವಾದವನ್ನು ಹೀರೋಯಿನ್‌ಳ ಚಿಕ್ಕಪ್ಪನ ಪಾತ್ರಧಾರಿ ಹಾಡುತ್ತಾನೆ. ಈ ಹಾಡು... ಯಾವ ಕಾರಣಕ್ಕೆ ಚಿತ್ರದಲ್ಲಿ ತುರುಕಲಾಗಿದೆ ಎಂದಾಗಲಿ, ಇದನ್ನು ಹಾಡು... ಚಿಕ್ಕಪ್ಪನ ಪಾತ್ರಕ್ಕೂ, ಕತೆಗೂ ಏನೂ ಸಂಬಂಧ? ಎಂಬುದಾಗಲಿ ಯಾರಿ... ಅರ್ಥವಾಗುವುದಿಲ್ಲ. ಹಾಗೇ ತಾಯಿಯ ಪಾತ್ರಕ್ಕೂ, ಮಲ್ಲಿಕಾ ಶೆರಾವತ್ ಡ್ಯಾನ್ಸ್... ಹೀರೋಯಿನ್ ತಂದೆಯ ಪಾತ್ರಕ್ಕೂ, ನಡುನಡುವೆ ಬರುವ ಫೈಟುಗಳಿಗೆ... ವಿನಾಕಾರಣ ನುಸುಳುವ ಹಾಡುಗಳಿಗೂ, ಕತೆಗೂ, ನಾಯಕನಿಗೂ, ನಾಯ... ಪಾತ್ರಕ್ಕೂ ಏನು ಸಂಬಂಧ ಎಂಬುದೇ ಗೊತ್ತಾಗುವುದಿಲ್ಲ.

ಅಸಲಿಗೆ ಕತೆಯೇ ಇಲ್ಲದ, ಇದರೊಳಗಿನ ಪಾತ್ರಗಳಿಗಾಗಲಿ, ಸಂದ... ಗಳಿಗಾಗಲಿ ಪರಸ್ಪರ ಸಂಬಂಧವಿಲ್ಲ, ಚಿತ್ರವಿಚಿತ್ರ ತುಣುಕುಗಳನ್ನು ಚಿ... ಅದನ್ನೇ ತೇಪೆಹಾಕಿ ಮಾಡಿದ ಅಸಂಬದ್ಧ ಚಿತ್ರವೇ ಪ್ರೀತಿ ... ಭೂಮಿ ಮೇಲಿದೆ!

ಪ್ರಾರಂಭದಲ್ಲಿ ಅಂಬರೀಷ್ ಸ್ಮಶಾನದ ವೀರಬಾಹುಕ... ಕಾಣಿಸಿ ಕೊಂಡು ಹೆಣಸುಡುವ ವಿನಾಕಾರಣದ ದೃಶ್ಯವಿದೆ. ಅ... ಮುಸ್ಲಿಂ ಹುಡುಗನ ಜೊತೆ ತನ್ನ ಮಗಳು ಓಡಿಹೋದಳೆಂ... ಅವಮಾನಿತಳಾಗಿ ಆತ್ಮಹತ್ಯೆ ಮಾಡಿಕೊಂಡ ತಾಯಿಯ ಹೆಣ... ಇಡೀ ಚಿತ್ರದಲ್ಲಿ ಬೇರೆ ಏನೂ ನೆನಪಿನಲ್ಲುಳಿಯದೇ ಹೋದ... ಹಿಂದೂ ಹುಡುಗಿಯೊಬ್ಬಳು ಮುಸ್ಲಿಂ ಹುಡುಗನನ್ನು ಲವ್ ಮ... ಓಡಿಹೋಗಿದ್ದರಿಂದಾಗಿ ಆಕೆಯ ತಾಯಿ ಆತ್ಮಹತ್ಯೆ ಮಾಡಿಕೊ... ದೃಶ್ಯ ಮಾತ್ರ ಸಿನಿಮಾ ಮುಗಿದ ನಂತರವೂ ಪ್ರೇಕ್ಷಕನನ್ನು ಕಾಡುತ... ಮೇಲುನೋಟಕ್ಕೆ ಪ್ರೀತಿ ಏಕೆ....? ಪ್ರೇಮದ ಕುರಿತ ಚಿತ್ರವಾದ... ಪರಿಣಾಮದಲ್ಲಿ ಅದು ಪ್ರೀತಿ ಎಂದರೇನೇ ಹಿಂದೂ ಹುಡುಗಿಯರು ಮು... ಹುಡುಗರನ್ನು ಪ್ರೇಮಿಸುವುದು. ಆ ಕಾರಣಕ್ಕೇ ಪ್ರೀತಿ ಮಾಡಬಾರದು; ಏಕೆಂ... ಆ ದೇವರು ಪ್ರತಿಯೊಬ್ಬ ಗಂಡಿಗೂ ಇಂಥದ್ದೇ ಹೆಣ್ಣೆಂದು ನಿರ್ಧರಿಸಿಬಿಟ್ಟಿರುವುದರ... ಯಾರೆಷ್ಟೇ ಲವ್ ಮಾಡಿದರೂ ಕೊನೆಗೆ ದೇವರು ಯಾರ ಹಣೆಯಲ್ಲಿ ಯ... ಹೆಸರನ್ನು ಬರೆದಿದ್ದಾರೋ ಅವರನ್ನೇ ಮದುವೆಯಾಗೋದು.

ಇಂಥ ಹುಚ್ಚು ವೇದಾಂತವನ್ನೇ ಚಿತ್ರವಿಚಿತ್ರ ಘಟನಾವಳಿಗಳ ಮೂಲಕ ಹೇ... ಪ್ರೇಮ್ ಈ ಹಿಂದಿನ ಉಪೇಂದ್ರನ ವಿಕೃತ ಸಿದ್ಧಾಂತವನ್ನು ವಿಪರೀತ ಅಸ... ತಂದು ಅದನ್ನು ಮುತಾಲಿಕ್‌ನ ಶ್ರೀರಾಮ ಸೇನೆ ಪ್ರತಿಪಾದಿಸುವ ಹಿಂದೂ ಹಣೆಬರ... ಫಿಲಾಸಫಿಗೆ ಜೋಡಿಸುತ್ತಾನೆ. ಉಪೇಂದ್ರ ಬುದ್ಧಿವಂತರಿಗೆ ಮಾತ್ರ ಎಂದಿಟ್ಟರ... ಪ್ರೇಮ್ 'ಹುಚ್ಚರಿಗೆ ಮಾತ್ರ' ಎಂದಿಟ್ಟಿದ್ದರೆ ಬಹುಶಃ ಸರಿಹೋಗುತ್ತಿತ್ತೇನೋ!!

ಆದರೆ ಪ್ರೇಮ್ ಇದಕ್ಕೆ ಕುತರ್ಕದ ವಿಪರೀತಾರ್ಥ ಕೊಡುತ್ತಾನೆ. ಬಿಡು... ಯಾಗುವುದಕ್ಕೆ ಇನ್ನೆರಡು ದಿನ ಬಾಕಿ ಇರುವಂತೆಯೇ ಮುತಾಲಿಕ್‌ನ ಶ್ರೀರಾಮಸೇನ... ಬೆಂಗಳೂರು ನಗರದ ಅಧ್ಯಕ್ಷ ವಸಂತಕುಮಾರ್ ಭವಾನಿ ಎಂಬ ಮಾವ...



ಅಸಂಬದ್ಧ ಸಿನಿಮಾ ಮಾಡಿ ಅದರ ಯಶಸ್ಸಿಗೆಂದು ಹುಚ್ಚು ಗಿಮಿಕ್ ಸೃಷ್ಟಿಸುವುದರಲ್ಲಿ ಪ್ರೇಮ್ ಹಿಂದಿನಿಂದಲೂ ಮೆಂಟಲ್ ಸ್ಟಾರ್ ಉಪ್ಪಿಯ ತಮ್ಮನೇ?

'ಎಚ್‌ಟುಓ' ಚಿತ್ರದಲ್ಲಿ ಕಾವೇರಿಯ ಬಗ್ಗೆ ವಿವಾದ ಹುಟ್ಟಿಸಿದ್ದ ಉಪ್ಪಿ ಕನ್ನಡ ಸಂಘಟನೆಗಳು ಬೀದಿಗಿಳಿಯುವಂತೆ ಮಾಡಿದ್ದ. ಆನಂತರ 'ಹಿಂದೂ' ಎಂಬ ಹೆಸರಲ್ಲೇ ಚಿತ್ರವೊಂದನ್ನು ಘೋಷಿಸಿದ್ದ. ಈ ಯಾವುದರಿಂದಲೂ ಸಿನಿಮಾ ಗೆದ್ದಿಲ್ಲ ಎಂಬ ವಾಸ್ತವ ಮಾತ್ರ ಪ್ರೇಮ್ ತಲೆಗೆ ಹತ್ತಲಿಲ್ಲ. ತನ್ನ 'ಎಕ್ಸ್ ಕ್ಯೂಸ್ ಮಿ' ಚಿತ್ರದಲ್ಲಿ ಹಿಂದೂ ಸನ್ಯಾಸಿಯೊಬ್ಬ ಪೂಜೆ ಮಾಡುತ್ತಿರುವಾಗಲೇ ಮುಸ್ಲಿಂ ಒಬ್ಬ ಆತನನ್ನು ಕತ್ತರಿಸಿ ಕೊಲ್ಲುವ ದೃಶ್ಯವನ್ನು ಪ್ರೇಮ್ ತುರುಕಿದ್ದ. ಹಾಗೇ ಕೊಂದು ಬಂದ ಮುಸ್ಲಿಂ ಪಕ್ಕದ ಮಸೀದಿಯಲ್ಲಿ ನಮಾಜು ಕೇಳಿದಾಕ್ಷಣವೇ ತನ್ನ ಕತ್ತಿ ಕೆಳಗಿಟ್ಟು ನಮಾಜ್ ಮಾಡುತ್ತಿರುತ್ತಾನೆ. ಸನ್ಯಾಸಿಯನ್ನು ಕೊಂದ ಪ್ರತೀಕಾರಕ್ಕೆಂದು ಆತನನ್ನು ಕೊಲ್ಲಲು ಬಂದಿದ್ದ ಸಾಧುಗಳು ಆತ ನಮಾಜ್ ಮಾಡುತ್ತಿರುವುದನ್ನೇ ನೋಡಿದ್ದೇ ಆತನನ್ನು ಕೊಲ್ಲದೇ ಶ್ರೀರಾಮನ ಫೋಟೋ ಹಿಡಿದು ಭಜನೆ ಮಾಡುತ್ತಾ ವಾಪಸ್ಸಾಗುತ್ತಾರೆ. ಇದರರ್ಥ ಮುಸ್ಲಿಮರು ದುಷ್ಟರು, ಸಾಧುಗಳು ಪವಿತ್ರಾತ್ಮರು?

ಇಂಥ ದೃಶ್ಯಕ್ಕೆ ಸೆನ್ಸಾರ್ ಹೇಗೆ ಅನುಮತಿಸಿತ್ತೋ ಗೊತ್ತಿಲ್ಲ. ಆವತ್ತು ಮುಸ್ಲಿಮರ ವಿರುದ್ಧ ಪ್ರೇಮ್ ವಿಷ ಬಿತ್ತಿದ್ದಕ್ಕೂ ಭಜರಂಗದಳ, ರಾಮಸೇನೆಗಳ ಕೃತ್ಯಕ್ಕೂ ಯಾವುದೇ ವ್ಯತ್ಯಾಸಗಳಿರಲಿಲ್ಲ. ಮುಂದೆ ತನ್ನ 'ಜೋಗಿ' ಚಿತ್ರದಲ್ಲಿ ಲವ್ ಸಾಂಗ್ ಒಂದರಲ್ಲಿ ಶಿವರಾಜ್‌ಕುಮಾರ್‌ಗೇ ಪ್ರೇಮ್ ಶ್ರೀರಾಮನ ವೇಷ ಹಾಕಿಸಿದ್ದ. ಅದು ಶಿವನ ವೇಷವನ್ನೂ ಹೋಲುತ್ತಿತ್ತು. ಎಲ್ಲೋ ಒಂದೆರಡು ಹಿಂದೂ ಸಂಘಟನೆಗಳು ಈ ಬಗ್ಗೆ ಸಣ್ಣಗೆ ಗೊಣಗಾಡಿದ್ದು ಬಿಟ್ಟರೆ ಅದು ಈ ಮಟ್ಟದ ವಿವಾದವಾಗಲಿಲ್ಲ. ಬಹುಶಃ ಜೋಗಿ ಹಿಟ್ಟಾಗದೇ ಹೋಗಿದ್ದರೆ ಪ್ರೇಮ್ ಅದನ್ನೇ ವಿವಾದವಾಗಿ ಬೆಳೆಸಿಬಿಡುತ್ತಿದ್ದ. ಅದು ಈತನ ಚೆಡ್ಡಿ ಬುದ್ಧಿ. ಇಂಥ ಲೆಕ್ಕ ಹಾಕಿಯೇ ಪ್ರೇಮ್ 'ಸುಳ್ಳೇ ಸುಳ್ಳು' ಹಾಡು ಸೃಷ್ಟಿಸಿದ್ದಾನೇ ಹೊರತು ಅದು ಆಕಸ್ಮಿಕ (ಪ್ರೀತಿ ಏಕೆ....ಯಲ್ಲಿ)ವಲ್ಲ. ಸದ್ಯ ಟೀವಿ ನೈನ್‌ನ ಸಿಬ್ಬಂದಿಗಳೇ ಹೇಳುವಂತೆ ಪ್ರೇಮ್ ಶ್ರೀರಾಮಸೇನೆಗೆ ದೊಡ್ಡ ಮೊತ್ತದ ಗಿಫ್ಟು ಕೊಟ್ಟೇ ಗಲಾಟೆ ಮಾಡಿಸಿದ್ದಾನೆ. ಅದರಲ್ಲೂ ಟೀವಿ ನೈನ್ ಸುಮ್ಮಸುಮ್ಮನೇ ಇದನ್ನೇ ದೊಡ್ಡ ವಿವಾದವಾಗಿಸಿ ಗಂಟೆಗಟ್ಟಲೇ ತೋರಿಸುತ್ತಾ?

ಹಿಂದೂ ಹುಚ್ಚನ ಚೆಡ್ಡಿ ಗಿಮಿಕ್ಕುಗಳು!

...ಂಡನೊಬ್ಬ 'ಸುಳ್ಳೇ ಸುಳ್ಳು' ಹಾಡನ್ನು ತೆಗೆಯುವಂತೆ ಪತ್ರಿಕಾಗೋಷ್ಠಿ ...ಡೆಸುತ್ತಾನೆ. ಅದರ ಮರುದಿನವೇ ಶ್ರೀರಾಮಸೇನೆಯ ಪುಂಡರು ...ಜಯನಗರದ ಅಶ್ವಿನಿ ಸ್ಟುಡಿಯೋಗೆ ನುಗ್ಗಿ ದಾಂಧಲೆ ನಡೆಸುತ್ತಾರೆ. ...ವರು ಸ್ಟುಡಿಯೋಕ್ಕೆ ನುಗ್ಗುವುದಕ್ಕೂ ಅಲ್ಲಿಗೆ ಟೀವಿ ಕ್ಯಾಮರಾಮನ್‌ಗಳು ...ರುವುದಕ್ಕೂ, ಅದೇ ಹೊತ್ತಿಗೆ ಅಲ್ಲಿಗೆ ಪ್ರೇಮ್ ಪ್ರತ್ಯಕ್ಷನಾಗುವುದಕ್ಕೂ ...ಂದೇ ಆಗುತ್ತದೆ. ಅದರಲ್ಲೂ ಟೀವಿ ನೈನ್‌ನ ಕ್ಯಾಮರಾ ಕಂಡಿದ್ದೇ ...ರಾಮಸೇನೆಯವರು ಪ್ರೇಮ್ ಮೇಲೆ ನುಗ್ಗಿ ಬಂದಂತೆ ನಟಿಸಿದರೆ ...ಮ್ ಒದೆ ತಿಂದವನಂತೆ ಆಕ್ಟ್ ಮಾಡುತ್ತಾನೆ. ಮತ್ತೊಂದೆಡೆ ...ರ್ಮಾಪಕ ರಾಂಪ್ರಸಾದ್ ಶ್ರೀರಾಮ ...ಸೇನೆಯವರು ತನ್ನ ಸ್ಟುಡಿಯೋಕ್ಕೆ ನುಗ್ಗಿ ...ತ್ರದ ರೀಲುಗಳನ್ನು ಸುಡಲು ಪ್ರಯತ್ನಿಸಿ...ದು ಎನ್ನುತ್ತಾನೆ. ಅಷ್ಟರಲ್ಲೇ ಪೊಲೀಸರು ...ಂದಿದ್ದರಿಂದ ಅನಾಹುತ ತಪ್ಪಿತು ಎನ್ನುತ್ತಾನೆ. ...ದರೆ ತನ್ನ ಸ್ಟುಡಿಯೋಕ್ಕೆ ನುಗ್ಗಿ ಕಿಟಕಿ ...ಂದಿ ಮಾಡಿದ ಶ್ರೀರಾಮಸೇನೆಯ ವಿರುದ್ಧ ...ಪೊಲೀಸರಿಗೆ ಕಾಟಾಚಾರಕ್ಕೂ ದೂರು ...ಡುವುದಿಲ್ಲ. ಇತ್ತ ವಿಜಯನಗರದ ಅಶ್ವಿನಿ ...ಸ್ಟುಡಿಯೋದಲ್ಲಿ ನಡೆದ ದಾಂಧಲೆಯಲ್ಲಿ ...ಟೀವಿ ಕ್ಯಾಮರಾದೆದುರು ಕೈಕೈ ಮಿಲಾಯಿ...ಸುವ ಮಟ್ಟಕ್ಕೆ ಕಚ್ಚಾಡಿದ ಪ್ರೇಮ್ ಮತ್ತು ...ಶ್ರೀರಾಮಸೇನೆಯ ವಸಂತ್‌ಕುಮಾರ್, ...ದಾಗಿ ಅರ್ಧ ಗಂಟೆಗೇ ಟೀವಿ ನೈನ್‌ನ ...ಸ್ಟುಡಿಯೋಕ್ಕೆ ಬಂದು ಅಕ್ಕಪಕ್ಕ ಕೂತು ...ಂದರ್ಶನ ಕೊಡುತ್ತಾರೆ.



ಒಂದೆಡೆ ಇವರಿಬ್ಬರೂ ಟೀವಿ ನೈನ್‌ನಲ್ಲಿ ಜೊತೆಜೊತೆಯಾಗಿ ...ಂದರ್ಶನ ನೀಡುತ್ತಿರುವಾಗಲೇ ಅತ್ತಲಿಂದ ಶ್ರೀರಾಮಸೇನೆಯ ...ಮುಖ ಪ್ರಮೋದ್ ಮುತಾಲಿಕ್‌ನ ಫೋನ್ ಬರುತ್ತದೆ. ಮುತಾಲಿಕ್ ...ಕೇಳಿದ್ದಾದರೂ ಏನು? ಸುಳ್ಳೇ ಸುಳ್ಳು ಹಾಡಿನಿಂದ ಒಂದೋ ...ರಾಮ-ಸೀತೆಯರ ಹೆಸರನ್ನು ತೆಗೀಬೇಕು ಅಥವಾ ಅದರ ಜೊತೆಗೆ ... [illegible] ಹೆಸರನ್ನು ಹಾಡಿಗೆ ಸೇರಿಸಬೇಕು!

ಇದು [illegible] ಅಲ್ಲಾಹ್ ಮತ್ತು ... ಹೆಸರನ್ನು 'ಸುಳ್ಳೇ ಸುಳ್ಳು' ಹಾಡಿಗೆ ಸೇರಿಸಿಬಿಟ್ಟರೆ ... [illegible] ಪರವಾಗಿಲ್ಲ!

[illegible]

ಸದಾ ಪುಂಡರ ಹಿಂದನ್ನೇ ಕಟ್ಟಿಕೊಂಡು ಸುತ್ತಾಡುವ ಪ್ರೇಮ್ ಶ್ರೀರಾಮ್ ಸೇನೆಯವರು ನುಗ್ಗಿದಾಗ ನಿರಾಯುಧನಾಗಿ, ಒಂದಿಬ್ಬರು ಶಿಷ್ಯರನ್ನಷ್ಟೇ ಕಟ್ಟಿಕೊಂಡು ಬರುತ್ತಾನೆ. ಹಿಂದಿನ ದಿನವೇ ಪತ್ರಿಕಾಗೋಷ್ಠಿ ಮಾಡಿ ದಾಳಿಯ ಮುನ್ಸೂಚನೆ ಕೊಟ್ಟಿದ್ದರೂ ಪೊಲೀಸರು ಬರುವುದು ಎಲ್ಲಾ ಮುಗಿದ ನಂತರವೇ. ಸ್ಟುಡಿಯೋಕ್ಕೆ ನುಗ್ಗಿ ಕಿಟಕಿ ಗಾಜು ಒಡೆದರೂ ಪ್ರೇಮ್ ಆಗಲಿ, ನಿರ್ಮಾಪಕ ರಾಂಪ್ರಸಾದ್ ಆಗಲಿ ಈ ಬಗ್ಗೆ ಪೊಲೀಸರಿಗೆ ದೂರನ್ನೇ ಕೊಡುವುದಿಲ್ಲ. ಮುನ್ನೂರು ಮಂದಿಯಷ್ಟಿದ್ದ ಶ್ರೀರಾಮ ಸೈನಿಕರಿಗೆ ರೀಲು ಸುಡುವುದು ಎಷ್ಟು ಹೊತ್ತು? ಹಾಗೇ ಸ್ಟುಡಿಯೋಕ್ಕೆ ನುಗ್ಗಿ ದಾಂಧಲೆ ಮಾಡಿದವರಿಗೆ ಕಪಾಲಿ ಟಾಕೀಸಿಗೆ ಟಿಕೆಟ್ ಪಡೆದು ದಾಂಧಲೆ ಮಾಡುವುದು ಯಾವ ಮಹಾ? ಏಕೆ ಕಾಟಾಚಾರದ ಪ್ರತಿಭಟನೆಯಷ್ಟೇ ಮಾಡಿ ಅರೆಸ್ಟಾಗುತ್ತಾರೆ?

ಇದರರ್ಥ ಡೈರೆಕ್ಟರ್ ಪ್ರೇಮ್ ಮತ್ತು ಶ್ರೀರಾಮ ಸೇನೆ ಮುತಾಲಿಕ್ ಇಬ್ಬರದೂ ಒಂದೇ ಜಾತಿ. ತನ್ನ ಹುಚ್ಚಾಟದ ಚಿತ್ರ ಖಂಡಿತಾ ನೆಲಕಚ್ಚುತ್ತದೆ ಎಂಬುದು ಪ್ರೇಮ್‌ಗೆ ಮೊದಲೇ ಗೊತ್ತು. ಸೋತರೂ ಮೀಸೆ ಮಣ್ಣಾಗದ ಹಾಗೇ ತಂತ್ರವೊಂದನ್ನು ಹೆಣೆಯಬೇಕಲ್ಲ; ಅದಕ್ಕೆಂದೇ ವಿನಾಕಾರಣ ಸುಳ್ಳೇ ಸುಳ್ಳು ಹಾಡನ್ನು ಸೃಷ್ಟಿಸಿ ಪೋಣಿಸಿದ್ದಾರೆ. ಇನ್ನೇನು ಸಿನಿಮಾ ಬಿಡುಗಡೆ ಸಮೀಪಿಸುತ್ತಿದ್ದಂತೆ ತನ್ನವರನ್ನೇ ಬಿಟ್ಟು ಮುತಾಲಿಕ್ ಪಡೆಯನ್ನು ಛೂಬಿಟ್ಟಿದ್ದಾನೆ. ಹೇಗಿದ್ದರೂ ಪ್ರೀತಿ ಏಕೆ..... ಸೋಲುವುದು ಶತಃಸಿದ್ಧ. ಹಾಗೇ ಸೋತಿದ್ದಕ್ಕೆ ಶ್ರೀರಾಮ ಸೇನೆಯನ್ನೇ ಹೊಣೆ ಮಾಡಿಬಿಟ್ಟರೆ ಅಲ್ಲಿಗೆ ಪ್ರೇಮ್ ಬಚಾವಾಗುತ್ತಾನೆ. ಜೊತೆಗೆ ತಮ್ಮ ಹೋರಾಟದ ಫಲವಾಗೇ ಪ್ರೀತಿ ಏಕೆಯನ್ನು ಜನ ತಿರಸ್ಕರಿಸಿದರೆಂದು ಮುತಾಲಿಕ್ ಶಿಷ್ಯರು ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡಂತಾಗುತ್ತದೆ.

ಸಂತೆಗೆ ಮುನ್ನ ಗಂಟುಕಳ್ಳರು ಸೇರುವುದು ಸಹಜ ತಾನೆ? ಆದರೆ ಪ್ರೀತಿ ಏಕೆ....? ಚಿತ್ರದಲ್ಲಿರುವವರು ಕೇವಲ ಗಂಟುಕಳ್ಳರಷ್ಟೇ ಅಲ್ಲ, ಅವರು ಒಂದೇ ದೋಣಿಯ ಕಳ್ಳರು!

ಈ ಹುಟ್ಟಿಗೆ ಒಂಭತ್ತು ಕೋಟಿಯೆ?



[illegible]



ಬಸವಣ್ಣನ ನೆಲದಲ್ಲೂ ಶುರುವಾದ

ಪಂಚಾಚಾರ್ಯರ ಅಡ್ಡಪಲ್ಲಕ್ಕಿ ಉರವಣಿಗೆ!

ವಿಶ್ವಾರಾಧ್ಯ ಸತ್ಯಂಪೇಟೆ

ವಿಸವಣ್ಣನವರು ಬದುಕಿ ಬಾಳಿಹೋದ ಹಾಗೂ ಅವರ ವಿಚಾರಧಾರೆಯನ್ನು ಬಿತ್ತಿ ಬೆಳೆಸಿದ ನಾಡಾದ ಬೀದರ್ ಜಿಲ್ಲೆಯ ಬಸವಕಲ್ಯಾಣವನ್ನು ಯಾರಾದರೂ ಒಮ್ಮೆ ನೋಡಬೇಕೆಂದು ಬಯಸುವುದು ಸರ್ವೇಸಾಮಾನ್ಯ. ಹಿಂದೊಮ್ಮೆ ದ.ರಾ. ಬೇಂದ್ರೆಯವರು ಬಸವಕಲ್ಯಾಣದಲ್ಲಿ ಇಳಿಯುತ್ತಲೆ ತ್ರಿಪುರಾಂತಕ ಕೆರೆಯ ಪರಿಸರದಲ್ಲಿ ಅತ್ಯಂತ ಭಾವುಕರಾಗಿ ನೆಲದಮೇಲೆ ಉರುಳಾಡಿದರಂತೆ! "ಬಸವಣ್ಣನವರು ಬದುಕಿಬಾಳಿ ಹೋದ ಪರಿಸರದ ಧೂಳಿನಲ್ಲಿ ಕನಿಷ್ಠ ನನ್ನ ಮೈ ಉರುಳಾಡುವುದು ನನಗೆ ಸಾರ್ಥಕವಾಗಿದೆ!!" ಎಂದು ಬೆರಗುಗೊಂಡು ನುಡಿದರಂತೆ.

ಹಾಗೆಯೇ ಡಾ.ದೇ.ಜ.ಗೌಡರೂ ಕೂಡ ಕಲ್ಯಾಣ ನಾಡಿನ ಶರಣ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ "ಮಹಾಕವಿ ಪಂಪ ಒಂದು ಕಡೆ ನೆನೆವುದೆನ್ನ ಮನ ಬನವಾಸಿ ದೇಶಮಂ. ಈ ಪ್ರದೇಶದಲ್ಲಿ ಮರಿ ದುಂಬಿಯಾಗಿಯಾದರೂ ಹುಟ್ಟಿಸು" ಎಂದು ಹಲುಬಿದ್ದು ಜ್ಞಾಪಿಸುತ್ತ; "ನನಗೆ ಮರುಜನ್ಮ ಎಂಬುದು ಒಂದಿದ್ದರೆ ಕಲ್ಯಾಣನಾಡಿನ ಬಸವ ನಡೆದಾಡಿದ ಈ ಪರಿಸರದಲ್ಲಿ ಮರಿದುಂಬಿ ಬೇಡ, ಮರಿಹಂದಿಯಾಗಿಯಾದರೂ ಹುಟ್ಟಿಸು" ಎಂದು ಅವಲತ್ತುಕೊಂಡರಂತೆ !!

ಭಾವುಕರು ಹಾಗೂ ವೈಚಾರಿಕವಾಗಿ ಆಲೋಚಿಸುವ ಜನಗಳೂ ಸಹ ಅದೇನು ಕಾರಣವೋ ಬಸವಕಲ್ಯಾಣದ ತಲೆಬಾಗಿಲಲ್ಲಿ ನಿಲ್ಲುತ್ತಲೇ ಬಸವಾದಿ ಶರಣರು ನಡೆದಾಡಿದ, ಹೊಸದೊಂದು ಸಮಾಜದ ಕನಸುಕಂಡ, ಅದನ್ನು ಸಾಕಾರ ಮಾಡಲು ಪ್ರಯತ್ನಿಸಿದ ನೂರೆಂಟು ಚಿತ್ರಗಳು ಕಣ್ಮುಂದೆ ಸರಿದುಹೋಗುತ್ತವೆ. ಶರಣರು ಸ್ಥಾವರನ್ನು ಪೂಜಿಸಿದವರೂ ಅಲ್ಲ, ಅದನ್ನು ಪೋಷಿಸಿ ಬೆಳೆಸಿದವರೂ ಅಲ್ಲ. ಹಾಗಾಗಿ ಈ ಪರಿಸರದಲ್ಲಿ ಹಿಂದೆ ನಡೆದ ಘಟನಾವಳಿಗಳ ಭೌತಿಕ ಕಟ್ಟಡಗಳನ್ನು ಹುಡುಕುವುದು ಅಷ್ಟು ಸರಿಯಲ್ಲ ಎಂದು ಬುದ್ಧಿ ಹೇಳಿದರೂ ಕೂಡ ಮನಸ್ಸು ಮಾತ್ರ ಅವನ್ನು ಬೆನ್ನು ಹತ್ತಿ ಹೋಗುತ್ತದೆ.

ಅಲ್ಲಲ್ಲಿ ಅಳಿದುಳಿದ ಇತಿಹಾಸದ ಪಳಿಯುಳಿಕೆಗಳಾದ ಬಸವಣ್ಣನವರ ಅಕ್ಕ ಅಕ್ಕನಾಗಮ್ಮಳು ಕುಳಿತುಕೊಳ್ಳುತ್ತಿದ್ದ ಜಾಗ, ನೀಲಾಂಬಿಕೆಯ ಗವಿ, 'ಅಂಬಿಗರಚೌಡಯ್ಯನ ಸಮಾಧಿ, ಪ್ರಜಾಪ್ರಭುತ್ವದ ಬೀಜವನ್ನು ಹನ್ನೆರಡನೆಯ ಶತಮಾನದಲ್ಲಿ ಬಿತ್ತಿದ್ದ 'ಅನುಭವ ಮಂಟಪ' ಎಂಬ ಇಂದಿನ ಪರುಪಕಟ್ಟೆ, ಬಿಜ್ಜಳನ ಕೋಟೆ, ಮಡಿವಾಳ ಮಾಚಿದೇವನ ಹೊಂಡ, ತ್ರಿಪುರಾಂತಕ ಕೆರೆ ಮುಂತಾದವನ್ನು ನೋಡಲೇಬೇಕೆನಿಸುತ್ತದೆ. ವಿಚಿತ್ರವೆಂದರೆ ಇಲ್ಲಿನ ಜನಗಳಲ್ಲಿ ಐತಿಹಾಸಿಕ ಪ್ರಜ್ಞೆಯ ಕೊರತೆಯೋ ಅಥವಾ ಹಿತ್ತಲಗಿಡ ಮದ್ದಲ್ಲ ಎಂಬ ಕಾರಣಕ್ಕೋ ಇವೆಲ್ಲವುಗಳ ಬಗ್ಗೆ ದಿವ್ಯ ನಿರ್ಲಕ್ಷ್ಯದಿಂದ ಇದ್ದಾರೆ. ಬಸವಕಲ್ಯಾಣದ ಬಸ್‌ಸ್ಟ್ಯಾಂಡ್ ಇಳಿಯುತ್ತಲೆ ನೀವು ಹೆಜ್ಜೆಹೆಜ್ಜೆಗೂ ಇದನ್ನು ಅನುಭವಿಸುತ್ತೀರಿ. ಯಾರಿಗೂ ಯಾವುದರ ಬಗ್ಗೆಯೂ ಸ್ಪಷ್ಟ ಮಾಹಿತಿಗಳು ಲಭ್ಯವಿಲ್ಲದ್ದು ನಿಜಕ್ಕೂ ಬೇಸರವೆನಿಸುತ್ತದೆ. ಅನುಭವ ಮಂಟಪದ ಚರ್ಚೆ-ವಿಚರ್ಚೆಗಳು ನಡೆಯುತ್ತಿದ್ದವು ಎಂದು ಹೇಳಲಾಗುತ್ತಿದ್ದ 'ಪರುಪಕಟ್ಟೆ'ಯ ಮುಂದೆ ಬಂದು ನಿಂತರಂತೂ ಒಂದುಕ್ಷಣ ಎದೆ ಝಲ್ ಎನ್ನಿಸಿಬಿಡುತ್ತದೆ.

ತ್ರಿಪುರಾಂತಕ ಕೆರೆಯ ಅಂಗಳದಲ್ಲಿರುವ 'ಅನುಭವ ಮಂಟಪ' ಕಟ್ಟಡವನ್ನು ಭಾಲ್ಕಿಯ ಚೆನ್ನಬಸವ ಪಟ್ಟದ್ದೇವರು ನಿರ್ಮಿಸಿದರೇನೋ ನಿಜ. ಅಲ್ಲಿ ಬಸವಾದಿ ಶರಣರ ಬದುಕು ಹಾಗೂ ಬೋಧನೆಯ ಕುರಿತು ಸಾಕಷ್ಟು ಚರ್ಚೆ ವಿಚರ್ಚೆಗಳು ನಡೆಯಬೇಕು ಎಂದು ಆಶಿಸಿದ್ದರು. ಆದರೆ ಇತ್ತೀಚಿನ ದಿನಗಳವರೆಗೂ ಇಲ್ಲಿ ನಡೆದದ್ದು ಅಧಿಕಾರಕ್ಕಾಗಿ ಕಿತ್ತಾಟ ಮಾತ್ರ. ಬಿ.ವಿ.ಪಟೇಲ ನೇತೃತ್ವದಲ್ಲಿ ನಿರ್ಮಿಸಲಾಗಿರುವ ಟ್ರಸ್ಟ ಕಮಿಟಿಯಲ್ಲಿ ಇಲ್ಲದ 'ಆಡಳಿತಾಧಿಕಾರಿ' ಎಂಬ ಹುದ್ದೆ ಹುಟ್ಟಿಸಿದ ವಿವಾದದ ಇನ್ನೂ ತಣ್ಣಗಾದಂತೆ ಕಂಡುಬರುತ್ತಿಲ್ಲ. ಅಷ್ಟಿಷ್ಟು ಬಸವಾದಿ ಶರಣರ ಬದುಕು ಹಾಗೂ ಬೋಧನೆಗಳನ್ನು ಜನತೆಗೆ ತಿಳಿಸುತ್ತಿರುವ ಭಾಲ್ಕಿಯ ಬಸವಲಿಂಗ ಪಟ್ಟದ್ದೇವರನ್ನು ಮುದ್ದಾಂ ಆಗಿ ಉಪೇಕ್ಷಿಸುತ್ತ ಕೀಳು ರಾಜಕೀಯಕ್ಕೆ ಅನುಭವ ಮಂಟಪ ಇಳಿದಿರುವುದು ವಿಷಾದನೀಯ ಸಂಗತಿಯಾಗಿದೆ.

> ಬಸವಾದಿ ಶರಣರ ಚಳವಳಿಯ ತರುವಾಯ ಈ ಲಿಂಗಾಯತ ಧರ್ಮಕ್ಕೆ ತೊಗಲುಬಾವಲಿಯಂತೆ ಅಂಟಿಕೊಂಡ ಜಂಗಮರು ತಾವೇ ನಿಜವಾದ ವಾರಸುದಾರರು ಎಂದು ಹೇಳುತ್ತಲೇ ಅಸಲಿ ಲಿಂಗಾಯತ ತತ್ವಗಳಿಗೆ ನುಸಿ ಕಡಿಸುತ್ತಿರುವುದೇ ಇದೆಲ್ಲಕ್ಕೆ ಕಾರಣ. ಥೇಟ್ ಬ್ರಾಹ್ಮಣ ಪುರೋಹಿತಶಾಹಿ ಮಾಡುವ ಏನೆಲ್ಲ ಕರಾಮತ್ತುಗಳನ್ನು ಕರಗತ ಮಾಡಿಕೊಂಡಿರುವ ಜಂಗಮರ ಜಗದ್ಗುರುಗಳು ಲಿಂಗಾಯತರ ತಲೆಯನ್ನು ನುಣ್ಣಗೆ ಬೋಳಿಸುತ್ತ ಹೊರಟಿದ್ದಾರೆ.



ರಂಭಾಪುರಿ ಜಗದ್ಗುರುಗಳ ಅಡ್ಡಪಲ್ಲಕ್ಕಿ ಉರವಣಿಗೆಯ ದೃಶ್ಯ

ಇದೆಲ್ಲದರ ಲಾಭ ಹೊಡಕೊಳ್ಳಬೇಕೆಂದು ಹವಣಿಸಿಯೇ 'ಬಸವ ಧರ್ಮ ಪೀಠದ' ಮಾತಿನ ಮಹಾದೇವಿ ದೊಡ್ಡ ಸ್ಕೆಚ್ ಹಾಕಿ ಇಪ್ಪತ್ತೈದು ಎಕರೆ ಜಾಗವನ್ನು ಖರೀದಿಸಿ ಬಸವಣ್ಣನವರನ್ನು ಹರಾಜಿಗೆ ಇಡಲಿದ್ದಾಳೆ. ಇದಕ್ಕಾಗಿ ಕೋಟ್ಯಂತರ ರೂಪಾಯಿಗಳ ದಾನ ದೇಣಿಗೆಗಳನ್ನು ಎತ್ತುವ ಎತ್ತುಗಡೆ ಈಗಾಗಲೇ ಆರಂಭವಾಗಿದೆ.



ಬಸವೇಶ್ವರ ವಿಶ್ವಸ್ಥ ಮಂಡಳಿಯ ಅಧೀನದಲ್ಲಿರುವ ಬಸವೇಶ್ವರ ದೇವಾಲಯಕ್ಕೆ ಬಂದು ನಿಂತರಂತೂ ಇಡೀ ಬಸವಣ್ಣನವರ ಆಶಯಗಳಿಗೆ ಇಲ್ಲಿ ಕೊಡಲಿಪೆಟ್ಟು ಹಾಕಿರುವುದು ಸ್ಪಷ್ಟವಾಗಿ ಗೋಚರಿಸುತ್ತವೆ. ಬಸವೇಶ್ವರರ ಗುಡಿಯಲ್ಲಿಯ ನಾಲ್ಕು ಕಾಲಿನ ಚಕ್ಕಳಮಕ್ಕಳ ಹಾಕಿ ಲಿಂಗದ ಎದುರುಗಡೆ ಕುಳಿತ ಕಲ್ಲಿನ ಮೂರು ನಂದಿ ಬಸವಣ್ಣ, ಅದಕ್ಕೂ ಇಲ್ಲಿ ಪೂಜೆ ನೈವೇದ್ಯ! ನಾಗರಹಾವಿನ ಕಲ್ಲುಗಳು, ಹೆಣ್ಣು ದೇವತೆ ಮುಂತಾದವು ಕಣ್ಣಿಗೆ ರಾಚುತ್ತವೆ. ಯಾವ ಬಸವಣ್ಣ ತನ್ನ ಜೀವಿತಾವಧಿಯ ಉದ್ದಕ್ಕೂ ಈ ಪುರೋಹಿತಶಾಹಿಯನ್ನು ಕತ್ತು ಹಿಡಿದು ನೂಕಿದ್ದರೋ? ಅದೇ ಇಲ್ಲಿ ಮತ್ತೆ ವಿಜೃಂಭಿಸುತ್ತಿವೆ.

ಬಸವಾದಿ ಶರಣರ ಚಳವಳಿಯ ತರುವಾಯ ಈ ಲಿಂಗಾಯತ ಧರ್ಮಕ್ಕೆ ತೊಗಲುಬಾವಲಿಯಂತೆ ಅಂಟಿಕೊಂಡ ಜಂಗಮರು ತಾವೇ ನಿಜವಾದ ವಾರಸುದಾರರು ಎಂದು ಹೇಳುತ್ತಲೇ ಅಸಲಿ ಲಿಂಗಾಯತ ತತ್ವಗಳಿಗೆ ನುಸಿ ಕಡಿಸುತ್ತಿರುವುದೇ ಇದೆಲ್ಲಕ್ಕೆ ಕಾರಣ. ನೂರಾರು ಸುಳ್ಳು ಸೊಟ್ಟುಗಳನ್ನು, ಕಂದಾಚಾರದ ನಡೆಗಳನ್ನು, ಮುಟ್ಟು ತಟ್ಟುಗಳನ್ನು, ಮೇಲು-ಕೀಳುಗಳನ್ನು, ಹೆಣ್ಣು-ಗಂಡು ಎಂಬ ಭೇದವನ್ನು ತಂದು ತುರುಕಿದ್ದಾರೆ. ಥೇಟ್ ಬ್ರಾಹ್ಮಣ ಪುರೋಹಿತಶಾಹಿ ಮಾಡುವ ಏನೆಲ್ಲ ಕರಾಮತ್ತುಗಳನ್ನು ಕರಗತ ಮಾಡಿಕೊಂಡಿರುವ ಜಂಗಮರ ಜಗದ್ಗುರುಗಳು ಲಿಂಗಾಯತರ ತಲೆಯನ್ನು ನುಣ್ಣಗೆ ಬೋಳಿಸುತ್ತ ಹೊರಟಿದ್ದಾರೆ.

ಇದೆಲ್ಲದರ ಖಬರು ಇಲ್ಲದ ಲಿಂಗಾಯತರು ತಮ್ಮ ತಲೆಯನ್ನು ನಾ ಮುಂದೆ ತಾ ಮುಂದೆ ಎಂದು ಬೋಳಿಸಿಕೊಳ್ಳುತ್ತ ನಡೆದಿದ್ದಾರೆ. ಈ ಮೊದಲು ಬೀದರ ಜಿಲ್ಲೆಯಲ್ಲಿ ಬಸವಕೇಂದ್ರ, ಬಸವ ಮಂಟಪ, ರಾಷ್ಟ್ರೀಯ ಬಸವದಳ, ಬಸವ ಸೇವಾ ಪ್ರತಿಷ್ಠಾನ, ಭಾರತೀಯ ಬಸವ ಬಳಗ ಮುಂತಾದ ಬಸವ ಸಂಘಟನೆಗಳೆಲ್ಲ ಈಗ ಛಿದ್ರಛಿದ್ರವಾಗಿವೆ. ಅಕ್ಕ ಅನ್ನಪೂರ್ಣಮ್ಮ ಹಂಗರಗಿ, ಶರಣಪ್ಪ ಮಿಠಾರಿ, ಬಾಬುವಾಲಿ ಪಟೇಲ, ವಿ.ಸಿದ್ಧರಾಮಣ್ಣ ಮುಂತಾದವರು ತಾವೇ ಒಂದೊಂದು ದ್ವೀಪವಾಗಿದ್ದಾರೆ. ಅವರವರ ಮೂಗಿನ ನೇರಕ್ಕೆ ಬಸವಾದಿ ಶರಣರನ್ನು ಅರ್ಥೈಸುವ ಕಾರ್‍ಯ ನಡೆದಿದೆ. ಜನಗಳೂ ಸಹ ಒಂದೊಂದು ಕಡೆ ಹಂಚಿಹೋಗಿದ್ದಾರೆ. ಬಸವ ತತ್ವವನ್ನು ಹೇಳುವುದಾಗಿ ಶಿವಯೋಗಿ ಸ್ವಾಮಿಗಳು, ಹುಲಸೂರಿನ ಶಿವಾನಂದ ಸ್ವಾಮಿಗಳು ಮುಂತಾದವರು ಈಗಾಗ... ತಾವು ಆ ಕಡೆಗೂ ಸೈ ಈ ಕಡೆಗೂ ಸೈ ಎಂ... ಹಲವಾರು ಸಂದರ್ಭಗಳಲ್ಲಿ ತೋರಿಸಿ ಕೊಂಡಿದ... ಬಸವ ತತ್ವವನ್ನು ಚಾಚೂತಪ್ಪದೆ ಅನುಸರಿ ಸುತ್ತಿ... ಭಾಲ್ಕಿಯ ಬಸವಲಿಂಗ ಪಟ್ಟದ್ದೇವರನ್ನು ಅಲ್ಲಿನ ... ರಾಜಕೀಯ ಹಾಗೂ ಜಗದ್ಗುರುಗಳೊಬ್ಬರ ಚಿತಾ... ಯಿಂದಾಗಿ ಒಂಟಿಯಾಗಿಸಿದೆ.

ಹೀಗಾಗಿ ಬೀದರ ಜಿಲ್ಲೆಯಿಂ... ನೂರಡಿ ಹಿಂದಕ್ಕೆ ಇಟ್ಟು ಓಡಾಡು... ಪಂಚಾಚಾರ್ಯರೆಂಬ ಸಮಾನತೆ... ಮನುಷ್ಯ ವಿರೋಧಿ ಶಕ್ತಿಗಳು ಇಂ... ಸಶಕ್ತವಾಗಿ ಇಲ್ಲಿ ಹಾರಾಡುತ್ತಿ... ಹಿಂದೊಂದು ಸಂದರ್ಭದಲ್ಲಿ ಬಸ... ಕಲ್ಯಾಣದ ಸಭೆಯಲ್ಲಿ ಬಹಿರಂಗವಾ... ಬಸವಣ್ಣನವರನ್ನು ಯಃಕಶ್ಚಿತವಾ... ಟೀಕಿಸಿದ್ದಕ್ಕೆ ಇಲ್ಲಿನ ಜನಗಳಿಂದ ಲಾ... ತಿಂದ ಜಗದ್ಗುರುಗಳು ಒಂದೇ ಉಸಿ... ಗುಲಬುರ್ಗಾ ಕಡೆ ದೌಡಾಯಿಸಿದ್ದ... ಆಗ ಬೀದರ ಜಿಲ್ಲೆಯ ಗಡಿಯಲ... ಇವರ ಕನಿಷ್ಠ ಪಳಿಯುಳಿಕೆಗಳೂ ಉ... ದಿರಲಿಲ್ಲ. ಆದರೆ ಇಂದು ಬಸ... ಸಂಘಟನೆಗಳ ಒಡಕಿನ ಲಾಭವ... ಪಡೆಯಲೇಬೇಕೆಂದು ತೀರ್ಮಾನಿಸಿರು... ಪಂಚಾಚಾರ್ಯರು ತಮ್ಮ ಟೆಂಟ್... ಬೀದರ ಜಿಲ್ಲೆಯ ತುಂಬ ಹೊಡೆದಿದ್ದಾರೆ.

ತೀರಾ ಇತ್ತೀಚೆಗೆ ಜಿಲ್ಲೆಯ ಕಮಠಾಣದಲ್ಲಿ ಜಿ... ವೀರಶೈವ ಕನ್ನಡ ಸಾಹಿತ್ಯ ಸಮ್ಮೇಳನ ಎಂಬ ಹೆಸರಿ... ರಂಭಾಪುರಿ ಜಗದ್ಗುರು (ಜಾಗದ ಗುರುವೋ... ಗಜದ್ಗುರುವೋ?) ಗಳ ಭವ್ಯವಾದ ಅಡ್ಡಪಲ್ಲಕ್ಕಿ ಉತ್ಸ... ಎಂಬ ಬಡಿವಾರದ ಕಾರ್ಯಕ್ರಮ ಸಾಂಗವಾ... ಜರುಗಿತು. ಯಾವ ಶರ್ಮು-ನಾಚಿಕೆ ಇಲ್ಲದೆ ನಡ... ಅವಾಡವ್ಯವಾದ ಮೆ(ಉ)ರವಣಿಗೆಯ ಉದ್ದಕ... ಬಸವಾದಿ ಶರಣರ ತತ್ವಗಳ ಮಾರಣಹೋಮ... ಅಷ್ಟೇ ನಿರ್ಭಿಡೆಯಿಂದ ನಡೆದುಹೋಯಿತು.

"ಸರಿದರೆ ಒತ್ತಣ್ಣ. ಒತ್ತಿದರೆ ಸರಿಯಣ್ಣ" ಜಾ... ಸೇರಿದ ಜಂಗಮ ಜಗದ್ಗುರುಗಳು ತಮಗೆ ಸಿಕ್ಕ... ವೇದಿಕೆಯನ್ನು ಸಮರ್ಥವಾಗಿ ಬಳಸಿಕೊಂಡರು. ತಿಳಿವ... ಎಂಬುದೇ ಇಲ್ಲದ ಲಿಂಗಾಯತ ಸಮಾಜದ ಜನಗ... ದಲೇ ಬಸವ ವಿರೋಧಿ ಕೃತ್ಯಗಳನ್ನು ನೆರವೇರಿಸಿದ... 'ಲಿಂಗಪ್ರತಿಷ್ಠೆಯ ಮಾಡಿದವಂಗೆ ನಾಯಕ ನ... ತಪ್ಪದು' ಎಂದು ಬಸವ ಫಿಲಾಸಫಿ ಹೇಳುತ್ತಿದ್ದ... ಈ ಗಜದ್ಗುರುಗಳು ಅದೇ ಬಸವಣ್ಣನ ನಂದಿ ವಿಗ್ರಹ... ಪ್ರತಿಷ್ಠಾಪಿಸಿ ಆತ್ಮವಂಚನೆ ಮಾಡಿಕೊಂಡರು. ... ಕೋಟ್ಯಾಚಾರ್ಯರು ಬರೆದಿರುವ ಖೊಟ್ಟಿ ಗ್ರಂಥ 'ಸಿದ್ಧಾ... ಶಿಖಾಮಣಿ'ಯ ಜೊತೆಗೆ ಸಮಾನತೆಯ ತಳಹದಿ... ಮೇಲೆ ರಚಿತವಾದ 'ವಚನಗ್ರಂಥಗಳ' ಮೆರವ... ಯಾರೂ ಸಹಿಸಲು ಸಾಧ್ಯವಲ್ಲದ್ದು. ನೂರಾ... ಸುಮಂಗಲೆಯರು ತಲೆಯ ಮೇಲೆ ಕುಂಬ, ಕ... ಹೊತ್ತು ನಡೆಸಿದ ಮೆರವಣಿಗೆ, ಡೊಳ್ಳು, ಭಜ... ವಾದ್ಯಗಳ ಆರ್ಭಟದಲ್ಲಿ ಬಹುಶಃ ಬಸವಾ... ಶರಣರ ಆಶಯಗಳು ದಿಕ್ಕಾಪಾಲಾಗಿ ಓಡಿದ್ದವು ... ಸುತ್ತದೆ.

ಜನರ ಭೌತಿಕ ಅಧಃಪತನವನ್ನು ಸರಿಯಾಗಿ... 'ಎನ್‌ಕ್ಯಾಶ್' ಮಾಡಿಕೊಳ್ಳಲು ಸಮಯ ಹುಡುಕಾ... ತ್ತಿದ್ದ ಗಜದ್ಗುರುಗಳಿಗೆ ಇದೊಂದು ಸುವರ್ಣ ಅವಕ... ವಾಯಿತು. ಈ ಭಾವುಕ ಸನ್ನಿವೇಶದಲ್ಲಿ ತಾವು ಏ... ಹೇಳಿದರೂ ನಡೆಯುತ್ತದೆ ಎಂಬುದನ್ನು ಅರಿತುಕೊ... ಅವಿವೇಕಿ ಜಗದ್ಗುರುಗಳು ತಮ್ಮ ಬಾಯಿಗೆ ಏ... ಬರುತ್ತದೋ ಅದೇ ಸತ್ಯ ಎಂಬಂತೆ ಭಾಷಣ ಕೊರೆದ... "ರೇಣುಕಾಚಾರ್ಯರ ತತ್ವ ಸಿದ್ಧಾಂತಗಳ ಆಧಾರದ ಮೇ... 12ನೇ ಶತಮಾನದ ಶರಣರು ಸಾಮಾಜಿಕ ಆ... ಮೂಡಿಸಿದರು" ಎಂಬ ಅಪ್ಪಟ ಸುಳ್ಳನ್ನು ನಿಭೀ... ಯಿಂದ ಹೇಳಿದರು. ಇದಕ್ಕೆ ಯಾರದೇ ಯಾವು... ಪ್ರತಿಭಟನೆ ವ್ಯಕ್ತವಾಗದಿರುವುದು ವಿಷಾದನೀಯ.

ಇವರನ್ನು ಹೀಗೆ ಬಿಟ್ಟರೆ ಮುಂದೊಂದು ... ಬಸವಾದಿ ಶರಣರ ತತ್ವ ಸಿದ್ಧಾಂತಗಳನ್ನು ಹರಗಿ ದಿಂ... ಹೊಡೆದು ಮತ್ತೆ ತಮ್ಮ ಕರ್ಮಠ ತತ್ವಗಳ... ಜನವಿರೋಧಿ, ಸಮಾನತೆಯ ವಿರೋಧಿ ಹಾ... ಮೋಸದ ವಿಚಾರಗಳನ್ನೇ ನಿಜವಾದ ತತ್ವಗಳೆ... ಮನಗಾಣಿಸುತ್ತಾರೆ. ಇಪ್ಪತ್ತೊಂದನೆಯ ಶತಮಾ... ಈ ದಿನಗಳಲ್ಲೂ ಇವರು ಆರ್ಭಟದಿಂದ ಅಡ್ಡಪ... ಉತ್ಸವಗಳನ್ನು ಏರ್ಪಡಿಸಿಕೊಳ್ಳುತ್ತ ಕಪ್ಪ ಕಾಣಿಕೆಗಳ... ಸ್ವೀಕರಿಸುತ್ತ ಭರ್ಜರಿ ವ್ಯಾಪಾರ ಶುರುಹಚ್ಚಿಕೊಳ್ಳಲಿದ... ಇದನ್ನು ತಡೆಯಬೇಕಿರುವ ಸಂಘಟನೆಗಳೇ ಸತ್ವಹೀ... ವಾಗುತ್ತಿರುವಾಗ ಇದೆಲ್ಲ ಮಾಮೂಲೇ ಅಲ್ಲವೆ?

ಒಂದು ಕಾರ್ಗತ್ತಲು, ಮತ್ತೊಂದು ಹೊಳೆಯುವ ಸೂರ್ಯ

ಹಾಗೇ ನೋಡಿದರೆ ಶೈವ ಪರಂಪರೆಯ ಈ ಜಗದ್ಗುರುಗಳಿಗೂ ಲಿಂಗಾಯತರಿಗೂ ಯಾವುದೇ ಬಾದರಾಯಣ ಸಂಬಂಧವಿಲ್ಲ. ಒಂದು ಉತ್ತರವಾದರೆ ಮತ್ತೊಂದು ದಕ್ಷಿಣ. ಒಂದು ಕಾರ್ಗತ್ತಲಾದರೆ ಮತ್ತೊಂದು ನಿಗಿನಿಗಿ ಹೊಳೆಯುವ ಸೂರ್ಯ. ಶೈವ ಪರಂಪರೆ ಅಸಮಾನತೆಯನ್ನು, ಜಾತಿ ತಾರತಮ್ಯವನ್ನು ಹೇಳುತ್ತಿದ್ದರೆ, ಲಿಂಗಾಯತ ಪರಂಪರೆ ಸಮಾನತೆಯನ್ನು ಹೇಳುತ್ತದೆ. ಮೂರ್ತಿ ಪೂಜೆಯೇ ಶ್ರೇಷ್ಠವೆಂದು ಶೈವ ಪರಂಪರೆ ಹೇಳುತ್ತಿದ್ದರೆ ಮೂರ್ತಿ ಪೂಜೆ ಮಾಡುವುದೇ ಖಂಡನಾರ್ಹ ಎಂದು ಲಿಂಗಾಯತ ಪರಂಪರೆ ಸಾರುತ್ತದೆ. ಬಸವಾದಿ ಶರಣರ ವಿಚಾರಗಳು ಸ್ವತಂತ್ರ ವಿವೇಚನೆಯಲ್ಲಿ ಮೂಡಿದವುಗಳು. ಅದೊಂದು ಅನುಭವ ಸಾಹಿತ್ಯ. ಅವು ವೇದ ಆಗಮಗಳ ಮೂಲದಿಂದ ಉದ್ಧೃತವಾದವುಗಳಲ್ಲ, ಶರಣರು ಯಾವತ್ತೂ ದುಡಿಯುವ ವರ್ಗಕ್ಕೆ ಸೇರಿದ ಜನಗಳ ಸಂಘಟನೆ. 'ಕಾಯಕವೇ ಕೈಲಾಸ' ಎಂದು ಹೇಳಿಕೊಂಡು ಬದುಕು ಪಡೆಸಿದವರು.

ಈ ಶೈವರಾದರೋ ಪರಾವಲಂಬಿಗಳು. ಜನಗಳಲ್ಲಿ ಭಯದ ಬೀಜಗಳನ್ನು ಬಿತ್ತಿ ವ್ಯಾಪಾರ ಮಾಡುವವರು. "ದೇಹವೇ ದೇವಾಲಯ. ಲಿಂಗಪ್ರತಿಷ್ಠೆಯ ಮಾಡಿದವಂಗೆ ನಾಯಕ ನರಕ" ಎಂದ ಶರಣರೆಲ್ಲಿ? ತಾವು ಹೋದಲ್ಲಿ ಬಂದಲ್ಲಿ ಲಿಂಗಪ್ರತಿಷ್ಠೆಯನ್ನು ಮಾಡುತ್ತ, ದೇವಾಲಯಗಳನ್ನು ಕಟ್ಟಿಸುತ್ತ ನೂರಾರು ಕಟ್ಟು ಕಂದಾಚಾರಗಳನ್ನು ಹುಟ್ಟು ಹಾಕುವ ಈ ಶೈವ ಜಗದ್ಗುರುಗಳೆಲ್ಲಿ? ಬಸವಣ್ಣನವರ ಲಿಂಗಾಯತ ಒಂದು ಜಾತಿಯಲ್ಲ. ಅದೊಂದು ತತ್ವ. ಈ ತತ್ವವನ್ನು ಮೈಗೂಡಿಸಿಕೊಂಡ ಯಾರಾದರೂ ಲಿಂಗಾಯತರಾಗಬಹುದು. ಆವರ ಜಂಗಮ ಪರಿಕಲ್ಪನೆಯೇ ಬೇರೆ. ಪಂಚಾಚಾರ್ಯರೆಂಬ ಈ ಶೈವ ಜಗದ್ಗುರುಗಳ ತಿಳಿವಳಿಕೆಯೇ ಬೇರೆ.



ಹೀಗೆ ತೀರಾ ಒಂದಕ್ಕೊಂದು ವಿಭಿನ್ನ ನಿಲುವು, ವಿಚಾರಗಳನ್ನು ಹೊಂದಿದ ಪಂಚಾಚಾರ್ಯರೆಂಬ ಶೈವ ಜಗದ್ಗುರುಗಳು ತತ್ವಗಳು ಗೊತ್ತಿಲ್ಲದ ಲಿಂಗಾಯತರ ತಲೆ ತಿಕ್ಕಿ ಅವರ ಮೇಲೆ ಸವಾರಿ ಮಾಡ ಹೊರಟಿರುವುದು ನಿಜಕ್ಕೂ ಕಳವಳದ ಸಂಗತಿ.

ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ವಿಜೇತ 'ಅರಮನೆ'

ಕುಂತಳದ ಕಾಲಖಂಡಿಕೆಯ ಅಖಂಡ ಕಥನ

ಕುಂ. ವೀರಭದ್ರಪ್ಪ ಅವರ 'ಅರಮನೆ' ಕಾದಂಬರಿ ಮಹತ್ವಾಕಾಂಕ್ಷೆಯ ಕೃತಿಯಾಗಿದ್ದು ಅದಕ್ಕೆ ಪೂರಕವಾಗಿ ವಸ್ತುವಿನ ವಿಸ್ತಾರ ವೈವಿಧ್ಯವನ್ನು ಹಿಡಿದಿಟ್ಟುಕೊಳ್ಳಲು ಪ್ರಯೋಗಶೀಲವಾದಂತಹ ಕಥನ ಕ್ರಮವನ್ನೂ ರೂಪಿಸಿಕೊಂಡಿದೆ. ಬುರ್ರಕಥಾ ಮುಂತಾದ ಜನಪದ ವೃತ್ತಿ ಗಾಯಕ ಪ್ರಕಾರಗಳ ಶೈಲಿಯನ್ನು ಇದು ಅನುಸರಿಸುವ ಹಾಗೆ ಮೇಲ್ನೋಟಕ್ಕೆ ಕಾಣುತ್ತವಾದರೂ ಅದನ್ನು ಮೀರಿದ ಕಥನ ಕ್ರಮವನ್ನು ಕುಂ. ವೀ. ಅಳವಡಿಸಿಕೊಂಡಿದ್ದಾರೆ. ಸುಮಾರು 450 ಪುಟಗಳಷ್ಟು ಬೃಹತ್ತಾಗಿರುವ ಈ ಕಾದಂಬರಿ ಒಂದು ರೀತಿಯಲ್ಲಿ 'ಮಾಡಿದ್ದುಣ್ಣೋ ಮಹರಾಯ', 'ಮಲೆಗಳಲ್ಲಿ ಮದುಮಗಳು' ಮುಂತಾದ ಎಪಿಕ್ ಕಾದಂಬರಿಗಳ ಮಾದರಿಯನ್ನು ನೆನಪಿಸುವಂತಿದೆ.

ಕುಂತಳ ಎಂಬ ಪೌರಾಣಿಕ ಸೀಮೆಯ ಗಡಿರೇಖೆಗಳೊಳಗೆ ಸಂಭವಿಸಿದ ನೂರಿನ್ನೂರು ವರ್ಷಗಳ ವರ್ತಮಾನ ಚರಿತ್ರೆಯ ವಿದ್ಯಮಾನಗಳು, ಐತಿಹ್ಯಗಳು, ಜನಪದ ದಂತಕಥೆ ಹಾಗೂ ಪ್ರತೀತಿಗಳು ಮುಂತಾದವುಗಳನ್ನು ಆಕರವಾಗಿಸಿಕೊಂಡು ರಾಯಲಸೀಮಾ ಎಂದು ಸಾಮಾನ್ಯವಾಗಿ ಕರೆಯಲ್ಪಡುವ ಇಂದಿನ ಬಳ್ಳಾರಿ ಜಿಲ್ಲೆ, ಕಡಪಾ, ಕರ್ನೂಲು, ಗುತ್ತಿ ಪ್ರದೇಶಗಳ ಜನಜೀವನದ ಒಂದು ಕಾಲಖಂಡಿಕೆಯನ್ನು ಇದು ಕಟ್ಟಿಕೊಡುತ್ತಿದೆ.

ಈವರೆಗೆ ಕುಂತಳ ಸೀಮೆ ಅಥವಾ ಶಾತವಾಹನೀರ ಎಂದು ಕಾವ್ಯಾತ್ಮಕವಾಗಿ ಕರೆಯಲ್ಪಡುವ ಈ ಪ್ರಾಂತ್ಯದ ಜನರ ಸಾಂಸ್ಕೃತಿಕ ಹಾಗೂ ಸಾಮಾಜಿಕ ಬದುಕಿನ ಬಗ್ಗೆ ಅಲ್ಲಿಯದೇ ಆಡುನುಡಿ ಬಳಸಿಕೊಂಡು ಚಿತ್ರಿಸಿರುವ ಅಂತಹದ್ದೊಂದು ಸಾಹಿತ್ಯ ಕೃತಿ ಬಂದಿರಲಿಲ್ಲ.

ಎಂದಿನಂತೆ ಕುಂ ವೀ ವೈನೋದಿಕ ವ್ಯಂಗ್ಯ ಎಂಬ ತಮ್ಮ ನಿರೂಪಣಾ ಕ್ರಮವನ್ನು ಮಾಂತ್ರಿಕ ವಾಸ್ತವತಾವಾದದ ಕಲೆಗಾರಿಕೆಯ ಜೊತೆಗೆ ಪ್ರಧಾನವಾಗಿ ಬಳಸಿಕೊಂಡಿದ್ದಾರೆ.


ಕಾದಂಬರಿಯಲ್ಲಿ ಅತ್ಯಂತ ಹೆಚ್ಚು ವಿವರಣೆಗೊಳಪಟ್ಟಿರುವ ಕುದುರೆಡವು ಎಂಬ ಊರು, ಸಾಂಭವಿ ಎಂಬ ಜನಪದ ದೈವ, ಈ ದೈವಕ್ಕೆ ತನ್ನ ಮಾನವ ರೂಪಿ ದೇಹವನ್ನು ವಸತಿಯಾಗಿ ಒದಗಿಸಿರುವ ಮೂಳೆ ಓಬಯ್ಯ, ಆತನ ಹೆಂಡತಿ ಜಗಳೂರವ್ವ, ಜಗಳೂರವ್ವನ ಸಾಕು ಸಂತಾನದಂತಿರುವ ಸೂರನೆಂಬ ಕೋಣ, ಮೂಳೆ ಓಬಯ್ಯನ ಪೀಕದಾನಿ ಹಿಡಿಯುತ್ತಿದ್ದ ರಾಜ ಮಾತೆ ಭಯ್ರುಮಾಂಬೆ, ಅವಳ ಸವತಿ ಪುತ್ರ ಕಾಟನಾಯಕ, ಇವರಿಗೆ ಆಶ್ರಯ ನೀಡಿದ್ದ ಪುರಾತನವಾದ 'ಅರಮನೆ' ಎಂಬ ಅರಮನೆ ಇವುಗಳನ್ನು ಸ್ಥೂಲವಾಗಿ ಇದರಲ್ಲಿನ ಮುಖ್ಯ ಪಾತ್ರಗಳು ಎಂದು ಕರೆಯಬಹುದು. ಈ ಪಾತ್ರಗಳ ಮೂಲಕ ಕುಂತಳ ಸೀಮೆಯಲ್ಲಿದ್ದ ಪಾಳೇಗಾರಿಕೆ ತಲುಪಿದ್ದ ಅವಸಾನದ ಅಂಚನ್ನು ಚಿತ್ರಿಸಲಾಗಿದೆ.

ಸಾಂಬವಿ ಎಂಬ ದೈವ ಇದ್ದಕ್ಕಿದ್ದಂತೆ ಮೂಳೆ ಓಬಯ್ಯನನ್ನು ಆವಾಹಿಸಿಕೊಳ್ಳುವುದು, ಜನ ಅದನ್ನೊಂದು ಪವಾಡವಾಗಿ ನಂಬುತ್ತಾ ಭಕ್ತಿಯಾಚರಣೆಯಲ್ಲಿ ತೊಡಗುವುದು, ತಮ್ಮೆಲ್ಲಾ ಕಷ್ಟಸುಖಗಳಿಗೆ ಆ ಸಾಂಬವಿಯ ಮೇಲೆ ಆಧರಿಸುವುದು- ಜನರ ಅಸಹಾಯಕತೆಯಂತೆ ಒಂದು ಕಡೆ ಕಂಡುಬರುತ್ತದೆ. ಮತ್ತೊಂದು ಕಡೆಯಲ್ಲಿ ಆ ದೈವದ ವಸತಿಗಾಗಿ ಅರಮನೆಯಲ್ಲಿದ್ದ ಪುರಾತನ ಸಿಂಹಾಸನವನ್ನು ವಶಪಡಿಸಿಕೊಳ್ಳುವುದು ಮತ್ತು ಕಡೆಗೆ ಅವತಾರಿ ದೈವಕ್ಕೆ ವಸತಿಗಾಗಿ ಅರಮನೆಯಿಂದ ರಾಜಮಾತೆ ಮತ್ತವಳ ಪರಿವಾರವನ್ನು ಹೊರಹಾಕುವುದು, ಜನತೆಯಲ್ಲಿ ಮೂಡಿಬಂದ ಹೊಸ ವರ್ಗ ಚೈತನ್ಯವನ್ನು ಸೂಚಿಸುತ್ತದೆ.

ಮತ್ತೊಂದು ಕಡೆ ಕಡಪಾ, ಬಳ್ಳಾರಿ, ದತ್ತಪ್ರಾಂತ್ಯಗಳ ಕಲೆಕ್ಟರನಾಗಿದ್ದ ಥಾಮಸ್ ಮನ್ರೋ ಅರಮನೆ ಕಾದಂಬರಿಯ ಜನಪದೀಯ ಚಾರಿತ್ರಿಕ ಪಾತ್ರವಾಗಿದ್ದು ಮೂಳೆ ಓಬಯ್ಯನ ಕಥಾನಕಕ್ಕೆ ಸರಿಸಾಟಿ ಎನಿಸುವ ಪ್ರಾಮುಖ್ಯತೆಯನ್ನು ಗಳಿಸಿಕೊಂಡಿದ್ದಾನೆ. ದೈವಗಳೊಂದಿಗೆ ಮಾತನಾಡಬಲ್ಲ ಶಕ್ತಿ ಗಳಿಸಿಕೊಂಡಿರುವ ಪವಾಡ ಪುರುಷನಂತೆ ಜನತೆ ಈತನನ್ನು ಕೊಂಡಾಡುವಂತೆಯೂ, ಹುಟ್ಟಿದ ಮಕ್ಕಳು ಮರಿಗೆ ಮನಪ್ಪ, ಮಂತೋಳಯ್ಯ ಎಂತಾಗಿ ಹೆಸರಿಡುವಷ್ಟು ಅಭಿಮಾನ ಬೆಳೆಸಿಕೊಂಡಿರುವ ವಿವರಣೆಗಳೂ ಆತನಿಗೆ ಜನಸಾಮಾನ್ಯರ ಒಳಿತಿನ ಬಗ್ಗೆ ಇದ್ದ ಕಾಳಜಿಯನ್ನು ವಿಶೇಷವಾಗಿ ಕೀರ್ತಿಸಲಾಗಿದೆ.

ಅರಮನೆ ಕಾದಂಬರಿಯಲ್ಲಿ ಹಲವು ಎಳೆಗಳಿವೆ ಇದ್ದು, ಅವುಗಳೆಲ್ಲವುಗಳಿಗೆ ಸಂಬಂಧ ಕಲ್ಪಿಸುವ ಕೇಂದ್ರ ಬಿಂದು ಎಂದರೆ ಕುಂತಳ ಪ್ರಾಂತ್ಯದ ನಿರ್ದಿಷ್ಟ ಕಾಲಘಟ್ಟದ ಜನಜೀವನ ಎನ್ನಬಹುದು. ಈ ಎಲ್ಲಾ [illegible] ವಸಾಹತುಶಾಹಿ ಬ್ರಿಟಿಷ್ ಆಳ್ವಿಕೆ ನೆಲೆಗೊಳ್ಳುತ್ತಿದ್ದು, ಅದರ ಪರ ಹಾಗೂ ವಿರೋಧಿ ನೆಲೆಗಳಲ್ಲಿ ಜನಜೀವನದ ಹಲವು ವರ್ಗಗಳು ತೊಡಗಿಕೊಂಡಿವೆ. ಅಲ್ಲಿನ ಪಾಳೇಗಾರಿಕೆ ಮತ್ತು ಜಮೀನ್ದಾರಿಕೆ ಸಾಮಾನ್ಯ [illegible]ಗಳಾಗಿದ್ದು, ಬಡತನದ ಬೇಗೆಗೆ ಸಿಲುಕಿರುವ ಜನಸಮುದಾಯಗಳು ಬ್ರಿಟಿಷ್ ಅಧಿಕಾರಿಗಳ ಆಳ್ವಿಕೆಯಲ್ಲಿ ಒಂದು ಹಂತದ ಹೊಸ ಚೈತನ್ಯವನ್ನು ಕಾಣುತ್ತಿದ್ದಾರೆ [illegible].

ಪಾಳೇಗಾರರಾಗಿದ್ದ ಹಲವಾರು ಮನೆತನಗಳು ತಿನ್ನಲಿಕ್ಕೆ ಅನ್ನ ಕೂಡ ಗತಿ ಇಲ್ಲದಂತಾಗಿ, ತಮ್ಮಲ್ಲಿ ವಂಶಪಾರಂಪರ್ಯವಾಗಿ ಉಳಿದುಕೊಂಡು ಬಂದಿದ್ದ ರಾಜ ಲಾಂಛನಗಳನ್ನು, ಕಡೆಗೆ ಪಾತ್ರೆ ಪಡಗಗಳನ್ನೂ ಮಾರಿಕೊಳ್ಳುವ ದಯನೀಯ ಸ್ಥಿತಿಗಿಳಿದಿವೆ. ಹಲವಾರು ಪಾಳೇಗಾರರು ಬ್ರಿಟಿಷ್ ಆಳ್ವಿಕೆ ಕೊಡಮಾಡಿದ್ದ ನಿವೃತ್ತಿ ವೇತನ ಅವಲಂಬಿಸಿ ಕಾಲಹಾಕುತ್ತಿದ್ದಾರೆ. ಮತ್ತೆ ಕೆಲವರು ತಮ್ಮ ಆಳ್ವಿಕೆಯನ್ನು ಕೊನೆಗಾಣಿಸಲು ಸಮ್ಮತಿಸದೆ ಬಂಡಾಯವೆದ್ದಿದ್ದಾರೆ. ಅಂತಹವರನ್ನು ಮಟ್ಟಹಾಕಲು ವಸಾಹತುಶಾಹಿ ಆಡಳಿತ ಸರ್ವ ಕ್ರಮಗಳನ್ನು ಕೈಗೊಂಡಿದೆ.


ಕುಂ. ವೀರಭದ್ರಪ್ಪ

ಅರಮನೆ ಎಂಬ ಹೆಸರು ಕಾದಂಬರಿಗಿದ್ದು, ಅರಮನೆಯಲ್ಲಿ ಅರಮನೆಯೇ ಒಂದು ದೈನೇಸಿ ಪಾತ್ರವಾಗಿ ಬಂದು ಮಾತನಾಡುವ ಪ್ರಸಂಗ ಚಿತ್ರಿತವಾಗಿದೆ. ಕಾದಂಬರಿಯಲ್ಲಿನ ಮನುಷ್ಯರು ಮಾತ್ರವಲ್ಲದೆ, ಹತ್ತು ಹಲವಾರು ಚರಾಸ್ತಿ-ಸ್ಥಿರಾಸ್ತಿಗಳೂ ಕೂಡ ಮಾತನಾಡುವಂತೆ ಚಿತ್ರಿತಗೊಂಡಿರುವುದು ಮಾಂತ್ರಿಕ ವಾಸ್ತವವಾದದ ಒಂದು ಕುಶಲೋಪಾಯವಾಗಿದೆ. ಆದರೆ, ಅರಮನೆಯ ದಿವ್ಯತೆ, ಭವ್ಯತೆ ಇವು ಯಾವುವೂ ಆ ಅರಮನೆ ಎಂಬ ಅರಮನೆಗೆ ಇಲ್ಲವೆಂಬುದನ್ನು ನಿರೂಪಿಸುವ ಮುಖಾಂತರ ವಾಸ್ತವದ ಕಟು ವ್ಯಂಗ್ಯವನ್ನು ಬಿಂಬಿಸಲಾಗಿದೆ. ಅರಮನೆಗೆ ಇರಬೇಕಾದ ಯಾವ ಭವ್ಯತೆಗಳೂ ಇರದಿರುವ ವಾಸ್ತವವನ್ನು ಚಿತ್ರಿಸುತ್ತಾ, ಅದರೊಳಗಿರುವ ರಾಜವಂಶಸ್ಥರೆಂಬ ಜೀವಿಗಳ ಅಸಹಾಯಕತೆಯನ್ನು ಬ್ರಿಟಿಷ್ ಪ್ರಭುತ್ವದೆದುರು ಬಿಂಬಿಸುತ್ತಲೇ, ಮತ್ತೊಂದೆಡೆಗೆ ಸಾಮಾನ್ಯ ಜನರ ಜೀವನದೊಳಗೆ ಪಾಳೇಗಾರಿಕೆಯು ನಡೆಸುತ್ತಿದ್ದ ದಮನ, ದೌರ್ಜನ್ಯಗಳನ್ನೂ ಚಿತ್ರಿಸುತ್ತಾ ಆಗಿನ ವರ್ತಮಾನದ ವಿಪರ್ಯಾಸವನ್ನು ಚಿತ್ರಿಸಲಾಗಿದೆ.

ಈ ಕಾದಂಬರಿಯಲ್ಲಿ ಕಥಾನಕದ ಎರಡು ಮುಖ್ಯ ಹಂತಗಳಿವೆ. ವಸಾಹತುಶಾಹಿ ಆಡಳಿತ ನಿರ್ಮಿಸ ತೊಡಗಿದ್ದ ಹೊಸ ಕಾಯ್ದೆ ಕಟ್ಟಳೆಗಳ ವಾತಾವರಣದಲ್ಲಿ ಅರಮನೆಗಳು ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಂಡು ಜನರಿಂದ ತಾತ್ಸಾರಕ್ಕೊಳಗಾಗುವ ಒಂದು ಹಂತ. ಇದನ್ನು ಕಾದಂಬರಿಯೊಳಗಿನ ಜನಪದೀಯ ಐತಿಹ್ಯವೆಂದು ಕರೆಯಬಹುದಾಗಿರುವ ಸಾಂಬವಿ ಪುರಾಣವು ಸಾಂಕೇತಿಕವಾಗಿ ನಿರೂಪಿಸುತ್ತದೆ. ಕುದುರೆಡವು ಎಂಬ ಊರಿನ ರಾಜಮಾತೆಯಾದ ಭಯ್ರುಮಾಂಬೆ ಬಳಿ ಪೀಕದಾನಿ ಹಿಡಿಯುವ ಕೆಲಸ ಮಾಡುತ್ತಿದ್ದ ತಳಗೇರಿಯ ಮೂಳೆ ಓಬಯ್ಯ ಎಂಬಾತನು ಸಾಕ್ಷಾತ್ ಸಾಂಬವಿ ಸ್ವರೂಪಿಯಾಗಿ ಜನರಿಂದ ಪೂಜಿಸಲ್ಪಟ್ಟು, ಕಡೆಗೆ ಅರಮನೆಯೊಳಗಿದ್ದ ಸಿಂಹಾಸನವನ್ನೇ ತನ್ನ ಆಸನವನ್ನಾಗಿಯೂ, ಅರಮನೆಯನ್ನೇ ತನ್ನ ಶಾಶ್ವತ ವಸತಿ ಕೇಂದ್ರವನ್ನಾಗಿಯೂ ಮಾರ್ಪಡಿಸಿಕೊಳ್ಳುವಲ್ಲಿಗೆ ಇದು ಸಂಭವಿಸುತ್ತದೆ. ಸಾಂಬವಿಯ ದೈವೀಕ ಶಕ್ತಿಯೆದುರು ಜನರು ತಲೆಬಾಗಿ ಅದರ ಆಜ್ಞಾನುಸಾರ ಅರಮನೆಯನ್ನು ಸಾಧುಸಂತರ ಆಶ್ರಮವನ್ನಾಗಿ ಮಾರ್ಪಡಿಸಿಬಿಡುವ ಈ ಕಥನ ಪ್ರಸಂಗ ಕಾದಂಬರಿಯ ರಂಜನೀಯ ಭಾಗವಾಗಿದೆ.


ಸಾಂಬವಿಗಿರುವ ದೈವೀಕ ಶಕ್ತಿಗಳೆಲ್ಲ ಜನಪದೀಯವಾಗಿ ಕಥಿತಗೊಂಡವುಗಳಾಗಿದ್ದು, ಅವು ವಾಸ್ತವದಲ್ಲಿ ನಿಜವೇ? ಸುಳ್ಳೇ? ಎಂಬ ಪರಿಶೀಲನೆಯೂ ಇಲ್ಲದೆ, ಜನರ ನಂಬುಗೆಯೇ ಒಂದು ಮಹಾಶಕ್ತಿಯಾಗಿ ರಾಜ ಪರಿವಾರವನ್ನು 'ಹವಾಮಹಲು' ಎಂಬ ಬಯಲ ವಾಸಕ್ಕೆ ದೂಡಿಬಿಡುವ ಪ್ರಸಂಗ ಪಾಳೇಗಾರಿಕೆ ಪತನ ಕ್ರಮದ ವಿದ್ಯಮಾನವನ್ನು ಸಾಂಕೇತಿಕವಾಗಿ ಅನಾವರಣಗೊಳಿಸುತ್ತಿದೆ.

ಆ ದೈವೀ ಶಕ್ತಿಯಾದ ಸಾಂಬವಿಯಾದರೂ ಸ್ವತಃ ಏನನ್ನೂ ಮಾತನಾಡದೆ, ಬಿಲುಪೈಲಾಗಿ ವರ್ತಿಸುತ್ತಾ, ತನ್ನ ವರ್ತನೆಗಳಿಗೆ ಅದರ ಅನುಯಾಯಿ ಬಳಗದಿಂದ ಅರ್ಥ ವಿಶ್ಲೇಷಣೆ ಮಾಡಿಸುತ್ತಾ ವಿರಾಜಮಾನಗೊಳ್ಳುವ ವಿವರಣೆ, ಮತ್ತೊಂದು ಕಡೆಯಿಂದ ಅಂತಹ ಶಕ್ತಿ ಅವತಾರಗಳ ಪೊಳ್ಳುತನವನ್ನು ಸೂಕ್ಷ್ಮವಾಗಿ ವಿಡಂಬನೆಗೊಳಪಡಿಸುತ್ತದೆ.

ಒಂದು ಮುಖದಿಂದ ಪಾಳೇಗಾರಿಕೆಯನ್ನು ಧಿಕ್ಕರಿಸಿದ ಜನತೆಯು ಅರಮನೆಗಳನ್ನು ಸಾಮಾನ್ಯಗೊಳಿಸುವ ಪ್ರಗತಿಮುಖಿ ಆಶಯವನ್ನು ಇದು ಸೂಚಿಸುತ್ತಿರುವಾಗಲೇ, ಅಲೌಕಿಕ ಶಕ್ತಿಯ ನೆಲೆಗೊಳ್ಳುವಿಕೆ ಎನ್ನುವಂತಾದ್ದು ಅದೇ ಜನತೆಯಲ್ಲಿ ನೆಲೆಗೊಂಡಿರುವ ಮೌಢ್ಯ ಹಾಗೂ ಅಸಹಾಯಕತೆಯ ಪರಮಾವಧಿಗೆ ನಿದರ್ಶನವಾಗಿರುತ್ತದೆ ಎಂಬ ಪ್ರಗತಿ ವಿರೋಧಿ ವಾಸ್ತವಿಕತೆಯನ್ನು ಕೂಡ ಸೂಚಿಸುತ್ತಾ, ಕಾದಂಬರಿ ಬೆಳೆಯುತ್ತದೆ.

ವಸಾಹತುಶಾಹಿ ಆಡಳಿತದ ವಿಸ್ತರಣೆ ಹಾಗೂ ಅದರ ಮೂಲಕ ಅಲ್ಲಿ ಏರ್ಪಡುವ ಸ್ಥಿತ್ಯಂತರಗಳು ಕಾದಂಬರಿಯ ಮತ್ತೊಂದು ಮುಖ್ಯ ಹಂತವಾಗಿದ್ದು, ಥಾಮಸ್ ಮನ್ರೋ ಎಂಬ ಜನಪ್ರಿಯ ಬ್ರಿಟಿಷ್ ಕಲೆಕ್ಟರ್ ರಾಯಲಸೀಮಾ ಎಂದು ಗುರುತಿಸಲ್ಪಡುವ ಪ್ರಾಂತ್ಯದ ದಲಿತ ವರ್ಗಗಳಿಗೆ, ಬಡಬಗ್ಗರಿಗೆ ಬದುಕಿನ ಹೊಸ ಸಾಧ್ಯತೆಗಳನ್ನು ಒದಗಿಸಿಕೊಟ್ಟ ಎಂಬುದನ್ನು ಹಲವು ಕಡೆ ನಿರೂಪಣೆ ಮಾಡುತ್ತಾ, ಕಾದಂಬರಿಗೆ ಮನ್ರೋನನ್ನು ಅನೌಪಚಾರಿಕ ನಾಯಕ ಪಾತ್ರವನ್ನಾಗಿಸಲಾಗಿದೆ.

ಅದೇ ನೆಲೆಯಲ್ಲಿ ಪಾಳೇಗಾರರು ಮತ್ತು ಜಮೀನ್ದಾರರೆಲ್ಲಾ ಮೂಲತಃ ಜನಪೀಡಕರಾಗಿದ್ದವರು ಎಂಬುದನ್ನು ನಿರೂಪಿಸುತ್ತಾ, ಖಳನಾಯಕ ಪಾತ್ರಗಳಾಗಿ ಚಿತ್ರಿಸಲಾಗಿದೆ. ಆ ಪ್ರಾಂತ್ಯದ ಜನಸಾಮಾನ್ಯರ ಬದುಕಿನ ಅನುಭವದ ಹಿನ್ನೆಲೆಯಲ್ಲಿ ಈ ಬಗೆಯ ಪಾತ್ರ ಸಮೀಕರಣಗಳು ಸಹಜ ಎಂಬಂತೆ ಕಾದಂಬರಿಯ ಕಥನ ನಿರೂಪಿತವಾಗಿದೆ.



ಮನ್ರೋ ಶವಸಂಸ್ಕಾರಕ್ಕೆ ಸೇರುವ ಅಪಾರ ಸಂಖ್ಯೆಯ ಜನ, ಆತನನ್ನು ಪ್ರತಿಯೊಂದು ಧರ್ಮದವರೂ ತಮಗೆ ಸೇರಿದವನು ಎಂದು ನಡೆಸುವ ಗದ್ದಲ ಮುಂತಾದ ಪ್ರಸಂಗಗಳ ವಿವರಣೆ ಈ ಕಾದಂಬರಿಯ ಕವಿ ಸಮಯಗಳೆಂದು ಪರಿಗಣಿಸಬಹುದಾದರೂ, ಮನ್ರೋ ವ್ಯಕ್ತಿತ್ವದ ಬಗ್ಗೆ ಜನಪದರ ಸಾಲಿನಲ್ಲಿಯೇ ತಾವೂ ಒಬ್ಬರಾಗಿ ಕಾದಂಬರಿಕಾರರು ಕೂಡ ಆರಾಧನಾ ಭಾವನೆಯನ್ನು ಹೊಂದಿದ್ದಾರೆಯೇ ಎಂದು ಭಾಸವಾಗಲು ಅವಕಾಶವಾಗಿದೆ.

ವಸಾಹತುಶಾಹಿ ಆಡಳಿತದ ಪರಿಣಾಮಗಳ ಬಗ್ಗೆ ಸ್ವಲ್ಪ ಏಕಮುಖೀ ಎನಿಸಬಹುದಾದ ಪ್ರಶಂಸೆ ಈ ಕಾದಂಬರಿಯ ಧೋರಣಾತ್ಮಕ ದೌರ್ಬಲ್ಯವಾಗಿದೆಯೇ ಎಂಬ ಅನಿಸಿಕೆ ಕೂಡ ಈ ಹಿನ್ನೆಲೆಯಲ್ಲಿ ಹುಟ್ಟಿಕೊಳ್ಳುತ್ತದೆ. ಈ ಬಗ್ಗೆ ಆಧುನಿಕೋತ್ತರ ತಿಳಿವಳಿಕೆಯ ನೆಲೆಯಿಂದ ಕನ್ನಡದಲ್ಲಿ ಬಹುಮುಖ್ಯವಾದ ಸಂವಾದವೊಂದನ್ನು ಕೈಗೊಳ್ಳಬೇಕಾದ ಸನ್ನಿವೇಶವನ್ನು ಈ ಕಾದಂಬರಿ ಉಂಟುಮಾಡಿತೆನ್ನಬಹುದು.

ನಮ್ಮ ಸಮಾಜದ ಕೆಳವರ್ಗದ ಸಮುದಾಯಗಳಲ್ಲಿ ಹಾಗೂ ಆ ನೆಲೆಗಳಿಂದ ಹೊರಹೊಮ್ಮಿದ ಬರಹಗಾರರು ಮತ್ತು ಚಿಂತಕರಲ್ಲಿ ನೆಲೆಗೊಂಡಿರುವ ವಸಾಹತುಶಾಹಿ ಆಡಳಿತದ ವಿಮೋಚನಾವಾದಿ ಕಾರ್ಯಾಚರಣೆಯ ಕುರಿತಾದ ಭಾವನಾತ್ಮಕ ಪ್ರೀತಿಯ ಎಳೆಗಳು ಈ ಕಾದಂಬರಿಯಲ್ಲಿ ಹಲವು ಕಡೆ ಗೋಚರವಾಗುತ್ತದೆ.

ಬೊಳ್ಳಿ ನಾಗಿರೆಡ್ಡಿಯಂತಹ ಜಮೀನ್ದಾರಿ ವಿರೋಧಿ ಕ್ರಾಂತಿಕಾರಿ ಹೋರಾಟಗಾರ ಹಾಗೂ ಮನ್ರೋನನ್ನ ಮುಖಾಮುಖಿಯಾಗಿಸುವ ಪ್ರಸಂಗದಲ್ಲಿ, ರಾಜಕೀಯ ಚಾಣಾಕ್ಷತೆಯಿಂದ ನಾಗಿರೆಡ್ಡಿಯನ್ನು ಸೆರೆ ಹಿಡಿದು ಗಲ್ಲಿಗೇರಿಸಿದ ಸಂದರ್ಭದಲ್ಲಿ, ಹುತಾತ್ಮ ನಾಗಿರೆಡ್ಡಿ ಮತ್ತು ಕಾದಂಬರಿಯ ಪ್ರಕಾರ 'ಮಹಾತ್ಮ' ಮನ್ರೋ ಇವರ ನಡುವಿನ ಆಯ್ಕೆಯ ಪ್ರಶ್ನೆ ಬಂದಾಗ ಕಾದಂಬರಿ ಅದನ್ನು ಜಾಣತನದಿಂದ ಮರೆಮಾಚಿದೆ. ಮನ್ರೋ ಹಾಗೂ ನಾಗಿರೆಡ್ಡಿ ಅಂತರ್ಯದಲ್ಲಿ ಒಂದೇ ಬಗೆಯ ಗುರಿ ಹಾಗೂ ಧ್ಯೇಯಗಳನ್ನು ಹೊಂದಿದ್ದವರು ಎಂಬಂತಹ ಅಭಿಪ್ರಾಯಗಳನ್ನು ಸೂಚಿಸುತ್ತಾ, ಜನತೆಯ ನಡುವಿನಿಂದ ಮೂಡಿಬಂದ ಒಬ್ಬ ಜಮೀನ್ದಾರಿ ವಿರೋಧಿ ಜನಪರ ಹೋರಾಟಗಾರನಿಗೂ, ವಸಾಹತುಶಾಹಿ ಪ್ರತಿನಿಧಿಯಾಗಿ ಕೆಲಸ ನಿರ್ವಹಿಸುತ್ತಿದ್ದ ಒಬ್ಬ ಜನಪ್ರಿಯ ಕಲೆಕ್ಟರ್‌ನಿಗೂ ನಡುವೆ ಇರುವ ಅಂತರವನ್ನು ನಾಟಕೀಯವಾಗಿ ನಿಭಾಯಿಸಿ ಕೈತೊಳೆದುಕೊಂಡಿದೆ.

ನಾಗಿರೆಡ್ಡಿ ಗಲ್ಲಿಗೇರಿ ಹುತಾತ್ಮನಾದ ಮೇಲೂ ಜನರು ಮನ್ರೋನ ವಿರುದ್ಧವಾಗಿ ಬಂಡೇಳಲಿಲ್ಲ ಎಂಬುದನ್ನು ಸಾಬೀತುಗೊಳಿಸಲು ಕಾದಂಬರಿಯು ಪವಾಡೀಕರಣ, ಸತ್ತ ನಂತರ ಪುನರ್ಜನ್ಮ ತಳೆಯುವ ದಂತಕಥೆ ಮುಂತಾದ ಅಂಶಗಳನ್ನು ಮುಂದಿಟ್ಟು ಕಾದಂಬರಿಕಾರ ಎದುರಿಸಬೇಕಿದ್ದ ಬಹು ಮುಖ್ಯ ತಾಕಲಾಟವೊಂದನ್ನು ಕಥನದ ಓಘದಲ್ಲಿ ಮಸುಕುಗೊಳಿಸಿದಂತಾಗಿದೆ.

ಇದು ಕಾದಂಬರಿಯ ಧೋರಣಾತ್ಮಕ ಪ್ರಶ್ನೆಯಾಗಿದ್ದು ಚರಿತ್ರೆಯನ್ನು ಸಿದ್ಧಾಂತಗಳ ಜಡ ಚೌಕಟ್ಟಿನಿಂದಾಚೆ ಜನಪದರ ನೆಲೆಗಟ್ಟಿನಿಂದ ಗ್ರಹಿಸುವ ಹೊಸ ಉಪಕ್ರಮ ಎಂಬ ನೆಲೆಯಿಂದ ಕಾದಂಬರಿಕಾರರು ಈ ನಿಲುವನ್ನು ಪ್ರತಿಪಾದಿಸುತ್ತಿರಬಹುದೇ ಎಂಬ ಪ್ರಶ್ನೆಯ ಜೊತೆಗೆ ಹೀಗೆ ಸಮನ್ವಯಗೊಳಿಸಿ ನೋಡುವುದು ಸಾಧುವಾದುದೇ ಎಂಬ ಪ್ರಶ್ನೆ ಉಳಿದುಕೊಳ್ಳುತ್ತದೆ. ಮನ್ರೋ ಕೈಗೊಂಡ ಬಹುಪಾಲು ಅಭಿವೃದ್ಧಿ ಕಾರ್ಯಕ್ರಮಗಳು ಒಟ್ಟಾರೆಯಾಗಿ ವಸಾಹತುಶಾಹಿ ಆಡಳಿತ ವಿಸ್ತರಣಾ ವ್ಯೂಹದ ಒಂದು ಅಂಗವಾಗಿವೆ ಎಂಬ ಸೂಚನೆಗಳನ್ನು ಅಲ್ಲಲ್ಲಿ ಮಂಡಿಸಲಾಗಿದೆಯಾದರೂ ಅದು ಪ್ರಧಾನ ನೆಲೆಗಟ್ಟಾಗದೆ, ವಸಾಹತು ಆಡಳಿತ ಹೊಸ ಬೆಳಕನ್ನು ತಂದಿತು ಎಂಬ ಧೋರಣೆಯೇ ಎದ್ದು ಕಾಣುತ್ತದೆ.

ಕೂಡ್ಲಿಗಿ ಸೀಮೆಯ ತಿಲ್ಲಾನ ತಾಯಕ್ಕ ಹಾಗೂ ಅವಳ ಮಗಳು 'ತ್ರಿಲೋಕ ಸುಂದರಿ' ಚಿನ್ನಾಸಾನಿ, ಕೂಡ್ಲಿಗಿಯ ಬ್ರಿಟಿಷ್ ಅಧಿಕಾರಿ ಎಡ್ವರ್ಡ್ ಹಾಗೂ ಆತನ ಹೆಂಡತಿ ಜನ್ನಿಫರ್‌ಳ ವೈರಾಗ್ಯ, ಎಲ್ಲಾಪುರ ಕೊರಚರಹಟ್ಟಿ ಜನರ ಕಳ್ಳತನದ ಕೌಶಲ್ಯ, ಅಧಿಕಾರವನ್ನು ತ್ಯಜಿಸಿ, ಧರ್ಮಾರ್ಥ ಕಾರ್ಯದಲ್ಲಿ ನಿರತನಾಗುವ ಮುನಸೋಬಯ್ಯ ಎಂಬ ಬ್ರಿಟಿಷ್ ವಿರಾಗಿ, ಚೋರರ ಗುರು ಆಕಾಸ ರಾಮಣ್ಣ ಅವಧೂತನಾಗುವುದು, ಸುಡುಗಾಡೆಪ್ಪ ಎಂಬ ಮತ್ತೊಬ್ಬ ಅವಧೂತ, ಮಹಾಕವಿ ಅಯ್ಯಾಳೇಶ್ವರನ ಕಾವ್ಯ ಸಾಹಸ, ಚಿನ್ನಾಸಾನಿಯೊಂದಿಗೆ ಪ್ರೇಮ ಪಾಶಕ್ಕೊಳಗಾದ ಹೆನ್ರಿ ಎಂಬ ಬ್ರಿಟಿಷ್ ತರುಣಾಧಿಕಾರಿಯ ವಿರಹ, ಹೆನ್ರಿಯನ್ನು ಮೈಮೇಲೆ ಆವಾಹಿಸಿಕೊಂಡ ಅಂಜಣಿ ಎಂಬ ಕೋತಿಯ ಪ್ರಸಂಗ ಮುಂತಾದ ಹಲವಾರು ಉಪಕಥೆಗಳು ಈ ಕಥಾನಕದ ಭಾಗವಾಗಿದ್ದು, ಅಲ್ಲಿನ ಜನ ಸಂಸ್ಕೃತಿಯ ವೈವಿಧ್ಯತೆಯನ್ನು ಅರ್ಥ ಮಾಡಿಕೊಳ್ಳಲು ನೆರವಾಗುತ್ತವೆ.

ಇದರಲ್ಲಿ ಮೂಳೆ ಓಬಯ್ಯನ ಪರಿತ್ಯಕ್ತ ಪತ್ನಿ ಜಗಳೂರವ್ವ ಮತ್ತು ಆಕೆಯ ಸಾಕು ಸಂತಾನ ಸೂರನೆಂಬ ಕೋಣನ ಪ್ರಣಯ ಪ್ರಸಂಗಗಳು, ಸಾಂಬವಿಗೆ ಬಲಿಕೊಡಲೆಂದು ಬಂಧಿಸಲ್ಪಟ್ಟು ಅಲ್ಲಿಂದ ತಪ್ಪಿಸಿಕೊಂಡು ಸಾಕುತಾಯಿಯ ಸಮೇತ ಮಿಂಚೇರಿ ಪ್ರಾಂತ್ಯಕ್ಕೆ ವಲಸೆ ಹೋಗುವ ಕೋಣನ ಸಾಹಸ ಮುಂತಾದವೆಲ್ಲಾ ಕಾದಂಬರಿಕಾರ ಕುಂ. ವೀ. ಅವರ ಕಥನ ಸಾಮರ್ಥ್ಯಕ್ಕೆ ಉಜ್ವಲ ನಿದರ್ಶನಗಳಾಗಿದ್ದು, ಸಮಕಾಲೀನ ಕಾದಂಬರಿಕಾರರ ನಡುವೆ ಅವರ ಪ್ರತಿಭೆಗೆ ಮೆರಗು ಕೊಡುವಂತಿವೆ. ತನ್ನ ಕುಗ್ಗಿದ ಲೈಂಗಿಕ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಸಾಂಬವಿಗೆ ಬಲಿಯಾದ ಕೋಣನ ಬೀಜಗಳನ್ನು ಕೊರಳಲ್ಲಿ ಧರಿಸಿ ಓಡಾಡುವ ಬೊಕ್ಕೆ ಪ್ರಾಂತ್ಯದ ಪಾಳೇಗಾರ ಮಾರನಾಯಕನ ಕಥೆಯಂತೂ ಹಾಸ್ಯ ವೈನೋದಿಕ ಪ್ರಸಂಗ ಸೃಷ್ಟಿಯಲ್ಲಿ ಕುಂ. ವೀ. ಗಿರುವ ಅದ್ಭುತ ಸಾಮರ್ಥ್ಯಕ್ಕೆ ಪ್ರತೀಕದಂತಿದೆ.

ಕಾದಂಬರಿಕಾರರು ಹೇಳಿರುವಂತೆ ಇದೊಂದು "ಐತಿಹಾಸಿಕ, ಪೌರಾಣಿಕ, ಸಾಮಾಜಿಕ ಕಥಾನಕ ಕಾದಂಬರಿಯೊಳಗಿನ ಭಾಷೆ ಬಳ್ಳಾರಿ ಜಿಲ್ಲೆಯ ಗಡಿ ಅಂಚಿನಲ್ಲಿ ಹರಿಯುತ್ತಿರುವ ವೇದಾವತಿಯ ಇಕ್ಕೆಲದ ಸರಹದ್ದಿನದು.... ಕಾದಂಬರಿಯ ಆರಂಭಿಕ ಕೆಲ ಪುಟಗಳನ್ನು ತಾಳ್ಮೆಯಿಂದ, ಗಟ್ಟಿಯಾಗಿ ಓದಿಕೊಂಡರೆ ಕೊನೆ ಪುಟವನ್ನು ತಾಕದೇ ತಲುಪಬಹುದು"


-ಡಾ. ಬಂಜಗೆರೆ ಜಯಪ್ರಕಾಶ್

ಸ್ನೇಹಿತರು ಜೀವನದ ಕಾಂತಿಯಿದ್ದಂತೆ --ಜಾನ್ ಹೇ

'ಇಲ್ಲವಾದವರ ನೆನಪುಗಳನ್ನು ಮಾತುಗಳಲ್ಲಿ ಕಟ್ಟಿಕೊಳ್ಳಲು ಹೊರಟಾಗ ಸಿಗುವುದು ಅವರ ಚಿತ್ರವಲ್ಲ; ಅದೊಂದು ಕನ್ನಡಿ. ಕನ್ನಡಿಯಲ್ಲಿ ನಮ್ಮ ಬಿಂಬವೇ ನಮಗೆ ಕಾಣುತ್ತದೆ. ಈ ಮುಂದಿನ ಬರಹವೂ ಅಂತಹ ಒಂದು ಕನ್ನಡಿ. ಇದರಲ್ಲಿ ಬರೆವ ನಾನು, ಓದುವ ನೀವು ಕಾಣುತ್ತೇವೆ.

ಈ ತುಕ್ಕಾರ ಬೆಳಬೆಳಗ್ಗೆಯೇ ನಾಡಿನ ನೂರಾರು ಜೀವಗಳಲ್ಲಿ ದುಗುಡ ಮಡುಗಟ್ಟಿತ್ತು. ಸುದ್ದಿಯನ್ನು ನಂಬದೆ ಹೋದವರೇ ಹೆಚ್ಚು. ಆದರೆ ಸಮಯ ಸರಿದಂತೆ ಅವರೆಲ್ಲರ ಮನಸ್ಸುಗಳನ್ನು ಒಟ್ಟಿಗೆ ಹೆಣೆದವರೊಬ್ಬರು ಇನ್ನು ಇಲ್ಲವಾದರೆಂಬ ಸಂಗತಿ ದಿಟವೆಂದು ತಿಳಿಯಿತು. ಯಾರನ್ನೂ ಗಳಿಗೆ ಮಟ್ಟಿಗೂ ಕಾಯಿಸದ ಶ್ರೀನಿವಾಸರಾಜು, ತಮ್ಮ ದೇಹವನ್ನು ನೋಡಲು ಅವರ ಮನೆಯ ಮುಂದೆ ನಿಂತ ಗೆಳೆಯರ ಬಳಗವನ್ನು ಗಂಟೆಗಟ್ಟಲೆ ಕಾದು ಕುಳಿತಿರುವಂತೆ ಮಾಡಿದರು. ಅಷ್ಟು ಜನರಿಗೆ ಬೇಕಾಗಿದ್ದ ಜೀವವೊಂದು ಕೊನೆಯುಸಿರೆಳೆದಾಗ ಅವರೊಡನೆ ಅವರಲ್ಲಿ ಒಬ್ಬರೂ ಇರಲಾಗದೇ ಹೋದಂತೆ ಆದ ಬದುಕಿನ ಕಟಕಿ ಎಲ್ಲರನ್ನು ಕಾಡುತ್ತಿತ್ತು.

ಶ್ರೀನಿವಾಸರಾಜು ಅವರನ್ನು ಯಾವ ಮಾತುಗಳಲ್ಲಿ ಕಟ್ಟಿಡಲು ಹೊರಟರೂ ಅದರಾಚೆಗೆ ಅವರು ನಿಂತು ಅವರದೇ ಆದ ಬಗೆಯಲ್ಲಿ ನಗುತ್ತಿರುತ್ತಾರೆ. ಈ ಮಾತುಗಳಾಚೆಗೆ ಉಳಿಯುವ ಶ್ರೀನಿವಾಸ ರಾಜುವೇ ದಿಟವೇನೋ ಎಂದು ನನಗೆ ಹಲವು ಬಾರಿ ಅನ್ನಿಸಿರುವುದುಂಟು. ನೀವು ಇಂತವರು; ಇಂಥ ಹೊಣೆಯನ್ನು ಹೊತ್ತವರು ಎಂದು ಹಲವು ಬಾರಿ ಬಲ್ಲ ಜನರು ನುಡಿದದ್ದನ್ನು ರಾಜು ನಿಜಗೊಳಿಸಲು ಜೀವವನ್ನು ತೇಯ್ದರೇನೋ ಎಂದು ನಾನು ಹಲುಬಿದ್ದೇನೆ. ಆದರೆ ಆ ಗಳಿಗೆಯಲ್ಲೇ ಅವರು ಅದರಾಚೆಗೂ ಏನೋ ತನ್ನಲ್ಲಿ ಇದೆಯೆಂಬುದನ್ನು ಬೆರಳು ಮಾಡಿ ತೋರಿಸುತ್ತಿದ್ದಂತೆ ಅನಿಸಿದೆ. ಹೀಗಾಗಿ ಅವರನ್ನು 'ಇವರು ಇವರೇ' ಎಂದು



ಶ್ರೀನಿವಾಸ ರಾಜು: ಎಂದೂ ಅಗಲದ ಮುಗುಳ್ನಗೆ

■ ಕೆ.ವಿ. ನಾರಾಯಣ್

ಈ ಬರಹದ ಕನ್ನಡಿಯಲ್ಲಿ ರಾಜು ಕಾಣಸಿಗುತ್ತಾರೋ ಇಲ್ಲವೋ ನಾನು ಅರಿಯೆ. ಆದರೆ ಇತರರು ಬರೆದದ್ದನ್ನು ಜತನವಾಗಿರಿಸುತ್ತಿದ್ದ ರಾಜು ಇದನ್ನೂ ಹಾಗೆಯೇ ಇರಿಸುತ್ತಿದ್ದರು, ತಮ್ಮ ಜೋಳಿಗೆಯಿಂದ ಹೊರ ತೆಗೆದು ಓದುವವರಿಗೆ ಕೊಡುತ್ತಿದ್ದರೆಂಬುದಂತೂ ಖಂಡಿತ. ಓದಿದ ಯಾರಾದರೂ 'ಇದೇನು ನಿಮ್ಮ ಬಗ್ಗೆ ಬರೆದದ್ದನ್ನೇ ನಮಗೆ ಓದಲು ನೀಡುತ್ತಿದ್ದೀರಲ್ಲ' ಎಂದು ಕೇಳಿದ್ದರೆ ಅದಕ್ಕೂ ಸಾವಿನಲ್ಲೂ ಅವರನ್ನು ಅಗಲದಂತಿದ್ದ ಅವರ ಮುಗುಳ್ನಗೆಯೇ ಉತ್ತರವಾಗಿರುತ್ತೆ....

ಎಂದೂ ಹೇಳಲಾಗದ ಇಕ್ಕಟ್ಟಿಗೆ ಸಿಲುಕಿರುವುದುಂಟು.

ರಾಜು ಅವರೊಡನೆ ಪಿಪಿ ಬಳಗವೆಂಬ ಹೆಸರು ಚಾಲ್ತಿಯಲ್ಲಿದೆ. ಪಿಪಿ ಎಂದರೇನೆಂಬ ಬಗ್ಗೆ ಹಲವು ಕತೆಗಳಿವೆ. ಹಳೆಯ ಚಂದಮಾಮಗಳಲ್ಲಿ ಬರುತ್ತಿದ್ದ ಪರೋಪಕಾರಿ ಪಾಪಣ್ಣನ ಕತೆಗಳನ್ನು ಓದಿದವರಿಗೆ ಪಿಪಿ ಎಂದರೆ ಇದೇ ಪರೋಪಕಾರಿ ಪಾಪಣ್ಣ ಎನಿಸಿದ್ದುಂಟು. ರಾಜು ತೆರೆದ ಬಾಗಿಲಿನಂತೆ ಬದುಕಿದವರು. ಅವರೊಂದು 'ಸರ್ವಋತು ಬಂದರು' ಅಲ್ಲಿ ತಂಗಲು ಹಡಗುಗಳಿಗೆ ಎಂದೂ ಮುಜುಗರವೆನಿಸುತ್ತಿರಲಿಲ್ಲ, ಅದು ನಮಗಿರುವ ಹಕ್ಕು ಎಂದೇ ತಿಳಿಯುವಂತಿತ್ತು, ರಾಜು ಲಾಳಿಯಾಡಿದ್ದು ನೂರು ದಾಟ ಬದುಕಿದ ಜೀವಗಳಿಂದ ಹಿಡಿದು ಇದೇ

ಈಗ ಓದಿ ಬರೆಯಲು ಕಲಿಯು ತೊಡಗಿದ್ದ ಜೀ[...] ನಡುವೆ. ಇವರೆಲ್ಲ ಅವರೊಡನೆ ರಕ್ತ ಹಂಚಿಕೊಂ[...] ಹುಟ್ಟಿದವರಂತೇ ಆಗಿಬಿಟ್ಟರು. ಅಥವಾ ತೆಲುಗಾದ[...] ರಕ್ತವೋ ನೀರೋ ಎಂದು ತಿಳಿಯಲಾಗದಂತೆ ರಾ[...] ಎಲ್ಲರೊಳಗೊಂದಾದರು. ಕೊನೆಗೆ ಉಳಿದ ದೇಹವ[...] ಬೇರೆಯವರಿಗೆ ನೀಡಿ ಎಲ್ಲರನ್ನೂ ಋಣಿಗಳ[...] ಮಾಡಿಹೋದರು.


ನಮ್ಮೆಲ್ಲರ ಹಿರೀಕರಲ್ಲೊಬ್ಬರಾದ ಸರ್ವಜ್ಞ 'ಆಡ[...] ಮಾಡುವನು ರೂಢಿಯೊಳಗುತ್ತಮನು' ಎಂದಿದ್ದಾ[...] ಅಂತಹ ಉತ್ತಮರಲ್ಲೊಬ್ಬರು ಈ ನಮ್ಮ ರಾ[...] ಮಾಡಿದೆನೆಂಬುದು ಮನದಲಿ ಕಾಡಿದರೆ ಏಡಿಸಿ ಕಾಡಿ[...] ಶಿವನ ಡಂಗುರವೆಂಬ ಎಚ್ಚರ ಅವರಲ್ಲಿ ನೆಲೆಯೂರಿ[...] ಬೇರೆಯವರು ಅವರು ಇದನ್ನೆಲ್ಲ ಮಾಡಿದರೆಂದು ಹ[...] ಹೊಗಳುತ್ತಿದ್ದರೆ ತಾನು ಇನ್ನೂ ಮಾಡಬೇಕಾದ್ದ[...] ಚೀಟಿಯಲ್ಲಿ ಬರೆಯುತ್ತ ಮೂಲೆಯಲ್ಲಿ ಈ ರಾ[...] ಕುಳಿತಿದ್ದನ್ನು ನಾವೆಲ್ಲ ಬಲ್ಲೆವು. ಈ ಕಿಂದರಿಜೋ[...] ಕರೆದವರೆಲ್ಲ ಅವರ ಹಿಂದೆ ಇರಲಿಲ್ಲ; ಮುಂದೆ ಇದ್ದ[...] ಹಿಂದೆ ಈ ಕಿಂದರಿಜೋಗಿ ಅವರೊಡನೆ ನಡೆದ[...] ಚಿಕ್ಕವರ ಹೆಜ್ಜೆಗಳನ್ನು ತಾನು ಅನುಸರಿಸುತ್ತಿದ್ದೇನೆಂ[...] ಎಲ್ಲರಿಗೂ ಅನಿಸುವಂತೆ ಸಾಗಿದರು; ತನ್ನನ್ನು ಅವ[...] ಹಿಂಬಾಲಿಸುತ್ತಿದ್ದಾರೆಂಬ ಭಾವ ಎಂದೂ ಮೂಡದ[...] ಎಚ್ಚರ ವಹಿಸಿದರು.

ರಾಜು ಮೇಸ್ಟ್ರಾಗಿದ್ದರೂ ಮಾತಾಡಿದ್ದಕ್ಕಿ[...] ಕೇಳಿಸಿಕೊಂಡದ್ದೇ ಹೆಚ್ಚು, ಮಾತಾಡದೆ ಇರುವುದ[...] ಮಾತಾಡಲು ಅವರಲ್ಲಿ ಏನೂ ಇಲ್ಲದಿರುವುದ[...] ಕಾರಣವಾಗಿರಲಿಲ್ಲ, ತಾವು ಮಾತಾಡಬೇಕಾದ್ದ[...] ಇನ್ನೊಬ್ಬರ ಮೂಲಕ ನುಡಿಸುವುದು ಅವರ ಕ್ರಮ[...] ಹೀಗೆ ಕೇಳಿಸಿಕೊಳ್ಳುವುದೂ ಏನೋ ಕಲಿಯಲು ಮಾಡು[...] ಕೆಲಸವೆಂಬುದಕ್ಕಿಂತ ಕೇಳುವುದೇ ಅದರ ಗುರಿಯಾಗಿರುತ್ತಿ[...] ಯಾರಾದರೂ ಮಾತಾಡುತ್ತಿದ್ದರೆ ಅವರು ಹೇಳಿದ್ದ[...] ನಾವು ಸುಮ್ಮನೆ ಕೇಳಿಸಿಕೊಳ್ಳುವುದೇ ಅವರಿಗೆ ನಾ[...] ನೀಡುವ ಗೌರವವೆಂಬುದು ಅವರ ತಿಳಿವಳಿಕೆಯಾಗಿ[...]

■ ಇಲ್ಲಿಯವರೆಗೆ.....

ರೂಥ್ ತನ್ನ ದಲಿತ ಸಂಗಾತಿ ರೂಬೆನ್‌ನ ನೆನಪನ್ನು ಮಾಡಿಕೊಳ್ಳುತ್ತಾಳೆ. ಆ ನೆನಪುಗಳು ರೂಬೆನ್‌ದು ಮಾತ್ರವಲ್ಲ. ದಲಿತ ಜನಾಂಗದ ಶತಶತಮಾನದ ಅಪಮಾನದ ನೆನಪುಗಳು. ರೂಬೆನ್‌ನ ತಾತ ಎಲ್ಲನ್ನ ಎನ್ನೆಲದಿನ್ನೆಯಲ್ಲಿ ತನ್ನ ಸೋದರತ್ತೆಯ ಮಡಿಲಲ್ಲಿ ಮುಗ್ಧವಾಗಿ ಬೆಳೆದವನು. ಅಪಾರವಾದ ಕಲೆಗಾರ. ಒಮ್ಮೆ ಪಕ್ಕದ ಹಳ್ಳಿಗೆ ಬಯಲಾಟದವರು ಬಂದು ಬಿಡದಿ ಹೂಡಿದ್ದಾಗ ಕುತೂಹಲದಿಂದ ತಾನೂ ನೋಡಲು ಹೋಗುತ್ತಾನೆ. ಆದರೆ ಅವನು ದಲಿತನೆಂದು ಗುರುತುಹಿಡಿದ ಆ ಊರಿನ ಜನರು ಅವನನ್ನು ಹೊಡೆದು ಅಟ್ಟಿಸಿಕೊಂಡು ಹೋಗುತ್ತಾರೆ. ಅವರಿಂದ ತಪ್ಪಿಸಿಕೊಂಡು ಹಳ್ಳಕೊಳ್ಳ, ಗುಡ್ಡ-ಬೆಟ್ಟಗಳನ್ನು ದಾಟುತ್ತಾ ಉಟ್ಟ ಬಟ್ಟೆಯೆಲ್ಲಾ ಹರಿದುಕೊಂಡು ಪೆಟ್ಟುತಿಂದು ಬೆತ್ತಲಾಗುವ ಎಲ್ಲನ್ನ ಬೆಳಗಾಗುವ ವೇಳೆಗೆ ಪಕ್ಕದ ಕೇರಿಗೆ ಬಂದು ತಮಟೆಯ ನಾಗನ್ನನ ಮಡಿಲು ಸೇರುತ್ತಾನೆ.

ತಮಟೆಯ ನಾಗನ್ನನೊಳಗೊಬ್ಬ ಎಲ್ಲನ್ನ!



ಹೇಳಿಕೊಟ್ಟಿದ್ದ ತನ್ನ ಹೆಜ್ಜೆಗಳ ಲಯವನ್ನ ನಾಗನ್ನನ ಹೆಜ್ಜೆಗ[...] ವರ್ಗಾಯಿಸಿದ್ದ. ಪುರಾಣದ ರಹಸ್ಯಗಳನ್ನೆಲ್ಲಾ ಹೇಳ್ತ[...] ಬಾರೋ ಅಂತ ಹೇಳಿ ಅವೆಷ್ಟೋ ಹೊಸ ವಿಷಯಗಳ[...] ತಿಳಿಸಿದ್ದ. ಹಾರುವರು ಇವೆಲ್ಲಾ ಹೀಗೆ ಅಂತ ನಮ[...] ಹೇಳಲೇ ಇಲ್ಲ. ಎಲ್ಲಾ ಬರೀ ಸುಳ್ಳಿನ ಕಂತೆಗಳ[...] ಹೇಳಿದ್ದಾರೆ ಅಂತ ತಾನಂದುಕೊಂಡದ್ದೂ ನಾಗನ್ನನ[...] ಹೇಳಿದ. ನಾಗನ್ನನಿಗೊಂದು ಬದುಕನ್ನೇ ಕೊಟ್ಟ. ತಮಟೆ[...] ನಾಗನ್ನನಾಗಿ ಜನರಿಗೆ ಹಾಗೇ ಪರಿಚಯಿಸಿ ತಾ[...] ಮರೆಯಾದ.

ರೂಥಳ ನೆನಪುಗಳ ಗೂಡಿನಲ್ಲಿ ನಾಗನ್ನನಿಗೆ ಒಂ[...] ಪ್ರತ್ಯೇಕವಾದ ಸ್ಥಾನವಿದೆ. ರೂಬೆನ್‌ನಂತೂ ಎಲ್ಲ[...] ನಾಗನ್ನರ ಬಗ್ಗೆ ಹೇಳುವಾಗ ಒಂದೇ ರೀತಿಯ ಉದ್ವೇಗ[...] ಒಳಗಾಗ್ತಿದ್ದ. ತನಗೆ ತಾನು ಎಷ್ಟೋ ಸಲ ಹೇ[...] ಕೊಂಡಿದ್ದಳು-ಆ ಅಸ್ಪೃಶ್ಯ ಶರೀರ ಎಂಥ ಅದ್ಭುತ, ಜೀ[...] ತುಂಬಿದ ಕಲೆಯ ನೆಲೆಯಾಗಿದೆ. ಹಾಗೆಂದುಕೊಂಡಾಗಲ[...] ದ್ರವಿಸುವುದು ಅವಳ ಕಣ್ಣುಗಳಲ್ಲ, ಹೃದಯ. ಅವ[...] ಇರುವೇ ಕಣ್ಣೀರಿನಲ್ಲಿ ತೊಯ್ದುಹೋದ ಹಾ[...] ಅನ್ನಿಸುತ್ತೆ.

ನಾಗನ್ನನಿಗೆ ಚಂದ್ರಪ್ಪ ಏನಾಗಬೇಕು? ನಾಗನ[...] ತಾಯಿ ಲಚ್ಚಿ ಅವನು ನಿನ್ನ ಚಿಕ್ಕಪ್ಪ ಕಣೋ ಅಂದಿದ್ದ[...] ಅವನು ಚಂದ್ರಪ್ಪನನ್ನ ಹಾಗೇ ಕರೆದ. ಚಂದ್ರಪ್ಪನ ಸಾ[...] ದಿನದವರೆಗೂ ಅವನನ್ನು ನಾಗನ್ನ ಚಿಕ್ಕಪ್ಪ ಅಂತಲೇ ಕರೆ[...] ಕೊನೆಗೆ ಚಂದ್ರಪ್ಪನ ಸಾವಿನ ದಿನ ಅವನು ನಾಗನ್ನ[...] ಹತ್ತಿರಕ್ಕೆ ಕರೆದು 'ನನ್ನ ಅಪ್ಪಾ ಅಂತ ಕರೆಯೋ ಮಗ[...] ಅಂದ. ಹಾಗೇ ಕರೆಯೋಣವೆಂದು ನಾಗನ್ನ ಬಾಯ್ತೆರೆ[...] ವಷ್ಟರಲ್ಲಿ ಚಂದ್ರಪ್ಪ ನಗುತ್ತಲೇ ಮರೆಯಾದ. ನಾಗ[...] ಅಪ್ಪಾ ಅಪ್ಪಾ ಅಂತ ಪದೇ ಪದೇ ಕರೆದ. ಆ ಮಾತ[...] ಕೇಳಿಸಿಕೊಳ್ಳಲು ಚಂದ್ರಪ್ಪನೇ ಇರಲಿಲ್ಲ.

ಚಂದ್ರಪ್ಪನ ಕರ್ಮಗಳನ್ನೆಲ್ಲಾ ತಾನೇ ಮಾಡಿ[...] ಚಂದ್ರಪ್ಪನ ಅರ್ಧ ಗುಂಟೆ ಇನಾಮ್ತಿ ಭೂಮಿಗೆ ಅಪ[...] ಅಣ್ಣನ ಮಕ್ಕಳು ಪಂಚಾಯಿತಿ ಕರೆದರು. ಅದು ಅವರಿ[...] ಸಿಕ್ಕಿತು. ಮನೆಯ ಮೂಲೆಯಲ್ಲಿ ಹುಂಡಿಯಲ್ಲಿನ ಮಡಿ[...] ಒಡೆದರೆ ಅದರಲ್ಲಿ ಸಿಕ್ಕಿದ್ದು ಐವತ್ತು ಎರಡಾಣೆಗ[...] ಮೂವತ್ತು ಆಣೆ, ಮೂರುನೂರು ದಮ್ಮಡಿಗಳು. [...] ಹಣ ತಾನೇ ತೆಗೆದುಕೊಳ್ಳೋದಕ್ಕೆ ಪಂಚಾಯತಿ[...] ಅನುಮತಿ ಸಿಕ್ಕಿತು. ಆದರೆ ನಾಗನ್ನ ಆ ಹಣವ[...] ಇಟ್ಟುಕೊಳ್ಳಲೇ ಇಲ್ಲ, ಚಂದ್ರಪ್ಪನ ತಂಡಕ್ಕೆ ಹಂಚಿ[...] ತಾನು ಒಂದು ಹೊಸ ತಂಡವನ್ನೇ ಕಟ್ಟಿದ. ರಾಯಲಸೀಮ[...] ಕರಾವಳಿ ಹಳ್ಳಿಗಳಲ್ಲಿ ತಮಟೆಯ ಕುಣಿತದಲ್ಲಿ ತನ್ನದ[...] ಒಂದು ಪ್ರತ್ಯೇಕ ಸ್ಥಾನವನ್ನೇ ಪಡೆದುಕೊಂಡ.

ತಮಟೆಯ ನಾಗನ್ನನ ನೇತ್ರ ಶ್ರೇಷ್ಠ ಗಾತ್ರ ಶ್ರೇ[...] ನಾಟ್ಯ ಶ್ರೇಷ್ಠ. ಜತೆಗೆ ಪುರಾಣಗಳ ಎಷ್ಟೋ ರಹಸ್ಯಗ[...]

ಎಲ್ಲನ್ನ ಮೈಮರೆತು ಮಲಗಿದ್ದಾನೆ. ತಮಟೆಯ ನಾಗನ್ನನಿಗೆ ಎಷ್ಟು ಪ್ರಯತ್ನಪಟ್ಟರೂ ನಿದ್ದೆ ಹತ್ತಲೇ ಇಲ್ಲ. ಆ ಹುಡುಗ ಅವನಲ್ಲಿ ಯಾವುದೋ ತಳಮಳವನ್ನ ಹುಟ್ಟಿಸಿದ್ದ. ಮರೆತುಹೋದದ್ದು ಯಾವುದೋ ಮತ್ತೆ ಮುಂದೆ ಬಂದು ನಿಂತಂತಾಗಿದೆ. ಹಾಸಿಗೆಯಿಂದೆದ್ದು ಮನೆಯಿಂದಾಚೆ ಬಂದು ನಿಂತ.

ಆಗಲೇ ಬೆಳ್ಳಿ ಮೂಡುತ್ತಲಿತ್ತು, ಬೆಳಗಿನ ಕೋಳಿ, ಮೈಮುರಿದುಕೊಂಡೆದ್ದು ಎಲ್ಲರನ್ನೂ ಎಬ್ಬಿಸಲು ಕೂಗುತ್ತಾ ಇತ್ತು, ಕೊಟ್ಟಿಗೆಯಲ್ಲಿ ಕರು ಹಾಲಿಗಾಗಿ ಹಗ್ಗವನ್ನ ಜಗ್ಗಾಡ್ತಾ ಇತ್ತು, ನಾಗನ್ನ ಪಕ್ಕಲದಿನ್ನೆಗೆ ಬಂದು ಮೂರು ದಿನಗಳು ಕಳೆದಿದ್ದವು. ಕಳೆದರಾತ್ರಿ ಗಂಗಮ್ಮನ ಜಾತ್ರೆ ಮುಗಿದಿತ್ತು, ಪಟ್ಟಿಯ ಮುಖಂಡನಿಂದ ಬರಬೇಕಾದ ಬಕ್ಷೀಸು ಬಂದರೆ ಅಷ್ಟೇ ಅನಂತಪುರಕ್ಕೆ ಹೊರಡಬಹುದು. ಮಿಕ್ಕವರೆಲ್ಲಾ ಆಗಲೇ ಹೊರಟುಹೋಗಿದ್ದರು.

ಬಕ್ಷೀಸಿಗೋಸ್ಕರ ತಾನು ಉಳಿದುಕೊಂಡಿದ್ದ. ಊರಿಗೆ ಹೋದಾಗ ಎಲ್ಲನ್ನನನ್ನ ಏನು ಮಾಡೋದು ಅನ್ನೋ ಪ್ರಶ್ನೆ ನಾಗನ್ನನ ಮುಂದೆ ಬಂದು ನಿಂತಿತು.

ಕುಣಿದೂ ಕುಣಿದೂ ದಣಿದಿದ್ದ ಎಲ್ಲನ್ನನನ್ನ ಎಬ್ಬಿಸಿ ಮೈಗೆ ಬಿಸಿಬಿಸಿ ನೀರಿನ ಸ್ನಾನ ಮಾಡಿಸಿದ. ಉಡಲು ಬಟ್ಟೆ ಕೊಟ್ಟು ಊಟ ಕೊಟ್ಟರೆ, ಎಂದೂ ಊಟ ಕಾಣದವನಂತೆ ಗಬಗಬನೆ ತಿಂದ. 'ಯಾಕೆ ಓಡಿಸಿತೋ ನಿನ್ನ ಎನ್ನೆಲದಿನ್ನೆ?' ಅಂತ ಕೇಳಿದಾಗ ಎಲ್ಲನ್ನನ ಕಣ್ತುಂಬ ನೀರು. ದೊಡ್ಡದಾಗಿ ಅಳಲು ಶುರುಮಾಡಿದ. ನಂತರ ಅವನು ಹೇಳಿದ್ದು ಅದೇ ಹಳೆಯ ಕಥೆ. ಮಾಮೂಲು ಕಥೆ. ತನ್ನಂಥವರ ಕಥೆ. ಅಷ್ಟೇಕೆ? ತನ್ನ ಕಥೆಗಿಂತಲೂ ಎದೆ ಬಿರಿಯುವ ಕಥೆ. ಎನ್ನೆಲದಿನ್ನೆಯಲ್ಲಿ ನಡೆದ ಅದೇ ಕಥೆ.

ಧರ್ಮಾವರದ ತಮಟೆಯ ನಾಗನ್ನ ಅಂದರೆ ಅನಂತಪುರದ ಸುತ್ತಮುತ್ತಲೇ ಅಲ್ಲ, ಆಂಧ್ರದ ಕರಾವಳಿಯಲ್ಲಿಯೂ ಹೆಸರುವಾಸಿ. ನಾಗನ್ನನ ತಂಡ ಇಲ್ಲದೆ, ಅವರ ತಮಟೆಯಿಲ್ಲದೆ ತನಗೆ ಜಾತ್ರೆಯೇ ಬೇಡವೆಂದು ಗಂಗೆಯೇ ಹೇಳ್ತಾಳೆ. ಶ್ರೀ ಶೈಲದ ಮಲ್ಲನ್ನನನ್ನ (ಮಲ್ಲಿಕಾರ್ಜುನನನ್ನ) ತೋರಿಸ್ತಾ ನಾಗನ್ನನ ಭುಜದ ಮೇಲೆ, ಗುಡುಗಿನ ಸಪ್ಪಳದ ತಮಟೆಯನ್ನ ಮೊದಲ ಬಾರಿ ಹೊರಿಸಿದ್ದು ತಮಟೆಯ ಚಂದ್ರಪ್ಪ.

ಈ ತಮಟೆಯ ಚಂದ್ರಪ್ಪ ಯಾರು? ನಾಗನ್ನನಿಗೂ ಚಂದ್ರಪ್ಪನಿಗೂ ಏನು ಸಂಬಂಧ? ತಮಟೆ ಹೊಡೆಯುವ ತನ್ನ ಎಲ್ಲ ಕೌಶಲವನ್ನೂ ಚಂದ್ರಪ್ಪ ನಾಗನ್ನನಿಗೆ ಧಾರೆ ಎರೆದಿದ್ದ. ಗಂಗಮ್ಮನ ಹಾಡಿನಲ್ಲಿನ ಒಳಹೊರಗುಗಳನ್ನ ತನ್ನ ದನಿಯ ಮೂಲಕ ಹೇಗೆ ಆಚೆಗೆಳೆಯಬೇಕೆಂದೂ

ವ ಸಂವಾದಗಳು ಅವರಿಗೆ ಗಾಢದ ದೂರದ ಮಾತುಗಳು. ಇದು ಅವರ ಬದುಕಿನುದ್ದಕ್ಕೂ ಪಾಲಿಸಿಕೊಂಡು ಬಂದಿದ್ದ ಬಗೆಯಾಗಿತ್ತು.

ರಾಜು ಅವರ ಬಳಿಯಿದ್ದ ಫೋನ್ ಬುಕ್ ಒಂದು ಲ್ಲಿ. ಅದರಲ್ಲಿದ್ದ ಎಷ್ಟೋ ಸಂಪರ್ಕ ಸಂಖ್ಯೆಗಳಿಗೆ ವಾಗಿಯೇ ಫೋನು ಮಾಡಿದ್ದು ಇಲ್ಲವೆನ್ನಿಸುವಷ್ಟು ವೆ. ಅದರೂ ಆ ಮಾಹಿತಿ ಅವರಲ್ಲಿ ಇರಬೇಕೆಂಬುದು ವರ ಇರಾದೆ. ಬೇಕಾದವರಿಗೆ ಆ ಮಾಹಿತಿಯನ್ನು ಸುವ ಮೂಲಕ ಎಲ್ಲರ ನಡುವಣ ಸೇತುವಾಗುತ್ತಿದ್ದರು. ಸೇತುವೆಯ ಮೇಲೆ ಸಾಗಿದವರಿಗೆ ಕೆಲವೊಮ್ಮೆ ಸುವುದೇ ಗುರಿಯಾಗಿರುತ್ತಿತ್ತೇ ಹೊರತು ಈ ಸೇತುವೆ ಮ್ಮನ್ನು ದಾಟಿಸುತ್ತದೆಯೆಂಬ ಪರಿವೆ ಮೂಡದಂತೆ ಜು ಎಚ್ಚರ ವಹಿಸುತ್ತಿದ್ದರು. ರಾಜು ತಾವಾಗಿಯೇ ವರಿಗಾದರೂ ಫೋನ್ ಮಾಡಿ ಹರಟೆಗೆ ಕರೆಯುತ್ತಿದ್ದರೆ ಬ ಬಗೆಗೆ ನನಗೆ ಸಂದೇಹಗಳಿವೆ. ಮಾತು ಮೊದಲು ಡಿದರೆ ಅದನ್ನು ಮುಂದುವರೆಸುವ ಹೊಣೆಯೂ ನ್ನ ಮೇಲಿರುತ್ತದೆಂದು ತಿಳಿದು ಯಾರಾದರೂ ಮಾತಾಡಲಿ ಂದು ಕಾಯ್ದು ಕುಳಿತಿರುತ್ತಿದ್ದರು. ಆ ಮಾತಿಗೆ, ಮಾತು ದಲು ಮಾಡಿದ್ದಕ್ಕೆ ಅವರನ್ನೇ ಹೊಣೆ ಮಾಡುತ್ತಿದ್ದರು. ಗೆ ಹೊಣೆ ಹೊತ್ತವರಲ್ಲಿ ಹಲವರು ಇಂದಿನ ಹೆಸರಾದ ವಿಗಳಾದರು; ಕತೆಗಾರರಾದರು. ಹೀಗೆ ಕವಿಗಳಾಗು ವರಿಗೆ ಅದು ಒಂದು ಹೆಮ್ಮೆ ಎನಿಸುವಂತೆ ಮಾಡಿದರು ಜು. ಹೀಗೆ ತಮ್ಮಿಂದ ಆಕಾರ ತಳೆದವರಲ್ಲಿ ಕೃತಜ್ಞತೆಯ ವ ಸುಳಿಯದಂತೆ ಮಾಡಬೇಕೆಂಬ, ಹಾಗೆ ಸುಳಿದ ವ ಅವರನ್ನು ಚಿಕ್ಕವರನ್ನಾಗಿ ಮಾಡಬಾರದೆಂಬ ಎಚ್ಚರ ಜು ಅವರಲ್ಲಿ ಸದಾ ಮನೆ ಮಾಡಿರುತ್ತಿತ್ತು.

ರಾಜು ಮಾತಾಡಬಹುದಾದಷ್ಟು, ಮಾತಾಡ ಬೇಕಾದಷ್ಟು ಮಾತಾಡಲಿಲ್ಲ. ಹಾಗೆಯೇ ಬರೆಯ ಬೇಕಾಷ್ಟು ಬರೆಯಲಿಲ್ಲ. ಹೀಗೆಂದು ಅವರನ್ನು ಹತ್ತಿರದಿಂದ ಲ್ಲವರು ಹೇಳುವುದುಂಟು. ಅದು ರಾಜೂ ಅವರನ್ನೂ ಗಾಗ ಕಾಡಿಸುತ್ತಿತ್ತೇನೋ ಎಂದು ನನಗೆ ಅನಿಸಿದ್ದುಂಟು. ದಕ್ಕಾಗಿ ಅವರು ಕೊರಗಲಿಲ್ಲ, ತಾನು ಬರೆದದ್ದು ಘನವಾಗಿ ಎಲ್ಲರ ಗಮನ ಸೆಳೆಯಬೇಕೆಂಬ ಹಂಬಲವೂ ಅವರಿಗಿರಲಿಲ್ಲ. ಬರೆಯುವುದು ಅವರ ಒಳಗಿನ ಒತ್ತಡದ ಹೊರಚಾಚಾಗಿರುತ್ತಿತ್ತು. ಅದರಲ್ಲೂ ಅವರ ಬರಹಗಳನ್ನು ಬಲ್ಲವರು ಹೇಳುವಂತೆ ಸಾವು ಅವರನ್ನು ಸದಾ ಕಾಡುತ್ತಿದ್ದ ಸ್ಥಾಯಿ. ಬಲ್ಲ ಬಂಧುಗಳ ಸಾವಿರಲಿ ಚಹರೆಯಿಲ್ಲದ ಭಸನಾಲದ ಗಣಿಯ ಕಾರ್ಮಿಕರ ಸಾವಿರಲಿ ಅದು ನಮ್ಮ ಜೀವನದ ತಿರುಳನ್ನು ಬಗೆದು ತೋರಿಸುವ ಬಿಂದುವೆಂದೇ ಅವರು ತಿಳಿದಂತಿತ್ತು.

ಅವರ ಒಡನಾಟ ಹೆಚ್ಚಿದ್ದವರಿಗೆ ಅವರೇಕೆ ಕೋಪಗೊಳ್ಳುವುದಿಲ್ಲ; ರೇಗುವುದಿಲ್ಲ ಎನ್ನುವ ಕಾತಾಳ ಮೂಡುತ್ತಿದ್ದುದುಂಟು. ಅವರು ಕೋಪಗೊಳ್ಳಲು, ರೇಗಲು ಹಲವು ಸನ್ನಿವೇಶಗಳಿರುತ್ತಿದ್ದವು. ಹಾಗೆಂದು ಅವರು ಸಂತನಂತೆ ಎಲ್ಲವನ್ನೂ ನಿರ್ಮಮವಾಗಿ ನೋಡಿ ಅರಗಿಸಿಕೊಳ್ಳುತ್ತಿದ್ದರೆಂದಲ್ಲ, ತನ್ನ ಒಳಗಿನ ಶಕ್ತಿ ಹೀಗೆ ಕೋಪತಾಪಗಳಲ್ಲಿ ವ್ಯಯವಾಗದಂತೆ ತಡೆಯುತ್ತಿದ್ದರೆಂದು ತೋರುತ್ತದೆ. ಆದರೆ ಹೀಗೆ ತಡೆದ ಕೋಪಗಳು ಅವರ ಶಕ್ತಿಯನ್ನು ಬೇರೊಂದು ರೀತಿಯಲ್ಲಿ ಕುಗ್ಗಿಸುತ್ತಿದ್ದಂತೆ ಈಗ ಅನಿಸುತ್ತಿದೆ. ಮುಖಾಮುಖಿಯಾಗುತ್ತಿದ್ದ ಇಕ್ಕಟ್ಟಿನಿಂದ ಪಾರಾಗಲು ಆಗಾಗ ಶಸ್ತ್ರ ತ್ಯಾಗದಂತಹ ಹಾದಿಯನ್ನು ಅವರು ಹಿಡಿದದ್ದುಂಟು. ಅದು ಅವರು ನಂಬಿದ ಹಾದಿ; ಹಾಕಿದ ಹೆಜ್ಜೆ. ಆದರೆ ಅದು ರಾಜುವಿಗೆ ಸಾಧ್ಯವಿದ್ದ ಇನ್ನೊಂದು ಹಾದಿಯನ್ನು ಮುಚ್ಚುತ್ತಿತ್ತೇನೋ. ಇದು ನನಗೆ ಹೀಗೆಂದು ತೋರಿದರೂ ನನ್ನ ಮಾತನ್ನು ಈಗ ರಾಜು ಕೇಳಿದ್ದರೆ ಅದಕ್ಕೂ ಮುಗುಳ್ನಕ್ಕು ಸುಮ್ಮನಾಗುತ್ತಿದ್ದರೆಂದು ಬಲ್ಲೆ.

ಕ್ರೈಸ್ಟ್ ಕಾಲೇಜು ಕನ್ನಡ ಸಂಘ, ಗಾಂಧಿ ಸಾಹಿತ್ಯ ಸಂಘ, ಅಂಕಣ ಪತ್ರಿಕೆ, ಪಿಪಿ ಬಳಗ, ಇಳಾ ಮುದ್ರಣಾಲಯ, ಮದುವೆ, ಆರತಕ್ಷತೆ, ಗೆಳೆಯರ ಕೂಟ- ಹೀಗೆ ಹಲವು ಹತ್ತುಕಡೆಗಳಲ್ಲಿ ಹಂಚಿಹೋಗುತ್ತಿದ್ದ ಈ ದಶಾವತಾರಿಯಲ್ಲಿ ಹೊಸದನ್ನು ಹುಡುಕುವ ತವಕವಿದ್ದಂತೆ ಹಳತನ್ನು ಕಾಯ್ದುಕೊಳ್ಳುವ ಕಾಳಜಿಯೂ ಇತ್ತು. ನಾವೆಲ್ಲರೂ ಬೇಡವೆಂದದ್ದರಲ್ಲೂ ಏನೋ ನಾಳೆಗೆ ಬೇಕಾದದ್ದನ್ನು ನೀಡುವ ಚೈತನ್ಯವಿದ್ದೀತೇ ಎಂಬುದನ್ನು ಅವರು ಹುಡುಕುತ್ತಿದ್ದರು. ಹಾಗಾಗಿ ಏನು ಮಾಡಿದರೂ ಅದು ವ್ಯರ್ಥವಲ್ಲವೆಂಬುದೇ ಅವರ ಕೆಲಸದ ಹಿಂದಿನ ತರ್ಕ. ಹಾಗಾಗಿ ನಮ್ಮಂತಹ ಹಲವರಿಗೆ ರಾಜುವಿನ ಬಗೆಗೆ ಮೆಚ್ಚುಗೆ ಗೌರವಗಳು ಮೂಡುವುದು ಸಹಜವಾದರೂ ಅವರದ್ದು ನಾವು ಹಿಡಿಯಬಲ್ಲ, ತುಳಿಯಬಲ್ಲ ಆದಿ ಎನಿಸಲಿಲ್ಲ, ಹಾಗೆ ಅನಿಸದಿರುವುದು ನಮ್ಮ ಕೊರೆಗಳೇ ಹೊರತು ಅದು ರಾಜು ಅವರನ್ನು ಎಂದೂ ಹಿಮ್ಮೊಗವಾಗಿಸಲಿಲ್ಲ.

ಹಲವರ ಅಂತರ್ಜಲವಾಗಿದ್ದ ಶ್ರೀನಿವಾಸ ರಾಜು ಅವರಿಗೇ ದಿಟವಾದ ಅಂತರ್ಜಲವಾಗಿದ್ದವರು ನಾನು ಬಲ್ಲಂತೆ ಅವರೊಡನೆ ಹಲವು ದಶಕ ಕೊಂಚ ಹಿಂದೆ ಜತೆಯಾಗಿ ನಡೆದ ಸರಸ್ವತಿ ರಾಜು.. ಈ ಊರಾಡುತ್ತಿದ್ದ ರಾಜು ವಿಜಯದಶಮಿಯಂದು ತಪ್ಪದೆ ಸರಸ್ವತಿಯವರ ಆರತಿ ಮೊಗವೊಡ್ಡಿ ತನ್ನ ವರ್ಷದ ಸಾಧನೆಗಳಿಗೆ ಒಪ್ಪಿಗೆ, ಮೆಚ್ಚುಗೆ ಪಡೆಯುತ್ತಿದ್ದರು. ಇವೆಲ್ಲವೂ ಇನ್ನು ನಮ್ಮ ನೆನಪುಗಳು ಮಾತ್ರ. ನೆನಪುಗಳಿಗೆ ನಮ್ಮನ್ನು ಖಿನ್ನರನ್ನಾಗಿಸುವ ಸಾಮರ್ಥ್ಯವಿದ್ದಂತೆ ನಮ್ಮೊಳಗಿನ ಜೀವನೋತ್ಸಾಹಕ್ಕೆ ನೀರೆರೆಯುವ ಅವಕಾಶಗಳೂ ಇರುತ್ತವೆ. ರಾಜು ಅವರ ನೆನಪುಗಳು ಹೀಗೆ ನಮ್ಮೆಲ್ಲರನ್ನು ತಂಪಾಗಿಸುವ ಹೊಂಗೆ ನೆರಳಾಗಿರಲೆಂಬುದು ಒಂದು ಆಸೆ.

ಈ ಬರಹದ ಕನ್ನಡಿಯಲ್ಲಿ ರಾಜು ಕಾಣಸಿಗುತ್ತಾರೋ ಇಲ್ಲವೋ ನಾನು ಅರಿಯೆ. ಆದರೆ ಇತರರು ಬರೆದದ್ದನ್ನು ಜತನವಾಗಿರಿಸುತ್ತಿದ್ದ ರಾಜು ಇದನ್ನೂ ಹಾಗೆಯೇ ಇರಿಸುತ್ತಿದ್ದರು, ತಮ್ಮ ಜೋಳಿಗೆಯಿಂದ ಹೊರ ತೆಗೆದು ಓದುವವರಿಗೆ ಕೊಡುತ್ತಿದ್ದರೆಂಬುದಂತೂ ಖಂಡಿತ. ಓದಿದ ಯಾರಾದರೂ 'ಇದೇನು ನಿಮ್ಮ ಬಗ್ಗೆ ಬರೆದದ್ದನ್ನೇ ನಮಗೆ ಓದಲು ನೀಡುತ್ತಿದ್ದೀರಲ್ಲ' ಎಂದು ಕೇಳಿದ್ದರೆ ಅದಕ್ಕೂ ಸಾವಿನಲ್ಲೂ ಅವರನ್ನು ಅಗಲದಂತಿದ್ದ ಅವರ ಮುಗುಳ್ನಗೆಯೇ ಉತ್ತರವಾಗಿರುತ್ತೆಂದು ಹೇಳಬಲ್ಲೆ. ■

ಜಿ. ಕಲ್ಯಾಣರಾವ್‌ರವರ

ಅಸ್ಪೃಶ್ಯ ವಸಂತ

6

ಅನುವಾದ: ಪ್ರೊ. ನಗರಗೆರೆ ರಮೇಶ್

ಳಿದಿತ್ತು ನಾಗಣ್ಣನಿಗೆ. ಎಂತೆಂಥಾ ವಿದ್ವಾಂಸರೂ ಅವನ ಮುಂದೆ ಮಾತನಾಡ್ತಿರಲಿಲ್ಲ ಅಂತ ಜನ ಹೇಳಿಕೊಳ್ತಿದ್ದರು. ದು ಹೀಗೇ ನಡೆದುಕೊಂಡು ಹೋಗ್ತಿದ್ದಾಗ ಈ ಎಲ್ಲನ್ನ ಂದು ನಾಗಣ್ಣನಲ್ಲಿ ಕೋಲಾಹಲ ಮೂಡಿಸಿದ. ಅವನು ನ್ನ ಮುಂದೆ ನಿಂತು ನಾನು ಎನ್ನೆಲದಿನ್ನೆಯ ಹೊಲೆಯ ಂದಾಗ ವರ್ತಮಾನ ಒಂದು ಬಾರಿ ಹಿಂದಕ್ಕೆ ಹೊರಳಿತು. ಂದೆ ತನ್ನ ಹೃದಯದಲ್ಲಿ ಮಾಗಿದ ಗಾಯ ಮತ್ತೆ ಸಿಯಾಯಿತು. ನಾಗಣ್ಣ ಹುಟ್ಟಿದ್ದು ಎನ್ನೆಲದಿನ್ನೆಯಲ್ಲೇ. ವನ ಅಪ್ಪ ನಾರಿ ಹುಟ್ಟಿದ್ದು ಅಲ್ಲೇ. ಅಮ್ಮ ಲಚ್ಚಿ ಟ್ಟಿದ್ದೂ ಎನ್ನೆಲದಿನ್ನೆಯಲ್ಲೇನೇ.

ಅಪ್ಪನಿಗೆ ಒಂದು ತುಂಡು ಭೂಮಿಯೂ ರಲಿಲ್ಲ, ಅವನ ಆಸ್ತಿ ಎಂದರೆ ಕೊಡಲಿ ಒಂದೇ. ತ್ತು ಪೆಟ್ಟಿಗೇ ತಾಳೆಯ ಮರವನ್ನ ಉರುಳಿಸ್ತಿದ್ದ. ಆ ತೆ, ಈ ಕಡೆ ಒಂದೊಂದು ಗುರುತು ಮಾಡಿ ಡೆದ ಅಂದರೆ ನೋಡು ೀಡುತ್ತಿದ್ದಂತೆಯೇ ಮರ ರೆಗೆ ಉರುಳ್ತಿತ್ತು, ಅದು ಡಾವಾಗ ಮರ ಹತ್ತಿ ದರ ಎಲೆ ಯುತ್ತಿದ್ದನೋ ಗೊತ್ತೇ ಗ್ತಿರಲಿಲ್ಲ, ತಾಳೆ ಮರದ ೂತೆಯಲ್ಲಿ ಸೆದುಹೋಗಿತ್ತು ಅವನ ಜ. ನಾಗಣ್ಣ ತನ್ನ ಪ್ಪನ ಜೊತೆ ಅಪ್ಪ ತಾಳೆ ರ ಬೀಳಿಸುವುದನ್ನ ೋಡೋಕೆ ಹೋಗ್ತಿದ್ದ. ನ್ನ ತಾಟಿನಿಂಗು ಕೊಟ್ಟರೆ ನು ಅಮ್ಮನ ಜೊತೆ ದ್ದ ಕಟ್ಟ ಅವಳು ಮೂರು ತೋಳೆ ಯುವುದರಲ್ಲಿ ತಾನು ಒಂದು ತೋಳೆಯಲ್ಲಿನ ಭಾಗವನ್ನ ಹೆಬ್ಬೆರಳಿನಿಂದ ಬಗೆದೂ ಬಗೆದೂ ದು ಮುಗಿಸ್ತಿದ್ದ, ಈಗ ಅದನ್ನೆಲ್ಲಾ ನೆನಪಿಸಿಕೊಂಡರೆ ನ್ನ ಮುಖದ ಮೇಲೆ ನಿರುನಗೆ ಮೂಡುತ್ತೆ.

ತಾಟಿನಿಂಗು ತಿಂದಾದ ಮೇಲೆ ಹೊಲದ ಕಡೆ ಹೋಗಿ ದ್ದ ಬಸವನ ಹುಳುಗಳ ಚಿಪ್ಪುಗಳನ್ನೆಲ್ಲಾ ಸೇರಿಸಿ ದು ಹಾರ ಮಾಡಿದ್ದ, ಅವುಗಳನ್ನ ಆಡಿಸಿದರೆ ಗಿಲು ದ ಥರವೇ ಶಬ್ದ ಆಗ್ತಿತ್ತು, ಏಡಿಗಳ ಗೂಡುಗಳ ಆ ಶಬ್ದ ಮಾಡಿದರೆ ಗೂಡಿನೊಳಕ್ಕೆ ನೀರು ಬರ್ತಿದೆ ಹೆದರಿ ಏಡಿಗಳೆಲ್ಲಾ ಆಚೆಗೆ ಬರ್ತಿದ್ದವು. ಹಾಗೆ ದ ಏಡಿಗಳೆಲ್ಲಾ ಅವನ ಬೇಟೆ. ಕೆಲವು ಸಲ ಅವನ್ನು ಪ್ರಾಣಿ ಅಪ್ಪ ಅವನ ಕೈಗೆ ಸಿಕ್ತಿರಲಿಲ್ಲ, ಆದರೂ ಬಿಡ್ತಿರಲಿಲ್ಲ, ಬದುವಿನ ಮೇಲೆ ಓಡುತ್ತಾ ಅವನ್ನೆಲ್ಲಾ ಹಿಡಿದು ಬಿಡ್ತಿದ್ದ. ಮಧ್ಯಾಹ್ನದ ಹೊತ್ತಿಗೆ ಹತ್ತೋ, ಹದಿನೈದೋ ಏಡಿಗಳು ಸಿಕ್ಕಿದರೆ ಅಲ್ಲೇ ಒಣ ತಾಳೆ ಗರಿಗೆ ಬೆಂಕಿ ಹಾಕಿ ಅವುಗಳನ್ನೆಲ್ಲಾ ಸುಡ್ತಿದ್ದ. ಅಪ್ಪ ಕೈಕಾಲು ತೊಳೆದುಕೊಂಡು ಕಾಲುವೆ ದಡಕ್ಕೆ ಬರುವ ಹೊತ್ತಿಗೆ ಅಮ್ಮ ಬುತ್ತಿ ತಂದಿರ್ತಿದ್ದಳು. ನಾಗಣ್ಣ ಹಿಡಿದು ಸುಟ್ಟಿದ್ದ ಏಡಿಗಳೆಲ್ಲಾ ಅವರ ಊಟಕ್ಕೆ ಉಪ್ಪಿನಕಾಯಿ. ಮಗ ಅಂದರೆ ಇವನೇನೇ ಮಗ ಅಂತ ಅವನಪ್ಪ ತನ್ನ ಹೆಂಡತಿಯ ಹತ್ತಿರ ಅವನನ್ನ ಹೊಗಳ್ತಿದ್ದ. 'ಇವನು ಎಲ್ಲಾ ನಮ್ಮಮ್ಮನ ಹಾಗೇನೇ.' ಆದರೆ ನಾಗಣ್ಣನಿಗಂತೂ ತನ್ನ ಅಜ್ಜಿ ಹೇಗಿದ್ದಳೋ ಗೊತ್ತಿರಲಿಲ್ಲ.

ತಾಳೆ ಮರ ಉರುಳಿಸಿ, ಅವುಗಳನ್ನ ಸೀಳುವ ಹೊತ್ತಿಗೆ ಸಂಜೆ ಆಗ್ತಿತ್ತು. ಅಷ್ಟರಲ್ಲಿ ಅಮ್ಮ, ಮಗ ಸೇರಿ ಬಸವನ ಹುಳುಗಳನ್ನೆಲ್ಲಾ ಹಿಡಿದು ಬುತ್ತಿಯ ಬುಟ್ಟಿಯಲ್ಲಿ ತುಂಬುತ್ತಿದ್ದರು. ಒಲೆಗೆ ಅಂತ ತಾಳೆ ಮರದ ತುಂಡುಗಳನ್ನ ಕಟ್ಟುಗಳಾಗಿ ಕಟ್ಟುತ್ತಿದ್ದರು. ಸೀಮೆ ಜಾಲಿ ಪೊದೆಗಳ ಹತ್ತಿರ ಹೋಗಿ ಜಾಲಿ ಚೆಕ್ಕೆಗಳನ್ನ ಕಟ್ಟುಗಳನ್ನಾಗಿ ಕಟ್ಟುತ್ತಿದ್ದರು. ಈ ಚೆಕ್ಕೆಗಳನ್ನ ಒಣಗಿಸಿ ಪೇಟೆ ಸುಬ್ಬಿಗೆ ಕೊಟ್ಟರೆ, ಅವಳು ಥರಾವರಿ ಮೀನುಗಳನ್ನ ತಂದುಕೊಡ್ತಿದ್ದಳು. ತಾನು ಯಾವಾಗಾದರೂ ಜಾಲಿ ಪೊದೆಗಳ ಹತ್ತಿರ ಬಂದಾಗ ಹಿಂದೆ ನಿಂತು, 'ಅಮ್ಮಾ!' ಅಂದರೆ 'ಹಾಗಾದರೆ ನಿನಗೆ ಸುಬ್ಬಿ ಕೊಡೋ ಮೀನು ಬೇಡವೇನೋ' ಅಂದರೆ ಸಾಕು ಸೀಮೆ ಜಾಲಿ ಮುಳ್ಳುಗಳನ್ನ ಮರೆತು ಮುನ್ನುಗ್ತಿದ್ದ.

ನಾಗಣ್ಣನ ತಲೆಯ ಮೇಲೆ, ತಾಳೆ ತುಂಡುಗಳ ಕಟ್ಟುಗಳು, ಲಚ್ಚಿಯ ತಲೆಯ ಮೇಲೆ ಸೀಮೆ ಜಾಲಿ ಕಟ್ಟುಗಳು, ಕೈಯಲ್ಲಿ ಬಸವನ ಹುಳುಗಳು ತುಂಬಿದ್ದ ಬುಟ್ಟಿ, ಹಿಂದೆ ನಾರಿ-ಊರ ದನಗಳು ಸಂಜೆ ಮನೆ ಕಡೆ ಹೊರಡುವಾಗ ಈ ಮೂವರ ಸವಾರಿಯೂ ಮನೆ ಕಡೆ ಹೊರಡ್ತಿತ್ತು, ನದಿ ಹತ್ತಿರ ಬಂದಾಗ ತಲೆಯ ಮೇಲಿನ ಭಾರ ಇಳಿಸಿ ತಾಯಿ, ಮಗ ನೆಲದ ಮೇಲೆ ಕೂತರೆ ತಂದೆ ತಾಳೆ ಮರ ಹತ್ತಿ ಕಳ್ಳಿನ ಮಡಿಕೆಗಳನ್ನ ಇಳಿಸುತ್ತಿದ್ದ. ಐದು ತಾಳೆ ಮರಗಳಲ್ಲಿ ಮೂರಕ್ಕೆ ಕಟ್ಟಿದ್ದ ಮಡಿಕೆಗಳಿಗೆ ಸುಣ್ಣ ಬಳೀತಿದ್ದ, ಇನ್ನೆರಡಕ್ಕೆ ಬಳೀತಿರಲಿಲ್ಲ. ಸುಣ್ಣ ಬಳಿದಿದ್ದ ಮಡಿಕೆಗಳಲ್ಲಿ ತಾಳೆಯ ರಸ ತುಂಬಿದ್ದರೆ, ಇನ್ನುಳಿದ ಎರಡು ಮಡಿಕೆಗಳಲ್ಲಿ ಕಳ್ಳು ತುಂಬಿರುತ್ತಿತ್ತು. ಪ್ರತಿ ದಿನ ಬೆಳಗ್ಗೆ ಅಪ್ಪ ಅಪ್ಪಟ ತಾಳೆ ರಸ, ತಾಳೆ ಕಳ್ಳು ಮನೆಗೆ ತರ್ತಿದ್ದ. ಮನೆಗೆ ತಂದ ಕಳ್ಳು ಮಾರಿ ಬಂದ ಕಾಸಿನಲ್ಲಿ ಕಾಳು ಸಿಕ್ಕಿದಾಗ ಅಮ್ಮನಿಗೆ ಖುಷಿಯೋ ಖುಷಿ.

ತಾಳೆ ರಸ ಬಿಸಿ ಮಾಡಿದರೆ ತಾಳೆ ಪಾಕವಾಗ್ತಿತ್ತು. ಅದನ್ನು ಹಾಗೇ ಕೆಲದಿನ ಬಿಟ್ಟರೆ, ತಾಳೆ ಸಕ್ಕರೆಯ ಗೆಡ್ಡೆಗಳು. ಮಾವಿನ ಕಾಯಿ ಹೋಳುಗಳನ್ನ ಆ ರಸದಲ್ಲಿ ಅದ್ದಿ ತಿಂದರೆ ಅದೆಂಥಾ ರುಚಿ! ಎರಡು ಮೂರು ಗಡಿಗೆಗಳಲ್ಲಿ ತುಂಬಟ್ಟಿದ್ದ ರಸವನ್ನ ಮತ್ತೊಂದು ಸಲ ಕಾಯಿಸಿದರೆ, ಬೆಲ್ಲದ ಪಾಕ ಬರ್ತಿತ್ತು. ಅಷ್ಟೂ ಪಾಕವನ್ನ ಗುಂಡಿಯಲ್ಲಿ ಸುರಿದು ಸ್ವಲ್ಪ ದಿನ ಮುಚ್ಚಿಟ್ಟಿದ್ದರೆ ಅದೇ ಬೆಲ್ಲವಾಗ್ತಿತ್ತು. ಆಗಾಗ ಅಪ್ಪ ಆ ತಾಳೆ ಬೆಲ್ಲ ಮಾರಿ ಸ್ವಲ್ಪ ಹಣ ತರ್ತಿದ್ದ.

ಬೇಸಿಗೆಯಲ್ಲಿ ತಾಳೆ ಹಣ್ಣುಗಳು ಸಾಕಷ್ಟು ಸಿಗ್ತಿದ್ದವು. ಅವುಗಳಲ್ಲಿ ಕೆಲವು ವಿಪರೀತ ಹಣ್ಣಾಗ್ತಿರ್ತಿದ್ದವು. ಹಣ್ಣುಗಳನ್ನ ಸುಟ್ಟುಕೊಂಡು ತಿಂತಿದ್ದರು. ಚನ್ನಾಗಿ ಪಾಕಕ್ಕೆ ಬಂದ ಹಣ್ಣುಗಳನ್ನ ಕುಯ್ದು, ಆ ಹೋಳುಗಳನ್ನ ಬೇಯಿಸಿ ತಿಂದರೆ ಸಿಹಿಯಾಗಿ ರುಚಿಯಾಗಿ ಇರ್ತಿದ್ದವು.

ತಿಂದ ನಂತರ ಉಳಿದ ಬೀಜಗಳನ್ನ ಗುಂಡಿ ತೆಗೆದು ಹೂಳ್ತಿದ್ದರು. ಅವು ಬಿಸಿ ಹತ್ತಿ ಬಿರುಕು ಬಿಟ್ಟ ಮೇಲೆ ತಿಂದರೆ, ಅದೇ ಒಂದು ಮಜ. ಹೀಗೆ ನಾಗಣ್ಣನ ಅಪ್ಪ ಅಮ್ಮನ ಜೀವನದಲ್ಲಿ ತಾಳೆ ಮರಗಳು ಹಾಸುಹೊಕ್ಕಾಗಿ ಬೆಸೆದುಕೊಂಡುಬಿಟ್ಟಿದ್ದವು. ಅವನ ಬಾಲ್ಯವೆಲ್ಲಾ ಎನ್ನೆಲದಿನ್ನೆಯ ತಾಳೆ ಮರಗಳ ನಡುವೆ, ಹೊಳೆ ದಂಡೆಯ ಮೇಲೆ, ಸೀಮೆ ಜಾಲಿ ಕಾಡಿನಲ್ಲಿ ಕಳೆದುಹೋಯಿತು. ಎನ್ನೆಲದಿನ್ನೆ !.... ಈಗ! ಆಗಿನ ಜನ ಈಗ ಎಷ್ಟು ಜನ ಇದ್ದಾರು! ಉಳಿದವರ ಕಣ್ಣಮುಂದೆಯೇ ಉದುರಿಹೋದವರೆಷ್ಟು ಜನ! ಇನ್ನೆಷ್ಟು ಜನ ಮಂಚಕ್ಕಂಟಿಕೊಂಡು ಕೊನೆಯ ಕ್ಷಣಗಳ ಗಣನೆಯಲ್ಲಿ ಮುಳುಗಿದ್ದಾರೋ! ಯಾರಾದರೂ ತನ್ನ ಹಾಗೆ ನಾಟ್ಯ ಕಲಿತು ಅದನ್ನೇ ವೃತ್ತಿ ಮಾಡಿಕೊಂಡಿರಬಹುದು. ಈಗ ಆ ಹಳ್ಳಿ ಹೇಗಿದೆಯೋ! ಇಷ್ಟು ವರ್ಷಗಳ ನಂತರ ಈಗಲೇ ತನ್ನ ಊರು ಮತ್ತೆ ನೆನಪಿನಲ್ಲಿ ಸುಳೀತಾ ಇದೆ.

(ಮುಂದುವರೆಯುತ್ತದೆ)

ಸುಪರ್ ಸುಮ್ಮನೆ



ಮುತ್ತಿನ ಮಹಿಮೆ

ದೂರದ ಊರಿನಲ್ಲಿ ಕೆಲಸ ಮಾಡುತ್ತಿದ್ದ ತಿಮ್ಮ ತನ್ನ ಹೆಂಡತಿ ತಿಮ್ಮಿಗೆ ಪ್ರತಿ ತಿಂಗಳು ಖರ್ಚಿಗಾಗಿ ಹಣ ಕಳಿಸುತ್ತಿದ್ದ. ಒಂದು ತಿಂಗಳು ಅವನಿಗೆ ಕಳಿಸಲಾಗಲಿಲ್ಲ. ಹೆಂಡತಿಗೆ ಒಂದು ಪತ್ರ ಬರೆದ:

"ನನ್ನ ಪ್ರೀತಿಯ ಹೃದಯವೇ,

ಈ ತಿಂಗಳು ನನ್ನ ಸಂಬಳವನ್ನು ಕಳಿಸಲು ಸಾಧ್ಯವಿಲ್ಲ. ಅದರ ಬದಲಿಗೆ 100 ಕಿಸ್‌ಗಳನ್ನು ಕಳಿಸುತ್ತಿರುವೆ. ತಿಂಗಳಿಡೀ ಅವುಗಳನ್ನು ಉಪಯೋಗಿಸುತ್ತಲೇ ಇರು.

ನಿನ್ನ ಪ್ರೀತಿಯ

ತಿಮ್ಮ"

ಕೆಲವು ದಿನಗಳ ನಂತರ ಪತ್ರಕ್ಕೆ ಕೊರಿಯರ್ ಮೂಲಕ ತಿಮ್ಮಿಯ ಪತ್ರವೂ ಬಂತು.

"ನನ್ನ ಪ್ರೀತಿಯ ಹೃದಯವೇ,

ನಿನ್ನ ಪತ್ರದಂತೆ ನೀನು ಕೊಟ್ಟಿರುವ 100 ಮುತ್ತುಗಳನ್ನು ಚೆನ್ನಾಗಿ ಬಳಸಿಕೊಂಡು ತಿಂಗಳನ್ನು ಕಳೆಯಲು ನಿರ್ಧರಿಸಿದ್ದೇನೆ. ಯಾವುದೇ ತೊಂದರೆಯಿಲ್ಲ.

ಹಾಲು ಹಾಕುವ ಹುಡುಗ ತಿಂಗಳ ಹಾಲಿಗಾಗಿ ದುಡ್ಡಿನ ಬದಲು ನನ್ನಿಂದ ಎರಡು ಕಿಸ್‌ಗಳನ್ನು ಪಡೆಯಲು ಒಪ್ಪಿಕೊಂಡಿದ್ದಾನೆ. ಕರೆಂಟ್‌ಬಿಲ್‌ನವನು ಹಣದ ಬದಲಿಗೆ ಏಳು ಮುತ್ತುಗಳನ್ನು ಪಡೆಯಲು ಒಪ್ಪಿಕೊಂಡಿದ್ದಾನೆ. ಮನೆ ಮಾಲಿಕ ಬಾಡಿಗೆ ಬದಲಿಗೆ ಪ್ರತಿ ದಿನ ಬಂದು ಎರಡೋ ಮೂರೋ ಕಿಸ್‌ಗಳನ್ನು ಪಡೆದುಕೊಂಡು ಹೋಗುತ್ತಿದ್ದಾನೆ. ಅವನಿಂದಲೂ ತೊಂದರೆಯೇನಿಲ್ಲ.

ಆದರೆ, ಸೂಪರ್ ಮಾರ್ಕೆಟ್‌ನ ಮಾಲಿಕನದೇ ಸಮಸ್ಯೆ. ಆತ ಕೇವಲ ಕಿಸ್‌ಗಳಿಗೆ ಒಪ್ಪಿಕೊಳ್ಳಲಿಲ್ಲ. ಹಾಗಾಗಿ ಜೊತೆಗೆ ಬೇರೆಯದನ್ನೂ ಕೊಡಬೇಕಾಗಿ ಬಂತು. ತೊಂದರೆಯೇನಿಲ್ಲ ಬಿಡು, ನಾನು ಮ್ಯಾನೇಜ್ ಮಾಡುತ್ತೇನೆ. ಇನ್ನಿತರ ಖರ್ಚುಗಳಿಗಾಗಿ ನಲವತ್ತು ಕಿಸ್‌ಗಳು ಖರ್ಚಾಗಿವೆ. ಎಲ್ಲಾ ಖರ್ಚುಗಳನ್ನು ಕಳೆದ ಮೇಲೂ ಇನ್ನೂ ಸುಮಾರು 35ರಷ್ಟು ಕಿಸ್‌ಗಳು ಉಳಿದುಕೊಂಡಿವೆ. ಅವುಗಳನ್ನು ಉಪಯೋಗಿಸಿಕೊಂಡು ಈ ತಿಂಗಳನ್ನು ಕಳೆಯುವೆ. ಮುಂದಿನ ತಿಂಗಳೂ ನಿನಗೆ ಹಣ ಕಳಿಸಲು ಸಾಧ್ಯವಿಲ್ಲವಿದ್ದರೆ ತೊಂದರೆ ತೆಗೆದುಕೊಳ್ಳಬೇಡ. ನಾನೇ ಮ್ಯಾನೇಜ್ ಮಾಡುತ್ತೇನೆ. ನಿನ್ನ ಆರೋಗ್ಯ ಚೆನ್ನಾಗಿ ನೋಡಿಕೊ.

ಇಂತಿ ನಿನ್ನ ಪ್ರೀತಿಯ

ತಿಮ್ಮಿ"

ಇಡೀ ಪ್ರಪಂಚ ನಿಮ್ಮಿಂದ ಹೊರಹೋಗುತ್ತಿದ್ದಾಗ ಒಳಬರುವವನೇ ನಿಜ ಸ್ನೇಹಿತ - ವಾಲ್ಟರ್ ವಿಂಚೆಲ್

ಪಾಕೀಸ್ತಾನದವು ಪಾಲು ತಗಂಡಾಗ್ಲಿಂದ ವಡದಾಡಿ ಸಾಯ್ತ ಅ…

ಪಾಕೀಸ್ತಾನದ ಬೆನಜೀರ್ ಬುಟ್ಟೋಳನ್ನು ಗುಂಡಿಟ್ಟು ಕೊಂದ ಸುದ್ದಿಯನ್ನು ಲೊಚಗರಿಯುತ್ತ ಕೇಳಿದ ಕಾಳಮಾವ.

"ಅಲ್ಲಾ ಕಂಡ್ಯ, ಒಂದು ಕಲ್ಲು ತಗಂಡು ವಡುದ್ರೆ ಸತ್ತೋಗೊ ಅಂತ ಹೆಂಗಸ ಬಾಂಬಾಕಿ ಸಾಯಿಸ್ತರೆ ಅಂದ್ರೆ ಅವುರಿನ್ನೆಂಥಾ ಕ್ರೂರಿಗಳುಕ ಸಾಬ್ರುಲಾ?" ಎಂದು ಸುಮ್ಮನಾದ. ತುಸು ಹೊತ್ತಿನ ನಂತರ ಜುಮ್ಮಿ,

"ಮದಿವಾಗಿತ್ತೇನ್ಲ ಅವುಳಿಗೆ?" ಎಂದಳು.

"ನೀನಿನ್ನೇನು ಕೇಳ್ತಿಯೇಳು? ಯಾರರ ಸತ್ರ ಅಂದ್ರು ಸಾಕು ಮದಿವಾಗಿತ್ತೆ? ಮಕ್ಕಳೇಟು? ಗಂಡು ಸತ್ತರೆ ಪಾಪ ಅವುಳ ಗತಿಯೇನು? ಅಂತಿ. ಆ ತಬ್ಬಲಿ ಮಕ್ಕಳ ಕತಿಯೇನು? ಅಂತಿ. ಆದೇ ಹೆಡತಿ ಸತ್ತೋನ ಬಗ್ಗೆ ಒಂದು ಮಾತ್ನೂ ಆಡದಿಲ್ಲ ನೀನು" ಎಂದ ಉಗ್ರಿ.

ಬಂಗಾರ ಸೀಮೆಯ
ಕಟ್ಟೆಪುರಾಣ
ಬಿ. ಚಂದ್ರೇಗೌಡ

"ಇಶಿಸಿ, ಇರದ ಕೇಳ್ತಿನಿ ಕಂಡ್ಯ. ಹೆಡತಿ ಸತ್ತರೆ ಮುಂಡೆ ಮಕ್ಕಳು ಇನ್ನೊಂದು ಮದಿವಾಯ್ತರೆ. ಹೆಂಗ್ಸು ಅಂಗೆ ಮಾಡಕ್ಕಾದತೆ?"

"ಮಾಡಿ, ಯಾರು ಬ್ಯಾಡ ಅಂದೊರು?"

"ಆಗಕ್ಕೇನು ಆಗಬವುದು. ಮಕ್ಕಳ ಕತೆ ಯೇಳು? ಕಂಡೋರ ಮನೆ ಬಾಗಿಲಿಗೋಗಿ ನಿಂತಗತ್ತವಲ್ಲಾ, ಆದ ನೋಡಿ ಸುಮ್ಮನಿರಕ್ಕಾದತೆ?"

"ನಿನ್ನ ಮಾತ್ನು ಒಪ್ಪಗಬವುದು ಬುಡು. ಬೆನಜೀರ್‌ಗೆ ಮದಿವಾಗಿ ಮಕ್ಕಳೂ ಇದ್ದೊ ಕಣೆ. ಮಕ್ಕಳೇನು ನಿನ್ನಂಗೆ ಯರಡಿರಲಿಲ್ಲ, ನಾಕೈದು ಮಾಡಿಕಂಡಿದ್ನು."

"ನಾಕೈದಿದ್ವೆ?"

"ಸಾಬರಲವೇನೆ?"

"ಸಾಬರಾದ್ರು ಅವಳು ಪ್ರದ್ಯಾನಿಯಾಗಿದ್ನು ಅಂದೆ?"

"ಪ್ರಧಾನಿಯಾಗಿದ್ನು ಸರಿ, ಆದ್ರೆ ಪ್ರಧಾನಿ ಸ್ಥಾನದಿಂದ ವಜಾ ಮಾಡಿದ ಮ್ಯಾಲೆ ದುಬಾಯ್‌ಗೋಗಿದ್ನಂತೆ. ಅಲ್ಲಿ ಯಾವ ಜವಾಬ್ದಾರಿನೂ ಇಲ್ದಂಗೆ ಆರಾಮಾಗಿದ್ನು. ಆಗ ಮಕ್ಕಳ ಮಾಡಿಕಂಡು ಬಂದಿದ್ನು."

"ಈ ಸಾಬ್ರು ಬರಿ ಹಿಂದೂಗಳ ಕೊಲ್ತರೆ ಅನ್ನ ಕಂಡಿದ್ವೆ. ಸಾಬುರುನೂ ಉಡಾಯಿಸ್ತಾ ಅವುರಲ್ಲ ಹೇಳೂ" ಎಂದ ಸೀರ.

"ತಗಳಪ್ಪ, ಸೀರ ಮಾವನ ಸುಮಾನ ನೋಡ್ಯಂಗದೆ? ಅಲ್ಲಾ ಕಣೊ, ಜೀವ ತಗಿಯಕ್ಕೆ ಅಂತ ಹ್ವಂಟೋರಿಗೆ ಇವರು ನಮ್ಮ ಜಾತಿ, ಇವರು ಅವುರ ಜಾತಿ ಅನ್ನೊ ಬೇದ ಬಾವ ಇರದಿಲ್ಲ, ಬಕ್ರೀದ್ ಹಬ್ಬದ ದಿನವೇ ಐವತ್ತು ಜನ ಸಾಬರನೇ ಕೊಂದ್ರಂತೆ ಆ ಪಾಕೀಸ್ತಾನದ ಸಾಬ್ರು, ಇದಕೇನೇಳ್ತೀ?

"ಸರಿ, ಇವುಳನ್ಯಾಕ್ ಕೊಂದುರ್ಲ?"

"ಇವುಳ ಕೊಂದಿರೋರ್ಯಾರು, ಯಾಕ್ ಕೊಂದ್ರು ಅಂತ ಹೇಳದು ಕಷ್ಟ ಕಣೊ. ಈಗ ಹಾಲಿ ಇರೊ ಮೀಸೆರಪ್ಪನಿಗೂ ಅವುಳಿಗೂ ಆಗದಿಲ್ಲ, ಯಲಕ್ಷನ್ನಲ್ಲಿ ಗೆದ್ದು ಅವ್ಳು ಪ್ರಧಾನಿಯಾದ್ರೆ ನನ್ನ ಗತಿಯೇನು ಅಂತ ಅವುನೇ ಕೊಲ್ಲಿಸಿರಬವುದು. ಇಲ್ಲ, ಈ ಸಾಬ್ರು ತಮ್ಮ ಹೆಂಗಸರಿಗ್ಯಲ್ಲ ಬುರ್ಕಾ ಹಾಕಿ ಕತ್ಲೆಲಿ ಮಡಗಿ ಬುಟ್ಟವುರೆ, ಅಂತ ಹೆಂಗಸು ಅಂಗಿರಬೇಕೆ ವರತು, ಪ್ರಧಾನಿಯಾಗ ಬಾರ್ದು, ಅವುಳ ಕೈಯಿಂದ ಆಳಿಸಿ ಕೊಬಾರ್ದು ಅಂತ ತಲಿಕೆಟ್ಟ ಸಾಬ್ರು ಅವುಳ ಕೊಂದಾಕಿರ ಬವುದು. ಇಷ್ಟೇ ಅಂತ ಹೇಳಕ್ಕಾಗದಿಲ್ಲ ಈಗ."

"ಆದೇನು ದೇಸನ್ಲ, ಆದು ಪಾಲು ತಗಂಡಾಗ್ಲಿಂದ



ಕಡದಾಡಿ ಸಾಯ್ತಯಿದ್ದಲೇ ವರತು ನೆಮ್ಮದಿಯಾಗಿ ಬಾಳಿದ್ನೆ ನೋಡಲಿಲ್ಲ" ಎಂದ ಕಾಳಮಾವ.

"ನಾವೇನು ನೆಮ್ಮದಿಯಾಗಿ ಬಾಳಿದ್ದಿವಾ ದ್ವಡಪ್ಪ?" ಎಂದುಕೊಂಡು ವಾಟಿಸ್ಸೆ ಬಂದ.

"ಯಂಗೋ, ನಾವು ಅವುರಸ್ಟು ಅಧ್ವಾನಾಗಿ ಬದುಕಲಿಲ್ಲ ಬುಡು."

"ಇದೇನು ದ್ವಡಪ್ಪ ಹಿಂಗಂತಿ? ನಾವು ಸ್ವಾಟಂಗಲ್ಲೇ ಗಾಂಧಿ ಮಾತ್ಮನ್ನ ಕೊಂದಿದ್ದೀವಿ."

"ನಾವು ಕೊಲ್ಲಕ್ಕೋಗಿದ್ವೆ? ಯಾವನೊ ತಲಿಕೆಟ್ಟ ನನ್ನ ಮಗ ಕೊಂದ ಅಂತ ಇಡೀ ದೇಸದ ಜನನೆ ದೂರ್ತಿಯಲ್ಲ?"

"ಸರಿ, ಆ ಗಾಂಧಿ ಕೊಂದೋರ … ಅಮ್ಯಾಲಾದನ. ಗಾಂಧಿಮಾತ್ಮ ಸತ್ತ ಮ್ಯಾಲೆ … ಬಂದು ಹಳ್ಳಿ ಪಾಳು ಮಾಡಿ, ಸಿಟ್ಟಿ ಬ್ಯಳಿಸ್ತ … ಕ್ಯಾನ್ಸರ್ ಗ್ಯಡ್ಡೆ ತರ ಆಗ್ಯವೆ. ಅಮ್ಯಾಲೆ ಅವುನ … ಬಂದು ಗರೀಬ ಹಟಾವ್ … ಯಾರ್ ಗರೀಬು ಹೋಯ… ಇಂದ್ರಾಗಾಂಧಿ ಅಂಗಂದಾಗ … ದ್ಯಾವೇಗೌಡ್ರು ಗರೀಬರಾಗಿ… ಈಗಂಗಿದ್ದರಾ? ಆದಿರ್ಲಿ, ಅ… ಆ ಪುಣ್ಯಾತಗಿತ್ತಿ ಬಂದು ಯಮ… ತಂದ್ಲು, ನೂರಾರು ಜನ … ಸಾವುರಾರು ಜನ ಜೈಲಿಗೋ… ತಪ್ಪು ತಿಳಕಂಡು ಯಮರ್ಜೆನ್ಸಿ … ಯಲಕ್ಷನ್ ಮಾಡಿದ್ಲು, ಸೊ… ಆಗ ಈ ಜಂತಾಪಾರ್ಟಿ … ಹೋಗಿ ಗಾಂಧಿಮಾತ್ಮನ ಸಮ… ಎದ್ರಿಗೆ ಪ್ರಮಾಣ ವಚನ ತಗ… ಬಂದು ಜಗಳ ಸುರುಮಾಡಿದ… ಸರಿಯಾಗಿ ಹದಿನೆಂಟು ತಿ… ಜಗಳ ಮಾಡಿದ್ರು. ಜೆ.ಪಿ. … ಇದ್ದಾಗ್ಲೆ ಸತ್ತುವುರೆ ಅಂತ … ಹಬ್ಬಿಸಿ ತಾವು ಸತ್ತೋದ್ರು. ಜನತಾ ಪಕ್ಷ ಪ… ಚಂದಿಯಾಗಕ್ಕೆ ಮೇನ್ ಕಾರಣ ಈ ಅಡ್ವಾನಿ ಟೀಮ…

"ಅದ್ವಾನಿನೂ ಪಾಕೀಸ್ತಾನದಿಂದ್ಲೆ ಬಂದನಂತಲ…" ಎಂದ ಸೀರ.

"ಊ ಚಗಪ್ಪ, ಅವುನ ನೇಟೀವ್ … ಪಾಕೀಸ್ತಾನದಲ್ಲೇ ಆದೆ!"

"ಅಲ್ಲೇ ಇರಬೇಕಾದ್ದೋನು ಕಂಡ್ಯ ಅವುನು…"

"ಅವುನ್ಯಾಕಲ್ಲಿದನೂ, ಮುಂದಿನ ಪ್ರ… ಯಾದನಂತೆ."

ವ್ಯಕ್ತಿ ನಿಂದನೆ ಜನಾಂಗದ ನಿಂದನೆ ಎಂಬ ನೂತನ ಸಿದ್ಧಾಂತವ…

ಛೇ ಸುಮ್ಮನೆ ಹೇಳಬಾರದು. ಏನು ರೋಚಕವಾಗಿತ್ತು ಅಂತೀರಿ ಆ ಸನ್ನಿವೇಶ. ಕಿರುತೆರೆಯ ಕೊಡುಗೆಯನ್ನು ಮೆಚ್ಚಬೇಕು. ತಿರುಗಮುರುಗ ಅದನ್ನೇ ತೋರಿಸಿ ಎಲ್ಲರನ್ನೂ ಹುಚ್ಚೆದ್ದು ಕುಣಿಯುವಂತೆ ಮಾಡಿದ್ದರು. ಸಿನಿಮಾದಲ್ಲಿನ ಡಿಶುಂ ಡಿಶುಂಗಿಂತಲೂ ಮಜಬೂತಾಗಿತ್ತು.ಅಲ್ಲಾದರೆ ಆ ದೃಶ್ಯನಾ ಒಂದೇ ಸಲ ತೋರಿಸೋದು. ಇನ್ನೊಂದು ಸಲ ನೋಡಬೇಕು ಅಂದರೆ ಕಾಸು ಪೀಕಿ ಮತ್ತೆ ಥಿಯೇಟರ್‌ಗೆ ನುಗ್ಗಬೇಕು. ಇಲ್ಲಿ ಹಾಗಲ್ಲ ನೋಡಿ. ಕಾಸೇ ಕೊಡದೆ ಪುಕ್ಕಟೆ ಮನರಂಜನೆ!

ಆದೇನಪ್ಪ ಅಂತಹದ್ದು ಅಂದರೆ ಮೊನ್ನೆ ಮೊನ್ನೆ ಮೈಸೂರಿನಲ್ಲಿ ನಡೆಯಿತಲ್ಲ ಯುವ ಕಾಂಗ್ರೆಸ್‌ನ ಚೈತನ್ಯ ಸಮಾವೇಶ ಆದರಲ್ಲಿ ಮೂಲ ಕಾಂಗ್ರೆಸ್ಸಿನೋರು, ವಲಸೆ ಕಾಂಗ್ರೆಸ್ಸಿನೋರು ಎಷ್ಟು ಪಸಂದಾಗಿ ಹೊಡೆದಾಡಿಕೊಂಡರು ಅಂತೀರಿ, ಅದು ಸಹಜವೇ ಅನ್ನಿ. ಚುನಾವಣೆ ಹತ್ತಿರಕ್ಕೆ ಬರುತ್ತಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದೇ ಬರುತ್ತದೇ ಅನ್ನುವ ಭ್ರಮೆ. ಹಾಗಾದಾಗ ಈ ರಾಜ್ಯನ ನಾವು ಕೊಳ್ಳೇ ಹೊಡೆಯುವ ಬದಲು ಅವರು ಹೊಡೀತಾರಲ್ಲ ಅನ್ನೋ ಆತಂಕ ಎಂತಹ ಕಾಂಗ್ರೆಸ್‌ನವರಿಗಾದರೂ ಕಾಡುವುದು ಅತಿಶಯವಲ್ಲ.

ಕೆಲವರು ಕಾಂಗ್ರೆಸ್ ಅನ್ನುವುದು ಜೋಭದ್ರ ಪಕ್ಷ; ಅದು ಡೆಡ್‌ವುಡ್ ಇದ್ದಹಾಗೆ, ಅದರಿಂದ ಯಾವ ಫಲ ವನ್ನೂ ನಿರೀಕ್ಷಿಸುವಂತಿಲ್ಲ ಎನ್ನುತ್ತಾರೆ. ಎ.ಕೆ. ಸುಬ್ಬಯ್ಯ ಅಂತಹವರು ಇನ್ನೊಂದು ರೀತಿ ವಿಶ್ಲೇಷಿಸುತ್ತಾರೆ. ಖರ್ಗೆ, ಧರ್ಮಸಿಂಗ್ ಅಂತಹವರಿಗೆ ರಾಷ್ಟ್ರೀಯ ನಾಯಕರಾಗಬೇಕೆಂಬ ಇಚ್ಛೆ, ಅದನ್ನು ಹೇಗಪ್ಪ ಸಾಧಿಸುವುದು ಅಂದರೆ... ಸುಬ್ಬಯ್ಯ ಹೇಳುತ್ತಾರೆ....

ವೀರಪ್ಪ ಮೊಯ್ಲಿ ರಾಷ್ಟ್ರೀಯ ನಾಯಕರು. ಆದರೆ ಅವರ ಕ್ಷೇತ್ರ ಬಿಜೆಪಿಯದ್ದು!

ಜನಾರ್ದನ ಪೂಜಾರಿ ರಾಷ್ಟ್ರೀಯ ನಾಯಕರು. ಆದರೆ ಅವರ ಕ್ಷೇತ್ರ ಬಿಜೆಪಿಯದ್ದು!

ಆಸ್ಕರ್ ಫರ್ನಾಂಡಿಸ್ ರಾಷ್ಟ್ರೀಯ ನಾಯಕರು. ಆದರೆ ಅವರ ಕ್ಷೇತ್ರ ಬಿಜೆಪಿಯದ್ದು.

ಈಗ ತಿಳಿಯಿತಲ್ಲ, ರಾಷ್ಟ್ರೀಯ ನಾಯಕನಾಗಲು ಏನು ಮಾಡಬೇಕು ಎಂಬುದು! ಕ್ಷೇತ್ರವನ್ನು ಬಿಜೆಪಿ ಪಾಲು ಮಾಡಿ! ಹಾಗಾಗಿ ಖರ್ಗೆ, ಧರ್ಮಸಿಂಗ್ ರಂತಹವರು ತಮ್ಮ ಕ್ಷೇತ್ರವನ್ನು ಬಿಜೆಪಿ ಮಾಡಿ ರಾಷ್ಟ್ರೀಯ ನಾಯಕರಾಗಬೇಕೆಂದಿದ್ದಾರೆ!

ಇಂತಹ ಆಶಯ ಮೈಸೂರಿನ ನಾಯಕಮಣಿಗಳಿಗೆ ಇದ್ದಿರಲಾರದು.

ಇಲ್ಲಿನ ಸಮಸ್ಯೆಯೇ ಬೇರೆ.

ಯಾರು ಸೀನಿಯರ್ರು? ಇದುವೇ ಪ್ರಶ್ನೆ.

ಮೂಲ ಕಾಂಗ್ರೆಸ್ಸಿಗರು! ಇದು ನಿಸ್ಸಂಶಯ.



ಹಾಗಾದರೆ ಅವರಿಗೆ ಹಾನೇ ಆದ್ಯತೆ?

ಕುರ್ಚಿ ಮೇಜುಗಳು ಇವರಿಗಿಂತಲೂ ಸೀನಿಯರ್ರು. ಅವಕ್ಕೇ ಆದ್ಯತೆ ನೀಡಬಹುದಲ್ಲಾ ಎಂಬುದು ಕುಹಕಿಗಳ ಪ್ರಶ್ನೆ. ಅದು ಒತ್ತಟ್ಟಿಗಿರಲಿ.

ಕಾಂಗ್ರೆಸ್ ಅಂದರೆ ಕಾಂಗ್ರೆಸ್ಸು. ಮೂಲ, ವಲಸೆಗಳ ಪ್ರಶ್ನೆ ಇಲ್ಲ ಅಂತ ವಲಸಿಗರು.

ಇದರ ಇತ್ಯರ್ಥ ಹೇಗೆ?

ಬೆಂಕಿ ಮಹಾದೇವ ಸಿದ್ಧರಾಮಯ್ಯ ನಡುವೆ ಜಟಾಪಟಿ ಮೂಲಕ!

ಇಡೀ ದಿನ ಕಿರುತೆರೆಯ ಮೇಲೆ ವಿಜೃಂಭಿಸಿದ್ದು ಇದೇ!

ಜಟಾಪಟಿಯ ನಂತರ?

ಸಭೆ ಶಾಂತರೀತಿಯಲ್ಲಿ ನಡೆಯಿತು. ನಾಯಕರು ಈ ಕುರಿತು ವಿವರಣೆ ನೀಡಿದರು. ಇತ್ತ ಯಾವುವೂ ಕಿರುತೆರೆಯಲ್ಲಿ ಕಾಣಿಸಲೇ ಇಲ್ಲ.

ಸಹಜವೇ. ಯುದ್ಧ ಪರ್ವದ ರೋಚಕತೆ ಶಾಂತಿಪರ್ವದಲ್ಲಿ ಇರಲ್ಲ! ಆದನ್ನ ತೋರಿಸುತ್ತಾ ಕುಳಿತರೆ ಟಿಆರ್‌ಪಿ ಏರಲ್ಲ!

ಇದನ್ನು ನೋಡಿ ಸಿಡಿದೆದ್ದಿತು ಒಕ್ಕಲಿಗ ಯುವ ಜನತೆ!

ಟಿವಿ ಚಾನೆಲ್ ವಿರುದ್ಧವೇ?

ಅಲ್ಲ ಸಿದ್ಧರಾಮಯ್ಯ ವಿರುದ್ಧ!

ಸುಟ್ಟಿತು ಅವರ ಪ್ರತಿಕೃತಿ!

ಸಿದ್ಧರಾಮಯ್ಯ-ಮಹದೇವ್ ನಡುವಿನ ಜಟಾಪಟ ಇದು. ಒಕ್ಕಲಿಗರಿಗೇಕೆ ಆಕ್ರೋಶ?

ಈರ್ವರ ಜಗಳದ ನಡುವೆ ಬಂದ ವಾಸು ಎಂಬ ನಾಯಕನನ್ನು ಸಿದ್ಧರಾಮಯ್ಯ ತಳ್ಳಿ ಬೀಳಿಸಿದರು! ವಾಸು ಒಕ್ಕಲಿಗ!

ಮಾತಿನ ಭರದಲ್ಲಿ ಒಬ್ಬರನ್ನು ತಳ್ಳಿದರೆ ಇಡೀ ಜನಾಂಗವನ್ನೇ ತಳ್ಳಿದಂತಾಯಿತೆ?

ಹೌದು!

ಸಿದ್ಧರಾಮಯ್ಯ ವಿರೋಧಿ ಒಕ್ಕಲಿಗ ಬಣ ಹಂಡೆ ಹಾಲು ಕುಡಿದಿರಬೇಕು!

ಭಾಜಪ ಅಧಿಕಾರದ ಕನಸು ಕಾಣುತ್ತಿರುವುದೇ ವೀರಶೈವರ ಮತದ ಆಧಾರದ ಮೇಲೆ. ಲಿಂಗಾಯತರು ಕಾಂಗ್ರೆಸ್ ಆದರೆ ಕಳಚಿ ಬೀಳದೆ ಅವರ ಆಶಾಗೋಪುರ?

ಸಿಡಿದೆದ್ದರು ವೀರಶೈವರು-ಮಹದೇವ್ ಮೇಲಿನ ಹಲ್ಲೆಗಾಗಿ!

ವೀರಶೈವರಿಗೆ ಆದ ಅಪಮಾನ!

ಇದನ್ನು ನಿವಾರಿಸುವುದು ಹೇಗೆ?

ಸಿದ್ಧರಾಮಯ್ಯ ಜನಾಂಗದ ಕ್ಷಮೆ ಕೋರಲಿ!

ಅಲ್ಲಿಯವರೆಗೆ?

ಪ್ರತಿಭಟನೆ ನಿಲ್ಲದು!

ಹಲ್ಲೆ ನಡೆಯಿತು ಎಂದೇ ಭಾವಿಸೋಣ. ವ್ಯಕ್ತಿ ಮೇ… ಹಲ್ಲೆ ಜನಾಂಗದ ಮೇಲಿನ ಹಲ್ಲೆ ಹೇಗಾಯಿತು?

ಸಿದ್ಧರಾಮಯ್ಯ ಲಿಂಗಾಯಿತರ ವಿರೋಧಿ!

ಅಹಿಂದ ಬಣ ಆರ್ಭಟಿಸಿತು-ನಿಲ್ಲಿಸಿ ಈ ಪ್ರತಿಭ… ನಿಲ್ಲಿಸದಿದ್ದರೆ?

ನಿಮ್ಮ ವಿರುದ್ಧ ನಮ್ಮ ಪ್ರತಿಭಟನೆ!

ಜಾತಿಗಳು ಧ್ರುವೀಕರಣಗೊಳ್ಳುತ್ತಿವೆ!

ಎಚ್.ಎಲ್. ಕೇಶವಮೂ…

ಕೋಮುವಾದಿ ಶಕ್ತಿಗಳು ಗಹಗಹಿಸುತ್ತಿವೆ!

ಬೆರಳೆಣಿಕೆಯ ಪುಢಾರಿಗಳೇ ಜನಾಂ… ವಕ್ತಾರರಾಗಿದ್ದಾರೆ!

ಚುನಾವಣೆಯ ಸಮಯದಲ್ಲಿ ಎದ್ದೆದ್ದು ಕುಣಿಯು… ಅದರ ವಿರಾಟ್ ಕುರೂಪ!

ಶ್ರೀರಾಮ ಅನಾಥರಕ್ಷಕ ಅಂತಾರೆ.

ಪ್ರೀತಿ ಏಕೆ ಭೂಮಿ ಮೇಲಿದೆ ಎನ್ನುವ ಸಿನಿ… ಅದರಲ್ಲೊಂದು ಹಾಡು.

'ರಾಮ ಸುಳ್ಳು ಸೀತೇ ಸುಳ್ಳು
ರಾಮಾಯಣವೇ ಸುಳ್ಳು'

ಹೀಗೆ ಮುಂದುವರೆಯುತ್ತದೆಯಂತೆ.

ಇಂತಹ ಹಾಡುಗಳೇ ಜನಪ್ರಿಯ … ಅನಾಥರಕ್ಷಕನೇ ಅನಾಥನಾಗುವನಲ್ಲಾ... ಕಿಡಿಕಾ…

ಸ್ನೇಹಿತರು ಸಂತೋಷ ಮತ್ತು ದುಃಖ ಎರಡಕ್ಕೂ ಬೇಕು - ಸ್ಯಾಮುಯಲ್ ಪ್ಯಾಟರ್ಸನ್

"ಈ ಕಾಂಗ್ರೆಸ್ ನನಮಕ್ಳು ಆದನು ನೋಡಿದ್ರೆ ...ಯನ್ನೆ ಬಿಡು" ಎಂದ ಉಗ್ಗಿ.

"ಅದ್ಯಾಕ್ಲ, ಕಾಂಗ್ರೆಸ್‌ನವು ಅಂಗೆ ಜಗಳಾಡ್ತವೆ?" ...ಎಂದ ಸೀಸ.

"ಅವುರ ಪಾರ್ಟಿ ಸೋತು ಸುಮ್ಮನಾಗೋವರಿಗೂ ...ಂಗೆಯೆ ಚಗಪ್ಪ ಅವು. ಅಲ್ಲಿ ಮೂಲನಿವಾಸಿಗಳು, ...ಲಸೆ ನಿವಾಸಿಗಳ ನಡುವೆ ಪೈಟ್ ಸುರುವಾಗ್ಯದೆ. ...ದ್ನೆ ಮೈಸೂರಲ್ಲಿ ಸಿದರಾಮಯ್ಯ, ಮಾದೇವನಿಗೂ, ...ವಾಸುನಿಗೂ ಗೂಸು ಕೊಟ್ನನಂತೆ."

"ಅದ್ಯಾಕ್ಲದದಾ?" ಎಂದಳು ಜುಮ್ಮಿ.

"ಮಾದೇವ ರೇವಣ್ಣನಂಗೆ ಕಂಡನಂತೆ, ವಾಸು ಆ ...ಜೆ.ಟಿ. ದ್ಯಾವೇಗೌಡನಂಗೆ ಕಂಡನಂತೆ. ಅದ್ಕೆ ತಗದು ...ಮುರದು ಬುಟ್ಯಾ, ಬಿದ್ರುತ್ತಗೆ."

"ಅವುಂದೊಳ್ಳೆ, ಪಜೀತ್ಯಾಯ್ತಲ್ಲಾ. ಇಲ್ಲಿದ್ರೆ ...ದ್ಯಾವೇಗೌಡನ ಮಕ್ಕಳ ಕಾಟ, ಅಲ್ಲಿಗೋದ್ರೆ ಅವುರ ...ಕಾಟ."

"ಕಾಂಗ್ರೆಸಿನವುಕೆ ತಲಿದ್ರೆ, ತಂದ್ರೆ, ಸಿದರಾಮಯ್ಯ ...ನಂಥೋರ ಮಂದ ಬುಟಗಂಡು, ಆ ಪ್ರಕಾಸನಂಥೋರ ...ಸೇರಿಸಿಗಂಡು ಹೋಗಬೇಕು ಕಂಡ್ಯ. ಅದು ಬುಟ್ಟು ... ಧರಮುಸಿಂಗ, ಕರಗೆ ನಂಗಂಡವುಲ್ಲ, ಇದಕೇನೇಳನಾ ...ಂತಿನಿ?"

"ನಿಜ ಚಗಪ್ಪ, ಖರ್ಗೆ ದ್ರುಂಸಿಂಗ್ ಆಗ್ನೆ ...ಯಿಗೂಡಿ ಹೋಗಿರೊ ಎತ್ತು, ವಬ್ಬ ಕುಂಟತನೆ, ...ನ್ನೊಬ್ಬ ತನ್ನ ತಿಗ ತಾನೆ ತ್ವಳಕಳಕ್ಕಾಗದೆ ಮಿಸಿನ್ ...ಮುಡಿಕಂಡವುನೆ."

"ಯಾರ್ದ್ನ ಮಿಷಿನ್ ಮಡಿಕಂಡಿರನೂ?"

"ದ್ರುಂಸಿಂಗ್ ಕಣಕ್ಕ. ಅವುನಿಗೆಲ್ಲಿ ತಿಗ ತ್ವಳಕಳಕ್ಕೆ ... ಯುಟಗತದೆ?" ಎಂದು ವಾಟಿಸ್ಸೆ ಹೇಳುವಾಗ ...ಜುಮ್ಮಿ ಬಿದ್ದು ಬಿದ್ದು ನಕ್ಕು,

"ನೀನೇ ಹೋಗಿ ತ್ವಳಿಕೊಡ್ತ, ವಳ್ಳೆ ಸಂಬ್ಳ ಕೊಡ್ತನೆ!"

"ಅಂಗರ್ಯಾವುದ್ಕು ಮಾತಾಡಿರಕ್ಕ, ಐ ಯಾಂ ರಡಿ ...ಟು ಗೊ!!"

■

...ರಾಮಸೇನೆ. ಅಶ್ಲಿನಿಸ್ಬುಡಿಯೋ ಮೇಲೆಯೇ ಮಾಡಿತು ...ಳಿ... ನೀಡಿದ ಕಾರಣ- ಬಹುಜನರ ಮನಸ್ಸಿಗೆ ...ನೋವಾಗಿದೆ!

ದಾಳಿ ನಡೆಸಿದವರೆಷ್ಟು ಮಂದಿ?

ಹದಿನೈದು!

ಇವರು ಹಿಂದೂಗಳ ವಕ್ತಾರರು!

ರಾಮಾಯಣದಲ್ಲಿ ಬರುವ ಯಾವ ಪಾತ್ರವೂ ...ಐತಿಹಾಸಿಕವಲ್ಲ ಎಂದು ಭಾರತದ ಪುರಾತತ್ವ ಇಲಾಖೆಯೇ ...ಸ್ಪಷ್ಟಪಡಿಸಿದೆ. ಆದರೆ ರಾಮ ಇದ್ದ ಎನ್ನುವುದು ನಂಬಿಕೆ. ... ನಂಬಿಕೆಯ ಮನಸ್ಸಿಗೆ ನೋವಾಗಿದೆಯಂತೆ! ನಂಬಿಕೆ ...ಮುಖ್ಯವೋ ಸತ್ಯ ಮುಖ್ಯವೋ?

ಇರಲಿ, ಈ ಹದಿನೈದು ಮಂದಿಗೆ ಶ್ರೀರಾಮ ಪರವಾಗಿ ...ಪ್ರತಿಭಟಿಸಲು ಅನುಮತಿ ನೀಡಿದವರಾರು? ಲೆಟರ್‌ಹೆಡ್ ...ಇದ್ದಾಕ್ಷಣ ಅವರು ಹಿಂದೂಗಳ ಮಾನ ರಕ್ಷಕರೆ? ಇವರೇನು ...ಂದೂ ಹೆಸರಿನಲ್ಲಿರುವ ವಸೂಲಿ ಗೂಂಡಾಗಳೇ?

* * *

ಜೆ.ಟಿ.ದೇವೇಗೌಡ ಗೊತ್ತಿರಬೇಕಲ್ಲ... ಸಿದ್ದರಾಮಯ್ಯ ...ಕುಮಾರಸ್ವಾಮಿಗೆ ಹೀಗೇ ಯಾರು ಯಾರಿಗೋ ...ಬಾಡಿಗಾರ್ಡ್ ಆಗಿದ್ದರು. ಈಗ ಯಡಿಯೂರಪ್ಪನವರಿಗೆ ...ಬಾಡಿಗಾರ್ಡ್ ಆಗಿದ್ದಾರಲ್ಲ ಅವರು ಈಗ ಬಿಜೆಪಿ ...ಯಲ್ಲಿದ್ದಾರೆ.

ಗೌಡರು ಬಿಜೆಪಿ ಸೇರಿದ್ದ ದಿವಸ. ಮೈಸೂರಿನಲ್ಲಿ ...ಅದ್ದೂರಿ ಸಮಾರಂಭ. ಯಶವಂತ ಸಿನ್ಹಾ ಗೌಡರನ್ನು ...Grand Truck ಅಂದರು. ಉಬ್ಬಿಹೋದರು ಗೌಡರು. ...ಮ್ಮ ಭಾಷಣದಲ್ಲಿ ದೇವೇಗೌಡರ ವಂಶ ಜಾಲಾಡಿದ್ದು ...ಆಗಿರಲಿ. ತಾವು ಭಾರತೀಯ ಜನತಾಪಕ್ಷದ ಸಿದ್ಧಾಂತ ...ತತ್ವಗಳ ಮೇಲೆ ನಂಬಿಕೆ ಇಟ್ಟು ಆ ಪಕ್ಷವನ್ನು ...ಸೇರುತ್ತಿರುವುದಾಗಿ ಸಾರಿದರು.

ಒಳ್ಳೆಯದು. ಆಮೇಲೆ ಟಿವಿ ಸಂದರ್ಶನ.

ಇದುವರೆಗೂ ಭಾಜಪವನ್ನು ಕೋಮುವಾದಿ ಪಕ್ಷ ...ಎಂದು ಹೀಯಾಳಿಸುತ್ತಿದ್ದ ನೀವು ಆ ಪಕ್ಷವನ್ನು ಸೇರಿದ್ದು ...ಹೇಗೆ? ಒಂದು ಪ್ರಶ್ನೆ ಬಂತು.

'ನೋಡ್ರೀ ಆ ಪಕ್ಷ ಈ ಪಕ್ಷ ಅಂತ ಏನೂ ಅಲ್ಲ, ...ಎಲ್ಲ ರಾಜಕೀಯ ಪಕ್ಷಗಳೂ ಒಂದೇ. ಕಾಂಗ್ರೆಸ್, ದಳ, ...ಭಾಜಪಗಳೆಲ್ಲ ಒಂದೇ. ಯಾವುದರಲ್ಲಿದ್ದೇರಿ ಇದಕ್ಕು ...ತತ್ವ, ಸಿದ್ಧಾಂತ ಅಂದರು ಗೌಡರು!

ಈ ಮಾತು ಕೇಳಿ ಉಸಿರಲ್ಲಿ ನಾಚಿಕೊಂಡಿದ್ದು ...ಯಾರಿಗೂ ಕಾಣಿಸಲಿಲ್ಲವಂತೆ!

■



ಚೀತ್ಕಾರ

ಮೊನ್ನೆ ತೀರಿಕೊಂಡ ಲಾರೆನ್ಸ್ ಒಲಿವಿಯರ್ ಎಂಬ ನಟನ ಬಗ್ಗೆ ಕೆಲವರು ಒಂದು ಘಟನೆ ನೆನೆಸಿಕೊಳ್ಳುತ್ತಾರೆ-ಈತ ಅಭಿನಯಿಸಿದ 'ದೊರೆ ಈಡಿಪಸ್'

ಮರೆಯುವ ಮುನ್ನ



■ ಪಿ. ಲಂಕೇಶ್ -ಜುಲೈ 30, 1989

ನಾಟಕದಿಂದ. ಈಡಿಪಸ್ ನಾಟಕ ಬೆಳೆಯುವ ರೀತಿ ನಿಮಗೆ ಗೊತ್ತಿರಬಹುದು. ನಾಟಕ ಮುಂದುವರಿದಂತೆಲ್ಲ ಭೂತಕಾಲವನ್ನು ಶೋಧಿಸುತ್ತಾ ಹಿಂದಹಿಂದಕ್ಕೆ ನಮ್ಮನ್ನು ಕರೆದೊಯ್ಯುತ್ತದೆ. ಡೆಲ್ಫಿಯ ಭವಿಷ್ಯವಾಣಿಯ ಪ್ರಕಾರ ಈಡಿಪಸ್ ಬೆಳೆದ ಮೇಲೆ ತನ್ನ ತಂದೆಯನ್ನು ಕೊಂದು ತಾಯಿಯನ್ನು ಮದುವೆಯಾಗುತ್ತಾನೆ. ಈ ಭವಿಷ್ಯವಾಣಿಯನ್ನು ಸುಳ್ಳು ಮಾಡುವುದಕ್ಕಾಗಿಯೇ ಈಡಿಪಸ್ ಮಗುವಾಗಿದ್ದಾಗಲೆ ಅವನನ್ನು ದೂರಸಾಗಿಸಿರುತ್ತಾರೆ. ಭವಿಷ್ಯವಾಣಿ ಈಡಿಪಸ್‌ಗೆ ಗೊತ್ತಿಲ್ಲ.

ಆದರೆ ಘಟನಾವಳಿಗಳು ತಳಕುಹಾಕಿಕೊಂಡು ಭವಿಷ್ಯವಾಣಿ ನಿಜವಾಗಿಯೇ ಆಗುತ್ತದೆ. ನಾಟಕದ ಕೇಂದ್ರವೇ ಈಡಿಪಸ್‌ಗೆ ಈ ವಿಷಯ ಗೊತ್ತಾಗುವುದು. ಲಾರೆನ್ಸ್ ಒಲಿವಿಯರ್ ಈ ಈಡಿಪಸ್ ಪಾತ್ರದಲ್ಲಿ ಅಭಿನಯಿಸುವಾಗ ತನ್ನ ಹೆಂಡತಿ ತನ್ನ ತಾಯಿಯೆಂದು ಗೊತ್ತಾದೊಡನೆ ಈ ಘೋರ ಅರಿವನ್ನು ವ್ಯಕ್ತಪಡಿಸಲು ಕಗ್ಗತ್ತಲಿಗೆ ಚೀರಿಕೊಳ್ಳುತ್ತಾನೆ.

ಇಲ್ಲಿ ಮಾತಿಲ್ಲ, ಅಳುವಿಲ್ಲ-ಕೇವಲ ಚೀತ್ಕಾರ. ಅದೆಂಥ ಚೀತ್ಕಾರವೆಂದರೆ

ಮನುಕುಲ ತನ್ನ ಮೂಲಭೂತ ಪಾಪ, ನೋವು, ಭಯವನ್ನೆಲ್ಲ ಒಮ್ಮೆಗೇ ವ್ಯಕ್ತಪಡಿಸುವ ಮೊರೆ. ಸಾಫೋಕ್ಲಿಸ್ ಹೀಗೆ ಚೀರಬೇಕೆಂದು ಬರೆದಿಲ್ಲ, ವಿಮರ್ಶಕರು ಸೂಚಿಸಿಲ್ಲ. ಆದರೆ ನಟ ಈ ಮಹೋನ್ನತ ನಾಟಕಕ್ಕೆ ತರುವ ಹೊಸ ಆಯಾಮ, ಮಾನವನ ಕೋಟ್ಯಂತರ ವರ್ಷಗಳ ಹೆಪ್ಪುಗಟ್ಟಿದ ವಿಪರ್ಯಾಸವನ್ನು ಹೊಮ್ಮಿಸುವ ಚೀತ್ಕಾರ.

ಎಲ್ಲ ಕಲೆಯಂತೆಯೇ ನಟನೆ ವಿಚಿತ್ರವಾದದ್ದು. ಒಬ್ಬ ರಂಗದ ಮೇಲೆ ನಡೆಯುತ್ತಿದ್ದಂತೆಯೇ ಪತ್ತೆಹಚ್ಚಬಹುದು- ನಟನೋ ಅಲ್ಲವೋ ಎಂಬುದನ್ನು. ಹೇಗೆಂದರೆ, ಒಬ್ಬನ ಪದ್ಯದ ಒಂದು ಸಾಲು ನೋಡಿದರೆ ಸಾಕು, ಕವಿಯೋ ಅಲ್ಲವೋ ಎಂಬುದು ಥಟ್ಟನೆ ತಟ್ಟುತ್ತದೆ. ಎತ್ತಣ ಮಾಮರ, ಎತ್ತಣ ಕೋಗಿಲೆ?

ನಮ್ಮೆಲ್ಲರ ಭಾವುಕ ತಿಳಿವಳಿಕೆಗೆ ಕೆಲವು ಸಲ ಪೆಟ್ಟು ಬೀಳುತ್ತದೆ. ಬಯಲು ಸೀಮೆಯ ಸೆಖೆ, ಧೂಳು, ಜನಜಂಗುಳಿಯಲ್ಲಿ ಕೂತು ಮಲೆನಾಡಿನ ಬಗ್ಗೆ ಯೋಚಿಸುವವರು ಮಲೆನಾಡಿಗರ ಬಗ್ಗೆ ಅಸೂಯೆ ಪಡುತ್ತಾರೆ. ಮಲೆನಾಡಿನ ಕಾರಂಜಿಗಳು, ಕೊಳ, ನದಿಗಳು, ದಟ್ಟಕಾಡು, ಜಲಪಾತ, ತಂಪೆರೆವ ತೋಪುಗಳು ಸಹಜವಾಗಿಯೇ ಮನೋಹರವಾದವು. ಆದರೆ ಮಲೆನಾಡಿನಲ್ಲಿ ಜನಸಂಖ್ಯೆ ಕಡಿಮೆ. ಸಾವಿರಾರು ಜನರುಳ್ಳ ಹಳ್ಳಿಗಳೇ ಕಡಿಮೆ. ಒಮ್ಮೆ ಮಳೆ ಶುರುವಾದರೆ ಮನುಷ್ಯ ಬಂಧಿಯಾಗುತ್ತಾನೆ ಹಾಗೆಯೇ ಅಂಕಿಅಂಶಗಳ ಪ್ರಕಾರ ಮಲೆನಾಡಿನಲ್ಲಿ ಆತ್ಮಹತ್ಯೆ ಹೆಚ್ಚು, ಹುಚ್ಚರ ಸಂಖ್ಯೆ ಕೂಡ. ಶಿವಮೊಗ್ಗೆ ಜಿಲ್ಲೆ ಹೆಚ್ಚು ಜನ ಕವಿಗಳನ್ನು ಪಡೆದಿದೆ.

ತಮಾಷೆಯಲ್ಲ! ಇದಕ್ಕೇನೆನ್ನುತ್ತೀರಿ- ಜಗತ್ತಿನ ಮುಕುಟದಂಥ ಜಾಗ ಸ್ವಿಟ್ಜರ್‌ಲೆಂಡ್. ಕಾಡು, ಮಂಜು, ನದಿ, ಸರೋವರಗಳ ರೂಪಸಿ ಈ ದೇಶ. ಇಲ್ಲಿ ಇಡೀ ಜಗತ್ತಿನಲ್ಲಿ ಅತ್ಯಂತ ಹೆಚ್ಚು ಏಯ್ಡ್ಸ್‌ರೋಗಿಗಳಿದ್ದಾರೆ. ಇಡೀ ಜಗತ್ತಿನಲ್ಲೇ ನೆಮ್ಮದಿಯ ದೇಶಗಳಲ್ಲೊಂದಾದ ಫಿನ್‌ಲೆಂಡ್ ಬಗ್ಗೆ ನೀವು ಕೇಳಿರಬಹುದು. ಇದರ ಹೆಲ್ಸಿಂಕಿ ಎಂಬ ರಾಜಧಾನಿ ಸಸ್ಯ ಸಂಪತ್ತಿನ ನಡುವೆ ಇದೆ; ಮುಕ್ಕಾಲು ಭಾಗಕ್ಕಿಂತ ಹೆಚ್ಚು ಕಾಡು, ಸರೋವರಗಳನ್ನುಳ್ಳ ಫಿನ್‌ಲೆಂಡ್ ಕೋಟ್ಯಂತರ ಡಾಲರ್ ಗಳಿಸುವುದು ಅರಣ್ಯ ವಸ್ತುಗಳಿಂದ. ರಷ್ಯಾ ಸ್ವೀಡನ್‌ಗಳನ್ನು ನೆರೆ ರಾಷ್ಟ್ರಗಳನ್ನಾಗಿ ಪಡೆದ ಈ ಸುಂದರ ಫಿನ್‌ಲೆಂಡ್ ಜಗತ್ತಿನಲ್ಲಿಯೇ ಹೆಚ್ಚು ಆತ್ಮಹತ್ಯೆಯ ದಾಖಲೆ ಪಡೆದಿದೆ.





"ಸಂತೆಯಲ್ಲಿ ಸೀರೆ..."

ಬಾದಾಮಿಯ ವಸಂತ ಕುಲಕರ್ಣಿ ಎಂಬುವರು ತಮ್ಮ ಕಡೆಯ 24 ಗಾದೆಗಳನ್ನು ಸಂಗ್ರಹಿಸಿ ಕಳಿಸಿದ್ದಾರೆ.

ಗಾದೆ ಹುಟ್ಟುವುದು ಬದುಕಿನ ನಡುವೆ, ಮಾತುಗಳನ್ನು ಬರೆಯಲು ಹೋಗದೆ ಆಡುವವರ ನಡುವೆ; ಅದು ಜನಸಾಮಾನ್ಯನ ಶಾರ್ಟ್‌ಹ್ಯಾಂಡ್. ಭಾಷಣ, ವಾದಕ್ಕೆ ಬದಲು ಗತ್ತಿನಿಂದ ಒತ್ತಾಯವಾಗಿ ಮಾತಾಡಲು ಗಾದೆಗಳು ನೆರವಾಗುತ್ತವೆ. ನಮ್ಮಲ್ಲಿಯ ಪಟ್ಟಣದ ಸಾಹಿತಿಗಳನೇಕರಿಗೆ ಗಾದೆಗಳೇ ಗೊತ್ತಿರುವುದಿಲ್ಲ, ಆದರಿಂದಾಗಿಯೇ ಅವರ ಬರಹದಲ್ಲಿ ಗಾದೆಗಳು ಇಲ್ಲದಿರುವುದು ಮಾತ್ರವಲ್ಲ, 'ಗಾದೆತನ' ಅವರ ಶೈಲಿಯಲ್ಲಿರುವುದಿಲ್ಲ. ಒಂದು ಭಾಷೆಯ ಸೌಭಾಗ್ಯ ಅದರ ನುಡಿಕಟ್ಟಿನಲ್ಲಿ, ಗಾದೆಯಲ್ಲಿ, ಕಾವ್ಯದಲ್ಲಿ, ಜಾಣರ ಮಾತಿನಲ್ಲಿ ಇರುತ್ತದೆ. ಇನ್ನೊಂದು ವಿಶೇಷ, ದಿನನಿತ್ಯದ ವಿಷಯ ಹೇಳಲು ಗ್ರಾಮಸ್ಥರು ಲೈಂಗಿಕ ಮಾತು ಬಳಸುತ್ತಾರೆ. ಇದರ ಉದ್ದೇಶ ಲೈಂಗಿಕವಲ್ಲ, ಅನ್ನಿಸಿದ್ದನ್ನು ಚೆನ್ನಾಗಿ ಹೇಳುವುದು. ' ಓಡಿಹೋಗುವವಳು ಹಾಲಿಗೆ ಹೆಪ್ಪುಹಾಕ್ತಾಳೆಯೇ,' 'ಸಂತೆಯಲ್ಲಿ ಸೀರೆ ಬಿಚ್ಚಿದ ಹಾಗೆ' 'ಕಲಿತದ್ದು ಬಿಡೆ..(ಪೂರ್ತಿ ಮಾಡಿಕೊಳ್ಳಿ!)' 'ಅದೇನೋ (ಏನನ್ನ ಗೊತ್ತಲ್ಲ?) ನೆಚ್ಚಿಕೊಂಡು ಹೊಳೆಗೆ ಹಾರಿದನಂತೆ' ಮುಂತಾದವು ತಕ್ಷಣದಲ್ಲಿ ನನಗೆ ನೆನಪಾಗುತ್ತಿವೆ.

ವಸಂತಕುಲಕರ್ಣಿ ಕಳಿಸಿರುವ ಗಾದೆಗಳಲ್ಲಿ ಲೈಂಗಿಕ ಅಂಗಗಳು ತುಂಬಿವೆ. ಅವು ಅಷ್ಟಾಗಿ ಇಲ್ಲದ "ಚಂದಗೇಡಿಗೆ ಚೌಕಹಾಕಿದರೆ ಮಂದಿ ನೋಡಲಂತ ಮಾಳಿಗಿ ಏರಿದಳಂತೆ" "ಸರಿಕಿದವಳು ಸರಿಗೀ ಹಾಕಿಕೊಂಡರೆ ನೆರೆಮನೆಯವಳು ಉರಲು ಹಾಕಿಕೊಂಡಳಂತೆ," "ಮಾಡಿದವನನ್ನು (ಅಲ್ಲಿ ಬಳಸಿರುವ ಪದ ಊಹಿಸಿ) ಬಿಟ್ಟು ಹಣಿಕಿ ನೋಡಿದವನಿಗೆ ಗಂಟುಬಿದ್ದಳಂತೆ"-ಎಷ್ಟು ಚೆನ್ನಾಗಿವೆ!

ಇನ್ನೆರಡು ಕೊಡುತ್ತೇನೆ. ಎರಡನೆಯದನ್ನು ಓದಿ ಆಗಾಗ ಬಳಸಿ ಮತ್ತು ಈಗ ಬಳಸುತ್ತಿರುವ ನನ್ನನ್ನು ಕ್ಷಮಿಸಿ. 1. ತನ್ನ ಜೋಳಾ ಮಂದಿಗೆ ಬೀಸಾಕಿ ಕೊಟ್ಟು ಗೌಡನ ಜೋಳಾ ಹಾಡ್ಯಾಡಿ ಬೀಳಿಸಿದಳಂತೆ.

2. ಶಂಟಾ ಸುಟ್ಟರ ಇದ್ದಲೀ ಆದಾವಾ?



ಜನತಂತ್ರದ ಹೂ...

ಉಪಖಂಡ
ನರಕವಾಗಲೆಂದೆ ಏನೋ
ಸ್ವರ್ಗ ಶಿಖರದಿಂದ
ಕಳಚಿಕೊಂಡು ಪಾಕ್ ಆಗಿತ್ತು

ಬುಟ್ಟೊ, ಲಿಯಾಕತ್‌ರ
ನೆತ್ತರ ಬಸಿದರು
ದಣಿಯದೆ ಹಸಿದಿತ್ತು

ಅಮೆರಿಕೆಗೆ ಸೆರೆಯಾಗಿ
ವಸಾಹತುವಿನ ನೆಲೆಯಾಗಿ
ಕೋಮು-ಮೂಲಭೂತಗಳ
ಬೆಳೆದ ಕಣಜ

ಅಫ್ಘನ್-ಇರಾಕ್
ಜನತಂತ್ರವಿಲ್ಲದ ಪಾಕ್
ಬುಷ್ ಸಂತತಿಯ ಫರ್ಮಾನು
ಇಲ್ಲಿಯ ಕಾನೂನು

ಬೇನಜೀರ್ ನೀನು
ಸೇನೆಯ ದುರಾಡಳಿತದ
ಬಾಣಲೆಯಲಿ ಬೆಂದು
ಮೂಡಿದ 'ಜನತಂತ್ರದ ಹೂ'

ನಿನಗೆ ಪಾಕ್ ಆಳುವಾಸೆ
ಪಾಕ್‌ಗೆ ನಿನ್ನ ರಕ್ತದಾಸೆ
ಜನತಂತ್ರಕ್ಕಾಗಿ ಗುಂಡಿಗೆ
ಎದೆಕೊಟ್ಟೆ
ಈತ್ತು ಸೀಳಿಯಾಗಿದೆ
ಜನತಂತ್ರ ಹೋಳಾಗಿದೆ


ಅಮರವಾಗಲಿ ಬಲಿದಾನ
ಜನಗಳದ್ದಾಗಲಿ ಪಾಕಿಸ್ತಾನ

■ ದಾದಾಪೀರ್ ತರೀಕೆರೆ

ಮೊಗಳ್ಳಿ ಮೂಗರ್ಜಿ

ಸಾಹಿತ್ಯ ಕ್ಷೇತ್ರದಲ್ಲಿ ಮೂಗರ್ಜಿಗಳಿಗೆ ಏನೂ ಬರವಿಲ್ಲ. ಇಂಥದ್ದೇ ಒಂದು ಹೊಸ ಮೂಗರ್ಜಿಯನ್ನು ಸಾಹಿತಿ ಮೊಗಳ್ಳಿ ಗಣೇಶ್ ಕುಂ.ವೀರಭದ್ರಪ್ಪ ವಿರುದ್ಧ ಹಾಕಿದ್ದಾರೆ.

ಈ ಸಾಲಿನ ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ ಪಡೆದ ಕುಂವೀರವರ 'ಅರಮನೆ' ಕಾದಂಬರಿ ಸಿನಿಮಾ ಆಗಲಿಕ್ಕೆ ಲಾಯಕ್ಕಾದ ಕಾದಂಬರಿ ಅಷ್ಟೇ ಎಂದು ಮೊಗಳ್ಳಿ ಕುಹಕವಾಡಿದ್ದಾರೆ. ಈ ಮಾತಿಗೂ ಮುನ್ನ ಅಕಾಡಮಿ ಪ್ರಶಸ್ತಿಗೆ ನಾನು ಸ್ಪರ್ಧಿಯಾಗಿದ್ದೆ. ಆದರೆ ಜಾತಿ ಲಾಬಿಯಿಂದಾಗಿ ಅದು ಕುಂವಿಗೆ ದಕ್ಕಿದೆ ಎಂತಲೂ ಹೇಳಿಕೊಂಡಿದ್ದಾರೆ.



ಸೂಕ್ಷ್ಮವಾಗಿ ಹೇಳಬೇಕೆಂದರೆ ಇವೆರಡೂ ಬೇರೆ ಬೇರೆ ಸಂಗತಿಗಳು. ಮೊಗಳ್ಳಿ ತಮ್ಮ ಸ್ಪರ್ಧೆ ಬಗ್ಗೆ ಮಾತಾಡದೆ ಬರೀ 'ಅರಮನೆ'ಯ ತಾಕತ್ತು ಎಷ್ಟಿದೆಯೆಂದಷ್ಟೇ ಹೇಳಿದಿದ್ದರೆ ಅದಕ್ಕೆ ಯಾರೂ ಆಕ್ಷೇಪಿಸುತ್ತಿರಲಿಲ್ಲವೇನೊ. ಆದರೆ 'ನಾನು ಬಯಸಿದ್ದ ಪ್ರೈಜು ಅವನಿಗ್ಯಾಕೆ ಕೊಟ್ಟಿರಿ' ಎಂಬಂತೆ ಜಗಳಕ್ಕಿಳಿಯುವುದು ಸಭ್ಯ ನಡವಳಿಕೆಯಾ?

ಮೊಗಳ್ಳಿ ಕೇಂದ್ರ ಅಕಾಡಮಿಗೆ ಯಾವ ಕೃತಿ ಕಳುಹಿಸಿದ್ದರೆಂಬುದು ಗೊತ್ತಿಲ್ಲ. ಆದರೆ ಅವರ 'ತೊಟ್ಟಿಲು ಹಾಗೂ ಕಿರೀಟ' ಪುಸ್ತಕಗಳು ಕಳೆದ ಬಾರಿ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿಗಾಗಿ ಸ್ಪರ್ಧೆಯಲ್ಲಿದ್ದವಾದರೂ ಪರಿಗಣನೆಗೊಂಡಿರಲಿಲ್ಲ. ಮೊಗಳ್ಳಿ ಇನ್ನೂ ಮಹತ್ತಾದನ್ನು ಬರೆಯಬಲ್ಲ ಅಪಾರ ಸಾಧ್ಯತೆಗಳಿರುವ ಲೇಖಕ. ಆದರೆ ಪ್ರಶಸ್ತಿ ವಿಚಾರದಲ್ಲಿ ಲೇಖಕನೊಬ್ಬ ಸಂಕೋಚ ತೊರೆದರೆ ಏನು ಚೆನ್ನ?

ಗಡಾಫಿ ಗಮ್ಮತ್ತು


ನಮ್ಮ ಕನ್ನಡ ಪತ್ರಿಕೆಗಳಲ್ಲಿ ಅಷ್ಟಾಗಿ ವರದಿಯಾಗದ ಗಡಾಫಿ ಗಮ್ಮತ್ತಿನ ವಿಚಾರ ಇದು.

ಲಿಬಿಯಾ ದೇಶದ ಈ ಸರ್ವಾಧಿಕಾರಿ ಮೊನ್ನೆ ಡಿಸೆಂಬರ್ ತಿಂಗಳಲ್ಲಿ ಪ್ಯಾರಿಸ್‌ಗೆ ಹೋಗಿದ್ದ. ನಾನೂರು ಜನರ ಗುಂಪು ಅವನೊಂದಿಗಿತ್ತು. ಉದ್ಯಮಿಗಳು, ರಾಜತಾಂತ್ರಿಕರು ಮುಂತಾದವರೆಲ್ಲಾ ಅವನೊಂದಿಗಿದ್ದರು. ಇಡೀ ಫ್ರಾನ್ಸ್ ಬೆರಗಾಗಿ ನೋಡಿದ್ದು ಅವನ 30 ಬಾಡಿಗಾರ್ಡ್‌ಗಳನ್ನು....!

ಅವರೆಲ್ಲಾ ಯುವತಿಯರು... ಜೊತೆಗೆ ಈ



ಮರುಳುಗಾಡಿನ ದೇಶದ ನಾಯಕ ತನ್ನೊಂದಿಗೆ ಒಂದು ಒಂಟೆಯನ್ನು ಒಯ್ದಿದ್ದ. 'ಒಂಟೆ ಯಾಕೆ' ಅಂದವರಿಗೆ 'ನನಗೆ ದಿನಾ ಬೆಳಗ್ಗೆ ಒಂಟೆ ಹಾಲು ಬೇಕು. ಅದು ಪ್ಯಾರಿಸ್‌ನಲ್ಲಿ ಹೇಗೆ ಸಿಗಬೇಕು?' ಅಂದ. ಇನ್ನೂ ಮಜಾ ಅಂದರೆ ಫ್ರೆಂಚ್ ಸರ್ಕಾರ ಅವನಿಗಾಗಿ ವೈಭವದ ಹೋಟೆಲ್ ದಿ ಮಾರಿಗ್ನದಲ್ಲಿ ವಸತಿಗೆ ಅರೇಂಜ್ ಮಾಡಿದ್ದರೆ,



ಅಲ್ಲಿರಲು ಒಪ್ಪದ ಗಡಾಫಿ ಅದೇ ಹೋಟೆಲ್‌ನ ಕಾಂಪೌಂಡ್‌ನೊಳಗೆ ಒಂದು ಅಲೆಮಾರಿ ಟೆಂಟ್ ಹಾಕಿಕೊಂಡು ಅಲ್ಲೇ ಉಳಿದ.

'ಲಿಬಿಯಾದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ' ಎಂದು ಕೆಲ ಫ್ರೆಂಚ್ ಪತ್ರಿಕೆಗಳು ಟೀಕಿಸಿ ಬರೆದಾಗ "ನಿಮ್ಮಲ್ಲಿರುವ ಆಫ್ರಿಕಾದ ಕರಿಯರನ್ನು ಕತ್ತೆಗಳ ಥರ ದುಡಿಸಿಕೊಂಡು ಚರಂಡಿಗಳಲ್ಲಿ ಬದುಕುವಂತೆ ಮಾಡಿದ್ದೀರಲ್ಲ, ಮೊದಲು ಅವರಿಗೆ ಸಮಾನತೆ ಕೊಡಿ" ಎಂದು ಬೈಯ್ದು ಅವರ ಬಾಯಿ ಮುಚ್ಚಿಸಿಬಿಟ್ಟ.

ಬಿಡಿ ಚಿತ್ರಗಳು

ಪಾರ್ವತೀಶ

ಲಿಬಿಯಾದ ಜನರಿಗೆ ಗಡಾಫಿಯ ದುಷ್ಟ ಸರ್ವಾಧಿಕಾರ ಬಿಟ್ಟರೆ ಬೇರೇನೂ ಸಿಗುತ್ತಿಲ್ಲ. ಆದ[ರೆ] ಅವನೀಗ ಹುಟ್ಟಾ ದುಷ್ಟ[...] ಅಮೆರಿಕ-ಫ್ರೆಂಚ್ ಸರ್ಕಾರ[...] ಮಿತ್ರ. ಇದು ಯಾಕೆಂದರೆ ಲಿಬಿಯಾದಲ್ಲಿ ಅಲ್ ಖೈದಾ ಪ್ರಭಾವ ಬೆಳೆಯದಂತೆ ಮಾಡಲು ಪಶ್ಚಿಮ ದೇಶಗಳಿಗೀಗ ಗಡಾಫಿ ಥರದವರ ನೆರವು ಬೇಕೇ ಬೇಕು. ಹಾಗಾಗಿ ಗಡಾಫಿ ಮೇಲಿದ್ದ ಟೆರರಿಸಂ ಆರೋಪಗಳಿಗೆಲ್ಲಾ ಈಗ ಮಾಫ್ ನೀಡಲಾಗಿದೆ.

ವಾರ್ತಾ ಭಾರತಿ ನೋಡುತ್ತಿದ್ದೀ[ರಾ]

ಕನ್ನಡದ ಅತ್ಯುತ್ತಮ ದಿನಪತ್ರಿಕೆಯಾದ ವಾರ್ತಾ ಭಾರತಿಯಲ್ಲೀಗ ಒಂದು ಗಂಭೀರ ಚರ್ಚೆ ನಡೆದಿ[ದೆ].

ನಂದಿಗ್ರಾಮದಲ್ಲಿ ಸಿಪಿಐಂ ಸರ್ಕಾರ ನಡೆಸುತ್ತಿರುವ ಗೂಂಡಾಗಿರಿ ಬಗ್ಗೆ ಶಿವಸುಂದರ್ ಬರೆದ ಲೇಖನ ಹಾಗೇ ಮುಂದುವರೆದು ಅದಿ[...] ಎಡಪಂಥಿ ಅಂದರೇನು? ಕಮ್ಯುನಿಸ್ಟರು ಮಾಡು[ವ] ತಪ್ಪುಗಳಿಗೆ ರಿಯಾಯಿತಿ ತೋರಬೇಕೆ? ಸೈದ್ಧಾಂ[ತಿಕ] ಹಾಗೂ ಸಂಘರ್ಷಗಳ ಬದ್ಧತೆ ಏನೆಂಬುದರ ವ್ಯಾಖ್ಯಾನದವರೆಗೂ ಬೆಳೆಯುತ್ತಿದೆ.


ಸದ್ಯಕ್ಕೆ ಶಿವಸುಂದರ್, ಕೆ. ಫಣಿರಾಜ್, ಸನ[ತ್] ಕುಮಾರ್ ಬೆಳಗಲಿ ಹಾಗೂ ಕರ್ನಾಟಕ ಸಿಪಿಎಂನವರು ಅಖಾಡದಲ್ಲಿದ್ದಾರೆ. ಆಸಕ್ತರು ಭಾಗವಹಿಸಬಹುದು.

ಬೈಗುಳಗಳ ಮಟ್ಟಿಗೆ ಅಸ್ಪೃಶ್ಯರೂ, ಬ್ರಾಹ್ಮಣ ಸ್ತ್ರೀಯರೂ ಒಂದೇ

ತೆಗಳಿಕೆ ಹೊಗಳಿಕೆ

ಡಿ.26ರ 'ಬಿಡಿ ಚಿತ್ರ'ದಲ್ಲಿ ಪ್ರಸ್ತಾಪಿಸಲ್ಪಟ್ಟ ದೊಂಬರಾಟ ಪದದ ಬಳಕೆಯ ಕುರಿತ ಚಿಂತನೆ ನಿಜಕ್ಕೂ ಯೋಚಿಸತಕ್ಕ ವಿಷಯವೇ ಆಗಿದೆ. ಕೆಲ ಸಮಯದ ಹಿಂದೆ ಇದೇ ರೀತಿ ಕ್ಷೌರಿಕ ಜನಾಂಗದವರೂ 'ಹಜಾಮ' ಎಂಬ ಬೈಗುಳ ಪದದ ಬಳಕೆಯ ಬಗ್ಗೆ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದುಂಟು. ಇನ್ನೊಬ್ಬನನ್ನು ಕೀಳಾಗಿ ಹೀಗಳೆಯುವ ಸಲುವಾಗಿ ಈ ಬೈಗುಳ ಬಳಕೆಯಾಗುವ ಕಾರಣ ಶಿವಸುಂದರ್‌ರವರಂದಂತೆ ಕೇವಲ ಕೆಳವರ್ಗದವರಷ್ಟೇ ಬೈಗುಳ ಪದವಾಗಿ ಬಳಕೆಯಾಗುತ್ತಿದ್ದು ಮೇಲ್ವರ್ಗ ಅಥವಾ ಉಚ್ಚಕುಲದವರೆಂಬ ಹಣೆಪಟ್ಟಿಯುಳ್ಳ ಬ್ರಾಹ್ಮಣವರ್ಗ ಇದಕ್ಕೆ ಹೊರತಾಗಿರುವುದು ಹೌದೆನಿಸಿದರೂ ಇದು ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ಎಲ್ಲರಿಗೂ ಅನ್ವಯಿಸದು ಎಂಬುದಿಲ್ಲಿ ಗಮನಾರ್ಹ.

ಅಂದಿನ ಸಮಾಜದಲ್ಲಿ ಮನುಷ್ಯ ಅಥವಾ ಪ್ರಜೆ ಎಂದರೆ ಕೇವಲ ಬ್ರಾಹ್ಮಣ ವರ್ಗವಷ್ಟೇ ಪ್ರಮುಖವಾಗಿ ಪ್ರತಿಬಿಂಬಿಸಲ್ಪಡುವಂತೆ ಬ್ರಾಹ್ಮಣ ಎಂದರೆ ಆ ಜಾತಿಯಲ್ಲಿ ಜನಿಸಿದ ಕೇವಲ ಪುರುಷ ವರ್ಗವಷ್ಟೇ ಪ್ರತಿನಿಧಿಸಲ್ಪಟ್ಟಿತ್ತು. ಮಹಿಳೆಯರು ಬ್ರಾಹ್ಮಣರಾದರೂ ಅಸ್ಪೃಶ್ಯರಂತೆ ಇವರ ಮೇಲೂ ಹಲವಾರು ಸಾಮಾಜಿಕ ಕಟ್ಟುಪಾಡುಗಳು ವಿಧಿಸಲ್ಪಟ್ಟಿದ್ದು ಇವರುಗಳೂ ಕೂಡ ಶೋಷಿತ ಬದುಕನ್ನೇ ನಡೆಸುತ್ತಿದ್ದರು. ಇದು ಸಾವಿರಾರು ವರ್ಷಗಳ ಹಿಂದಿನ ಮಾತೇನಲ್ಲ, ಇಂದಿನಂತೆ ಆಧುನಿಕತೆಯ ಪ್ರಭಾವ ಗಳಿಸಿಕೊಳ್ಳುವುದಕ್ಕೂ ಮೊದಲು ಅಂದರೆ ಕೇವಲ 30-40ವರ್ಷಗಳ ಹಿಂದಿನ ಕತೆಯಿದು. ಆವಾಗಿನ ಗಂಡ ಸತ್ತ ಬ್ರಾಹ್ಮಣ ವಿಧವೆಯ ಪಾಡು ಯಾವ ಅಸ್ಪೃಶ್ಯನಿಗಿಂತಲೂ ಕಡಿಮೆ ಇದ್ದಿರಲಿಲ್ಲ. ಒಟ್ಟಾರೆಯಾಗಿ ಬ್ರಾಹ್ಮಣರ ಕುರಿತ ಬೈಗುಳ ಪದಗಳಾಗಲೀ ಅಥವಾ ಬ್ರಾಹ್ಮಣರಿಗೆ ನೇರಾನೇರ ಬೈಯ್ಯುವ ಧೈರ್ಯವಾಗಲೀ ಆವಾಗ ಇಲ್ಲದಿದ್ದರೇನಂತೆ ಬ್ರಾಹ್ಮಣ ಮಹಿಳೆಗೆ ಸಂಬಂಧಿಸಿದ ಬೈಗುಳಗಳು ಬ್ರಾಹ್ಮಣರಲ್ಲೇ ಚಾಲ್ತಿಯಲ್ಲಿತ್ತು. ಇದಕ್ಕೆ 'ಬೋಳಿಮಗ' ಎನ್ನುವ ಕುಪ್ರಸಿದ್ಧವಾದ (ಈಗ ಎಲ್ಲರೂ ಬಳಸುವ) ಬ್ರಾಹ್ಮಣ ಬೈಗುಳವನ್ನು ಉದಾಹರಿಸಬಹುದು. (ವಿವರಗಳಿಗೆ ಪದಾರ್ಥ ಚಿಂತಾಮಣಿ 84ನೇ ಪುಟವನ್ನು ಗಮನಿಸಬಹುದು-ಲೇ. ಪಾ.ವೆಂ.)



ಬೈಗುಳಗಳಿಗೆ ಸಂಬಂಧಿಸಿ ಇದನ್ನೆಲ್ಲ ಬರೆಯುವಾಗ ಮೊನ್ನೆ ನಮ್ಮ ಮಾ.ಮು.ಮ. ಯಡಿಯೂರಪ್ಪನವರು ತಮ್ಮವರ ಬಗ್ಗೆಯೇ ಸಾರ್ವಜನಿಕ ರೆದುರು ಬಳಸಿದ ಬೈಗುಳ ಬೇಡವೆಂದರೂ ನೆನಪಿಗೆ ಬರುತ್ತದೆ. ಈ "ಮಾದರ್...." ಎನ್ನುವ ಬೈಗುಳ ಸ್ತ್ರೀಯರ ಅದರಲ್ಲೂ ತಾಯಿಯ ಕುರಿತಾಗಿ ಇರುವ ಅತ್ಯಂತ ಅಶ್ಲೀಲ ಹಾಗೂ ಹೀನ ಬೈಗುಳ ಆಗಿದ್ದೂ ಕೂಡ ಇದು ನಮ್ಮ ಧರ್ಮ-ಸಂಸ್ಕೃತಿಗಳನ್ನು ಗುತ್ತಿಗೆ ಹಿಡಿದವರ ಬಾಯಿಂದ ಬರಬಾರದಿತ್ತಲ್ಲವೇ? ಇದೇ ವ್ಯಕ್ತಿ ಮೊನ್ನೆ ಅಧಿಕಾರಕ್ಕೇರುವ ಹಿಂದಿನ ದಿನ ಖಾಸಗಿ ಚಾನೆಲ್ ಒಂದು ಅವರ ಮಗಳನ್ನು ಸಂದರ್ಶಿಸಿ ತಂದೆಯ ಕುರಿತಾದ ಸಿಟ್ಟು ಸೆಡವುಗಳ ಬಗ್ಗೆ ಕೇಳಿದಾಗ ಅದಕ್ಕುತ್ತರಿಸಿದ ಅವರ ಮಗಳು "ನಮ್ಮ ತಂದೆಯದ್ದು ತಾತ್ವಿಕ ಸಿಟ್ಟೇ ವಿನಃ ಅದರಲ್ಲಿ ಕೆಟ್ಟ ಭಾವನೆಗಳಿರದು" ಎಂದಿದ್ದರು. ಸಾರ್ವಜನಿಕವಾಗಿ ಅಶ್ಲೀಲವಾಗಿ ಬೈದಾಟ ನಡೆಸುವ ಇವರದ್ದು ಯಾವ ಸೀಮೆಯ ತಾತ್ವಿಕ ಸಿಟ್ಟೋ ಆ ಬೈಗುಳೇಶ್ವರನೇ ಬಲ್ಲ!

-ರವಿ ಪುತ್ತೂರ, ದ.ಕ.

ಪತ್ರಿಕೆಯಲ್ಲಿ ಪ್ರಕಟವಾದ BSP ಎಂಬ ನಿಗೂಢ ಶಕ್ತಿ ಹಾಗೂ ಆನೆ ಬಂತೊಂದಾನೆ ಎಂಬ ಒಂದೇ ಪಕ್ಷದ ವಿಭಿನ್ನ ಲೇಖನ ಸಕಾಲಿಕವಾದರೂ ಬಿ.ಎಂ.ಪುಟ್ಟಯ್ಯನವರ ವರದಿ ಕೆಲವೊಮ್ಮೆ ತಪ್ಪಾಗಿ ಅರ್ಥೈಸಿದ್ದಾರೆ ಎಂಬ ಭಾವನೆ ಮೂಡಿತು. ಬಾಬಾರ ಸಂವಿಧಾನ ಸಂಪೂರ್ಣ ಜಾರಿಯಾಗದ ಹೊರತು ಸರ್ವಜನರ ಹಿತ ಕನಸಿನ ಮಾತು. ಸ್ವಾತಂತ್ರ್ಯ ನಂತರ ಬಂದ ಎಲ್ಲಾ ಮನುವಾದಿ ಪಕ್ಷಗಳು ಸಂವಿಧಾನವನ್ನು ಅದರ ಆಶಯಗಳನ್ನು ಅಂಬೇಡ್ಕರ್‌ರವನ್ನು ಬಾಲ್ಯದಲ್ಲಿ ಅಸ್ಪೃಶ್ಯತೆ ಕರಿನೆರಳಿನಲ್ಲಿ ನೋಡಿದಂತೆ, ಪೂರ್ವಗ್ರಹ ಪೀಡಿತವಾಗೇ ನೋಡಿ ಅದನ್ನು ಬಾಲಗ್ರಹ ಪೀಡೆಯಂತಾಗಿಸಿದ್ದವು.



ಅಧಿಕಾರ ಮನುವಾದಿಗೆ ಕೊಟ್ಟು ಬೇಡುವುದನ್ನು ಕಾಯಕವನ್ನಾಗಿಸಿಕೊಂಡ ದೈನೇಸಿ ಸ್ಥಿತಿಯಲ್ಲಿರೋ ದಸಂಸ ಸಂಘಟನೆಗಳಿಂದ ಪರಿವರ್ತನೆ ಸಾಧ್ಯವೇ? ಎಲ್ಲಾ ಪಕ್ಷಗಳು 'ಪ್ರಣಾಳಿಕೆ' ಪ್ರಕಟಿಸಿದರೆ, ಬಹುಶಃ BSP ಸಂವಿಧಾನ ಜಾರಿಯೇ ಚುನಾವಣಾ ಪ್ರಣಾಳಿಕೆ ಎಂದು ಬಿಂಬಿಸಿರುವುದರಲ್ಲಿ ಅದರ ಗುರಿ ಅಡಗಿರಬಹುದು. ಆದರೂ ಮಾಧ್ಯಮಗಳು ಸಮಯಕ್ಕೆ ತಕ್ಕ ಹಾಗೆ ಪಕ್ಷಗಳನ್ನು ಎಚ್ಚರಿಸಬೇಕಾದ್ದು ಗುರುತರ ಹೊಣೆ ಕೂಡ.

-ಗಾನಾಸುಮಾ. ಪಟ್ಟಸೋಮನಹಳ್ಳಿ

ಮಹಾತ್ಮ ಮತ್ತು ಜಾಡಮಾಲಿ

ಊರ ಕಂದಮ್ಮಗಳು ಜುಟ್ಟು ಜನಿವಾರಕೆ ನೇಣು ಬಿದ್ದು
ಜಗವ ಕಾಯುವನ ನೆತ್ತಿಗೆ ದೀಪವಿಡಿದು ತೂಗಾಡುವಾಗ
ಸೈ ಸೈ ಎನ್ನುವ ನಿಮ್ಮ ಗಾದೆ ಮಾತಿಗೆ ತಗಾದೆ ಮಾಡದೆ
ಹಾಳು ಕೇರಿಯ ನೆಲದಿಂದೆದ್ದು ಮಲಮೂತ್ರ ಹೊರಬೇಕೆ ಮಹಾತ್ಮಾ?

ನಮ್ಮ ಅಂಗಳಕೆ ಮರುಭೂಮಿಸುತ್ತಿ ಭಿಕ್ಷಾಪಾತ್ರೆ ಕೊಟ್ಟರೂ
ನಾವು ಊರು-ಬಿಡುವಂತಿಲ್ಲ, ಭೂಮಿ ಬಿತ್ತುವಂತಿಲ್ಲ
ಧರ್ಮಕರ್ಮಗಳ ಬಡಿಗೆಗಳೆದ್ದು ಮೀಸೆ ತಿರುವಿದಂತೆಲ್ಲಾ
ಮುಳ್ಳಿನ ಕಿರೀಟ ತೊಟ್ಟು ಕರುಳಿಗೆ ಮೊಳೆ ಒಡಕೊಂಡು
ಒಡಲ ತುಂಬಾ ನಿಮ್ಮ ಹೆಬ್ಬೆರಳ ಹೊತ್ತೇ ಸಾಗಬೇಕೆ ಮಹಾತ್ಮಾ?



ತಪ್ಪನ್ನೇ ಕುಡಿದು ಬೆಂಕಿಯ ತುಳಿದ
ಕೆಂಡಗಳ ಕುಲುಮೆಯಲಿ ತಿರುತಿರುಗಿ ಬಿದ್ದು
ಸುತ್ತಿಗೆಯ ಏಟಿಗೆ ಜಗ್ಗದ ಬಾಬಾ ಸಾಹೇಬ
ನಮ್ಮ ಹರಿದ ಅಂಗಿಗೊಂದೊಂದು ಬಾಯಿ ಕೊಟ್ಟ
ಕಾಡು ಕಥೆಗೊಂದು ಜೀವವಿಟ್ಟ, ಹೆಜ್ಜೆಗೊಂದು ಪ್ರಶ್ನೆ ಇಟ್ಟ ॥

ಎಷ್ಟಾದರೂ ನೀವು ಮಹಾತ್ಮರು ಸಾಮಿ-
ತಿಂದೊಗೆದ ಎಂಜಲು ಎಲೆಗಳ ಯಜ್ಞಭೂಮಿಗೆ ಕಟ್ಟದಿರಿ!
ಬೇಡುವ ಜೀವಕ್ಕೆ ದೇಶವುಂಟೆ? ಧರ್ಮವುಂಟೆ ತಂದೆ?
ಸೋಲಿನೊಂದಿಗೇ ಸವಾಲು ಬಿದ್ದು ಕರುಳುರಿಯೆ ಕುಡಿದು
ಅನ್ನದ ಆಸೆಯಲಿ ಹೇಲುಚ್ಚೆ ಬಳಿಯುತ್ತೇವೆ ॥

ತಾಯಿ ಕೆಲಸವೋ, ತಂದೆ ಕೆಲಸವೋ ಗೊತ್ತಿಲ್ಲ ಸ್ವಾಮಿ
ಮುಪ್ಪು ಮುಟ್ಟುವ ತನಕ ಮುಗಿಲ ಮೆಟ್ಟುತ್ತೇವೆ ॥


ದಂಡ, ದಂಡಗಳಡಿ ಕಾಗೆ, ಗೂಗೆ, ನಾಯಿ, ಹಂದಿಗಳಾಗಿ
ಗುಡಿಯೆದುರು ಕಡಲುಟ್ಟ ಭಕ್ತರ ಸಾಲುಸಾಲಿಗೆ ಬಾಗಿ
ಹೊಲಸ ಬಳಿ ಬಳಿದು ಕನಸಿಗೂ ದೂರಾಗಿ, ಸುಟ್ಟರೂ-
ಉರಿವ ನಕ್ಷತ್ರಗಳಾಗಿ ಮುಗಿಲ ತುಂಬಾ ತೆವಳುತ್ತೇವೆ
ಸಾವು ಹಗುರ, ಬಿಟ್ಟು ಹೋಗುವ ಮೌನ ಬಲು ಭಾರ ಮಹಾತ್ಮ



-ಶಿವಕುಮಾರ್ ಕಂಪ್ಲಿ. ದೇವದ[...]

(ಡಿಸೆಂಬರ್ 26ರ ಕಂದಹಾಗೆ ಅಂಕಣದಿಂದ ಪ್ರೇರಣೆ ಪಡೆ[ದು])

ನಿಮ್ಮ ವಯಸ್ಸನ್ನು ಗತಿಸಿದ ವರ್ಷಗಳಿಂದ ಎಣಿಸಬೇಡಿ, ಗಳಿಸಿದ ಸ್ನೇಹಿತರಿಂದ ಎಣಿಸಿ -ಅನಾಮಿಕ







ಹೊಸ್ತಿಲಿನಲ್ಲೇ ಎಡವಿದವರು...

ಈ ಎಲ್ಲ ನಾಯಕನಟರು ನಿರಂತರವಾದ ಸೋಲಿನ ಸರಪಳಿಯಲ್ಲಿ ಸಿಲುಕಿ ಒದ್ದಾಡಲು ಅವರಿಗೆ ಸರಿಯಾದ ಅವಕಾಶಗಳು ಸಿಗಲಿಲ್ಲವಾ? ಅಥವಾ ಸಿಕ್ಕ ಅವಕಾಶಗಳನ್ನು ಅವರೇ ಸರಿಯಾಗಿ ಬಳಸಿಕೊಳ್ಳಲಿಲ್ಲವಾ?

ಹೇಗಾದರು ಮಾಡಿ ಚಿತ್ರರಂಗವೆಂಬ ಮಾಯಾ ಲೋಕಕ್ಕೆ ಎಂಟ್ರಿ ಪಡೆಯಬೇಕೆಂದು ಆಕಾಂಕ್ಷೆ ಸಾವಿರಾರು ಮಂದಿಯಲ್ಲಿರುತ್ತದೆ. ಆದರೆ ಹಲವೇ ಹಲವು ಅದೃಷ್ಟವಂತರಿಗೆ ಮಾತ್ರ ಈ ಬಣ್ಣಬಣ್ಣದ ಲೋಕ ತನ್ನ ಬಾಗಿಲನ್ನು ತೆರೆಯುತ್ತದೆ. ಆದರೆ ವಿಪರ್ಯಾಸ ನೋಡಿ, ಹೀಗೆ ಪ್ರವೇಶ ಪಡೆದ ಅದೃಷ್ಟವಂತರ ದುರಾದೃಷ್ಟವೋ, ಗಾಂಧಿನಗರದ ದೌರ್ಭಾಗ್ಯವೋ ಅಥವಾ ಅವರ ಹಣೆಬರಹವೋ, ಹೀಗೆ ತೆರೆದ ಬಾಗಿಲನ್ನು ಹೊಕ್ಕ ಅದೆಷ್ಟೋ ಜನ ಆದರೆ ಹೊಸ್ತಿಲಿನಲ್ಲೇ ಎಡವಿ ಮಕಾಡೆ ಬೀಳುತ್ತಾರೆ.

ಹೀಗೆ ಮಕಾಡೆ ಬಿದ್ದವರ ದೊಡ್ಡ ಪಟ್ಟಿ ಎಲ್ಲಾ ಭಾಷೆಯ ಚಿತ್ರರಂಗದಲ್ಲಿರುವಂತೆ ಇಲ್ಲಿಯೂ ಇದೆ. ಉದಾಹರಣೆಗೆ ಅನಿರುದ್ ಎಂಬ ನಟನನ್ನೇ ತೆಗೆದುಕೊಳ್ಳಿ. ಈತನಿಗೆ ಯೌವನವಿತ್ತು, ಅಲ್ಪ ಮಟ್ಟಿಗಿನ ಪ್ರತಿಭೆಯೂ ಇತ್ತು. ಜೊತೆಗೆ ಚಂದವೂ ಇತ್ತು. ಸಾಕಷ್ಟು ಅವಕಾಶಗಳೂ ಸಿಕ್ಕಿದ್ದವು. ಆದರೆ ಪಾಪ ಈ ಹುಡುಗನಿಗೆ ಸಾಸಿವೆ ಕಾಳಿನಷ್ಟೂ 'ಲಕ್' ಎಂಬುದು ಮಾತ್ರ ಇರಲಿಲ್ಲ.

ಇವನಿಗೆ ಬ್ರೇಕ್ ಸಿಕ್ಕಿದ್ದೇ ದಿನೇಶ್ ಬಾಬು ನಿರ್ದೇಶನದ ಚಿತ್ರದಲ್ಲಿ. ಆದರೆ ಅದರಲ್ಲಿ ಅವನ ಪ್ರತಿಭೆಯನ್ನು ಜನ ಕಂಡರೇ ಹೊರತು ನಾಯಕ ನಟನ ಲಕ್ಷಣಗಳನ್ನಲ್ಲ. ಆದರೂ ಅವಕಾಶಗಳನ್ನು ಪಡೆಯುವುದರಲ್ಲಿ ಈತನಿಗಿದ್ದಷ್ಟು ಅದೃಷ್ಟ ಎಸ್ಟಾಬ್ಲಿಶ್ ಆಗಿರುವ ಹೀರೋಗಳಿಗೂ ಇರುವುದಿಲ್ಲವೇನೋ? ಏಕೆಂದರೆ ಆನಂತರವೂ ಆತನಿಗೆ ಹತ್ತು, ಹನ್ನೆರಡು ಅವಕಾಶಗಳು ಸಿಕ್ಕಿದ್ದವು. ಆದರೆ ಅವಕಾಶ ಮಾತ್ರ ಹಿಟ್ ಚಿತ್ರಗಳಾಗಿ ಪರಿವರ್ತನೆಗೊಳ್ಳಲಿಲ್ಲ. ಆತ ನಟಿಸಿದ ಎಲ್ಲಾ ಚಿತ್ರಗಳು ಸಾಲುಸಾಲಾಗಿ ಸೋತವು.

ಅನಿರುದ್ ವಿಷ್ಣುವರ್ಧನ್‌ರವರ ಅಳಿಯ ಆಗಿರುವುದರಿಂದ ಅವರು ಕೂಡ ಈತನ ಬೆನ್ನಿಗೆ ನಿಂತರೂ ಅದೂ ವರ್ಕ್‌ಔಟ್ ಆಗಲಿಲ್ಲ. ಕೊನೆಗೆ 'ನೀನೆಲ್ಲೋ ನಾನಲ್ಲೆ' ಎಂಬ ಚಿತ್ರದಲ್ಲಿ ಅನಿರುದ್ ನೊಂದಿಗೆ ವಿಷ್ಣು ನಟಿಸಿದರೂ ಪ್ರೇಕ್ಷಕ ಉಹುಂ ಎಂದು ಒಪ್ಪದೇ ಹಠ ಹಿಡಿದು ಕೂತುಬಿಟ್ಟ. ಇಷ್ಟೊಂದು ಸೋಲುಗಳ ನಂತರ ಅನಿರುದ್ಧ್ ಚಿತ್ರರಂಗದಿಂದ ಸಂಪೂರ್ಣವಾಗಿ ಕಣ್ಮರೆಯಾಗಿದ್ದಾನೆ.

ಇದೇ ಕತೆ ವಿಜಯ್ ರಾಘವೇಂದ್ರ ಮತ್ತು ಮುರಳಿ ಸಹೋದರರದ್ದು. ಚಿನ್ನೇಗೌಡರು ತಮ್ಮ ಈ ಇಬ್ಬರು ಪುತ್ರರತ್ನಗಳನ್ನು ಚಿತ್ರರಂಗದಲ್ಲಿ ನೆಲೆಗೊಳಿಸಲು ಪಟ್ಟಿರುವ ಪಾಡು ಅಷ್ಟಿಷ್ಟಲ್ಲ. ಈ ಮಧ್ಯೆ ಮುರಳಿ ತನ್ನ ಹೆಸರನ್ನು ಶ್ರೀಮುರಳಿ ಎಂದು ಬದಲಾಯಿಸಿಕೊಂಡಿರುವುದನ್ನು ನೋಡಿದರೆ ಆತ ದೇವರೇ ತನ್ನನ್ನು ಕಾಪಾಡಬೇಕು ಎಂಬ ಮನಸ್ಥಿತಿಗೆ ಬಂದಂತೆ ಭಾಸವಾಗುತ್ತದೆ. ಚಿತ್ರರಂಗದಲ್ಲೇ ಫುಲ್‌ಟೈಂ ಮುಳುಗಿರುವ ಚಿನ್ನೇಗೌಡರ ಮಕ್ಕಳಿಗೇ ಈ ಪಾಡು ಎದುರಾಗಿರುವಾಗ ಹೊರಗಿನವರ ಪಾಡೇನಾಗಬೇಡ?

ಹಿರಿಯ ನಟ ಶ್ರೀನಿವಾಸಮೂರ್ತಿ ಅವರ ಮಗ ಅಜಯ್ ಕೃಷ್ಣದ್ದೂ ಇದೇ ಕತೆ. ಅನುಪ್ರಭಾಕರ್ ಮತ್ತು ರಮೇಶ್ ಜೋಡಿಯ 'ಶ್ರೀರಸ್ತು ಶುಭಮಸ್ತು' ಎಂಬ ಚಿತ್ರದಲ್ಲಿ ತನ್ನ ತಂದೆಯೊಂದಿಗೆ ಈ ಯುವಕ ನಟಿಸಿದ್ದ. ಜನ ಕೂಡ ಇವನ ನಟನೆಯನ್ನು ಮೆಚ್ಚಿದ್ದರು. ಆದಾದ ನಂತರ ಪತ್ರಕರ್ತ ನಂದಕುಮಾರ್ ನಿರ್ದೇಶನದ 'ಗುಡ್ ಲಕ್' ಚಿತ್ರದಲ್ಲಿ ಅವಕಾಶ ಸಿಕ್ಕಿ ಅದಕ್ಕೆ ಸುಮಾರಾದ ಓಪನಿಂಗ್ ದೊರಕಿತ್ತು. ಆದರೂ ಅದ್ಯಾಕೋ ಏನೋ ನವೀನ್ ಕೆರಿಯರ್ ಮಾತ್ರ ಎಲ್ಲಿತ್ತೋ ಅಲ್ಲೇ ಗಟ್ಟಿಯಾಗಿ ನಿಂತುಬಿಟ್ಟಿದೆ. ಇದರಿಂದ ಬೇಸತ್ತ ಈ ಹುಡುಗ ನ್ಯೂಮರಾಲಜಿಯ ಎಂಬ ತಲೆಕೆಟ್ಟ ತಂತ್ರಕ್ಕೆ ಮೊರೆ ಹೋಗಿ ತನ್ನ ಹೆಸರನ್ನು ನವೀನ್ ಕೃಷ್ಣ ಎಂದು ಬದಲಿಸಿಕೊಂಡ. ಈಗ ಅದು ಕೂಡ ನೋ ಯೂಸ್ ಎಂಬಂತಾಗಿದೆ.

ಅದೃಷ್ಟವನ್ನರಸಿ, ಅದು ಸಿಗದಿದ್ದಾಗ ತಮ್ಮ ಹೆಸರನ್ನೇ ಬದಲಾಯಿಸಿಕೊಂಡು ಮತ್ತೆ ತಮ್ಮ ಲಕ್ ಟ್ರೈ ಮಾಡಲು ಮುಂದಾದವರಲ್ಲಿ ಶ್ರೀನಗರ ಕಿಟ್ಟಿ ಎಂಬಾತನೂ ಇದ್ದಾನೆ. ಈತ ಈಗಾಗಲೇ ನಟಿಸಿರುವ ಎರಡು ಚಿತ್ರಗಳು ತೋಪೆದ್ದಿವೆ. ಆದ್ದರಿಂದ ತನ್ನ 'ಪೆಟ್ ನೇಮ್' ಆದ 'ಶ್ರೀನಗರ ಕಿಟ್ಟಿ' ಅನ್ನು ಮರೆತು ತನ್ನ ಮೂಲ ಹೆಸರಾದ 'ಕೃಷ್ಣ' ನಿಗೆ ವಾಪಸ್ಸು ಬಂದಿದ್ದಾನೆ. ಈಗ 'ದುನಿಯಾ' ಖ್ಯಾತಿಯ ಸೂರಿ ಎಂಬ ನಿರ್ದೇಶಕನೇ 'ಇಂತಿ ನಿನ್ನ ಪ್ರೀತಿಯಿಂದ' ಇವನ ಹಣೆಬರಹವನ್ನು ಬದಲಾಯಿಸಬೇಕಿದೆ.

ಇವರೆಲ್ಲ ಪಕ್ಕಕ್ಕಿರಲಿ, ಅಂತಹ ಡಾ. ರಾಜ್‌ಕುಮಾರ್‌ರವರ ಎರಡನೆ ಪುತ್ರ ರಾಘವೇಂದ್ರ ರಾಜ್‌ಕುಮಾರ್ ಹಿಂದೆ ಕನ್ನಡ ಚಿತ್ರರಂಗದ ದೊಡ್ಡ ಶಕ್ತಿಯೇ ಇದ್ದರೂ ಆತ ಗೆಲ್ಲಲಿಲ್ಲ ಅಂದರೆ ಏನರ್ಥ? ಆರಂಭದಲ್ಲಿ ಈತ ನಟಿಸಿದ್ದ 'ಚಿರಂಜೀವಿ ಸುಧಾಕರ', 'ನಂಜುಂಡಿ ಕಲ್ಯಾಣ' ಮತ್ತು 'ಗಜಪತಿಯ ಗರ್ವಭಂಗ'ದಂತಹ ಚಿತ್ರಗಳು ಹಿಟ್ಟಾಗಿದ್ದರೂ ಆನಂತರ ಬಂದಿದ್ದೆಲ್ಲವೂ ತೋಪು ತೋಪೇ. ರಾಘುಗಿಂತಲೂ ಮುನ್ನ ಬಂದ ಅಣ್ಣ ಶಿವರಾಜ್ ಕುಮಾರ್ ಮತ್ತು ಆನಂತರ ಎಂಟ್ರಿ ಪಡೆದ ಪುನೀತ್ ರಾಜ್ ಕುಮಾರ್ ಇಬ್ಬರನ್ನೂ ಪ್ರೇಕ್ಷಕರು ಸ್ವಾಗತಿಸಿದ್ದರೂ ರಾಘಣ್ಣನಿಗೆ ಮಾತ್ರ ಗೆಲುವು ಕೈಗೆಟುಕಲೇ ಇಲ್ಲ. ಇದನ್ನು ಮನಸಾರೆ ಅರಿತ ರಾಘು ಮರಳಿ ಯತ್ನವ ಮಾಡದೇ ತಮ್ಮ ಬ್ಯಾನರಿನ ಕೆಲಸ ಮತ್ತು ಮನೆಯ ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಂಡು ಸುಮ್ಮನಾಗಿದ್ದರು.

ಈಗ ರವಿ ಶ್ರೀವತ್ಸ ಎಂಬವ ಮುಂದೆ ಬಂದು 'ಓಂ' ಎಂಬ ಚಿತ್ರದ ಮೂಲಕ ಅದೆಂತಹದ್ದೋ ಮ್ಯಾಜಿಕ್ ಮಾಡುತ್ತೇನೆ ಎನ್ನುತ್ತಿದ್ದಾನೆ. ಅದೂ ತುಂಬಾ ದೊಡ್ಡದಾದ ಜಾದೂ ಆಗಿದ್ದರೆ ಮಾತ್ರ ರಾಘಣ್ಣ ಗೆಲ್ಲಬಹುದಷ್ಟೇ!

ಇನ್ನು ತಂದೆಯ ನಾಮಬಲದಿಂದ ಒಂದು ಕೈ ನೋಡಬಾರದೇಕೆ ಎಂದು ಎಂಟ್ರಿ ಮಾಡಿದವರಲ್ಲಿ ಟೈಗರ್ ಪ್ರಭಾಕರ್ ಮಗ ವಿನೋದ್ ಮತ್ತು ಮದನ್‌ಮಲ್ಲು ಮಗ ಮಯೂರ್ ಸೇರುತ್ತಾರೆ. ಆದರೆ ಪ್ರೇಕ್ಷಕ ಮಾತ್ರ, ದಯವಿಟ್ಟು ಮತ್ತೆ ಟ್ರೈ ಮಾಡಬೇಡಿ ಎಂದು ಇವರಿಬ್ಬರನ್ನು ಅಂಗಲಾಚುತ್ತಿರುವಂತಿದೆ!

ಇವರೆಲ್ಲರ ಮಧ್ಯೆ ನಿಜವಾದ ಪ್ರತಿಭೆ ಮತ್ತು 'ಲುಕ್ಸ್' ನೊಂದಿಗೆ ಅವಕಾಶಗಳನ್ನೂ ಪಡೆದದ್ದು ಶಿವಧ್ವಜ್ ಎಂಬ ನಟ. ನಾಗಾಭರಣರ 'ನೀಲಾ' ದಂತಹ ಕಲಾತ್ಮಕ ಚಿತ್ರದಿಂದ ರವಿ ಗರಣಿಯ 'ಶುಭಂ' ತನಕ ಈತನಿಗೆ ದೊರಕಿದ್ದು ವಿಭಿನ್ನ ಪಾತ್ರಗಳೇ. ಪ್ರೇಮಾ ನಾಯಕಿಯಾಗಿ ಮಿಂಚುತ್ತಿದ್ದ ಸಂದರ್ಭದಲ್ಲೂ ಆಕೆಯೊಂದಿಗೆ ನಟಿಸುವ ಅವಕಾಶವೂ ಈತನಿಗೆ ಲಭಿಸಿತ್ತು, ಆದರೂ ಯಾವುದೂ ಬರಕತ್ತಾಗಲಿಲ್ಲ.

ಕೆಲವರ್ಷಗಳ ಹಿಂದೆ ಅಮೂಲ್‌ಬೇಬಿಯಂತಿದ್ದ ನವೀನ್ ಮಯೂರ್ ಎಂಬ ಹುಡುಗ ಇದ್ದದ್ದು ನೆನಪಿದೆಯೇ? ಈತ ನಟಿಸಿದ್ದ ಹಲವಾರು ಸಿನಿಮಾಗಳು ಒಂದೇ ಸಮನೆ ನೆಲಕಚ್ಚಲಾರಂಭಿಸಿದ್ದರಿಂದ ಸೋಲೆಂಬ ಭೂತಕ್ಕೆ ಹೆದರಿ ಆತ ಚಿತ್ರರಂಗವನ್ನೇ ಬಿಟ್ಟು ಯಾವುದೋ ಸಾಫ್ಟ್‌ವೇರ್ ಕಂಪೆನಿಯಲ್ಲಿ ಉದ್ಯೋಗಕ್ಕೆ ಸೇರಿಕೊಂಡ.

ಈ ಎಲ್ಲ ನಾಯಕನಟರು ನಿರಂತರವಾದ ಸೋಲಿನ ಸರಪಳಿಯಲ್ಲಿ ಸಿಲುಕಿ ಒದ್ದಾಡಲು ಅವರಿಗೆ ಸರಿಯಾದ ಅವಕಾಶಗಳು ಸಿಗಲಿಲ್ಲವಾ? ಅಥವಾ ಸಿಕ್ಕ ಅವಕಾಶಗಳನ್ನು ಅವರೇ ಸರಿಯಾಗಿ ಬಳಸಿಕೊಳ್ಳಲಿಲ್ಲವಾ?

ಅಥವಾ ಸಿನಿಮಾ ಎಂಬ ಮಾಯಾಲೋಕದಲ್ಲಿ ನಡೆಯುವ ಮಾಯೆ ಇದಾ? ಉತ್ತರ ಬಲ್ಲವರಿಲ್ಲ!


■ ಅರುಣ್.ಜಿ

'ಜೋಗಿ'ಯ ಸ್ನೇಹ 'ಪ್ರೀತಿ'ಯಲ್ಲಿ ಅಂತ್ಯ?



'ಪ್ರೀತಿ ಏಕೆ ಭೂಮಿ ಮೇಲಿದೆ' ಸಿನಿಮಾ ನಿರೀಕ್ಷೆಯಂತೆ ನೆಲ ಕಚ್ಚಿದರೆ ಅಶ್ವಿನಿ ರಾಂಪ್ರಸಾದ್-ಪ್ರೇಂ ಸಂಬಂಧ ಮುರಿದು ಬೀಳುತ್ತಾ? ರಾಂಪ್ರಸಾದ್ ಚಿತ್ರರಂಗದಿಂದಲೇ ದೂರವಾಗುತ್ತಾರಾ? ಎಂಬ ಗುಸುಗುಸು ಗಾಂಧಿನಗರದಲ್ಲಿ ಕೇಳಿಬರುತ್ತಿದೆ.

'ಜೋಗಿ'ಯಿಂದ ಆರಂಭವಾದ ಇವರಿಬ್ಬರ ಸ್ನೇಹ 'ಪ್ರೀತಿ'ಯಿಂದ ದೂರವಾಗುವ ಸಾಧ್ಯತೆಗಳು ಕಾಣಿಸುತ್ತಿವೆ. ಈ ಚಿತ್ರ ಶುರುವಾದಾಗಿನಿಂದಲೂ ಒಳಗೊಳಗೇ ನಡೆಯುತ್ತಿರುವ ಇವರಿಬ್ಬರ ನಡುವಿನ ಶೀತಲ ಸಮರ ಈಗ ಕಾವೇರಿದೆಯಂತೆ. ಈ ಬಗ್ಗೆ ಪ್ರೇಮ್‌ನನ್ನು ಕೇಳಿದರೆ ಬೇರೆ ವಿಚಾರವನ್ನು ಮಾತನಾಡುತ್ತಾ ಮಾತು ಮರೆಸುತ್ತಾರೆ. ರಾಂಪ್ರಸಾದ್ ಕೂಡಾ ಈ ಸಿನಿಮಾದಿಂದ ಬಸವಳಿದವರಂತೆ ಕಾಣುತ್ತಿದ್ದಾರೆ.



ಹಂಸ್ ನಿಗೂಢ ಮೌನ!

ಇತ್ತೀಚಿಗೆ ಹಂಸಲೇಖಾ ಪತ್ರಿಕಾಗೋಷ್ಠಿಗಳಲ್ಲಿ ಏನಾದರೊಂದು ಮಾತನಾಡಿ ಸದ್ದು ಮಾಡುತ್ತಿರುತ್ತಾರೆ. ಮೊನ್ನೆ ಹಂಸ್ ನಿಗೂಢ ಮೌನ! 'ಯುಗಯುಗಗಳು' ಚಿತ್ರದ ಕ್ಯಾಸೆಟ್ ರಿಲೀಸ್ ಸಮಾರಂಭದಲ್ಲೂ ಅದೇನೇನೋ ಮಾತನಾಡಿದರು. "ನನ್ನ ಮನೆಯ ಸುತ್ತ ಈಗ ಹೊಸ ನಾಯಕ ನಟರುಗಳೇ ಸುತ್ತಾಡುತ್ತಿದ್ದಾರೆ. ನನಗೀಗ ದೊಡ್ಡವರ ಕಾಟ ಇಲ್ಲ" ಎಂದು ಹೇಳಿ ಸುಮ್ಮನೆ ಮುಗುಳ್ನಕ್ಕರು.

ಆ ಮುಗುಳ್ನಗುವಿನ ಹಿಂದಿನ ಉದ್ದೇಶ ಯಾರಿಗೂ ಅರ್ಥವಾಗಲಿಲ್ಲ. ಹಂಸಲೇಖರ ದುರಂತಕ್ಕೆ ಅದನ್ನು ಅರ್ಥಮಾಡಿಕೊಳ್ಳುವ ಗೋಜಿಗೆ ಯಾರೂ ಹೋಗಲಿಲ್ಲ!

ಅಂದಹಾಗೆ ಈ ಹಂಸಲೇಖರ ಸಂಗೀತ ಸೃಷ್ಟಿಯಲ್ಲೂ ಇತ್ತೀಚೆಗೆ ಒಂದು ತರ್ಕ ಕಂಡುಬರುತ್ತಿಲ್ಲ. ಅವರ ಸಂಗೀತ ನಿರ್ದೇಶನದ 'ನೆನಪಿರಲಿ' ಚಿತ್ರ ಸೂಪರ್‌ಹಿಟ್ ಆದನಂತರ ಅವರಿಗೆ ಗಾಂಧಿನಗರದಲ್ಲಿ ಮತ್ತೆ ಏಕ್‌ದಂ ಬೇಡಿಕೆ ಬಂದಿತ್ತು. ಆದರೆ ಅದೇ 'ನೆನಪಿರಲಿ' ಖ್ಯಾತಿಯ ಪ್ರೇಮ್ ನಿರ್ದೇಶನದ ಮತ್ತೊಂದು ಚಿತ್ರವಾದ 'ಗುಣವಂತ' ಬಾಕ್ಸಾಫೀಸಿನಲ್ಲಿ ಮಕಾಡೆ ಮಲಗಿದ್ದು ಮಾತ್ರವಲ್ಲ ಪ್ರೇಮ್‌ನ ಮಾರುಕಟ್ಟೆಯನ್ನು ಒಮ್ಮೆಲೇ ಪಾತಾಳಕ್ಕೆ ಇಳಿಸಿತ್ತು.

ವಿಚಿತ್ರವೆಂದರೆ ಹೊಸಬರ ಚಿತ್ರಕ್ಕೆ ಚೆನ್ನಾಗಿರುವ ಸಂಗೀತ ನೀಡುತ್ತಾ ಅವರ ಯಶಸ್ಸಿಗೆ ಕಾರಣವಾಗಿದ್ದೇನೆ ಎಂದು ನಂಬಿಕೊಂಡಿರುವ ಹಂಸ್, ಹೊಸಬರೇ ತುಂಬಿರುವ 'ಯುಗಯುಗಗಳು' ಚಿತ್ರಕ್ಕೆ ಎಂತಹ ನೀರಸ ಸಂಗೀತ ನೀಡಿದ್ದಾರೆಂದರೆ ಅದನ್ನು ಕೇಳಿಸಿಕೊಂಡವರಲ್ಲಿ ಅಚ್ಚರಿ ಹುಟ್ಟಿಸುತ್ತೆ. ಇನ್ನೂ ಹೆಚ್ಚು ಅಚ್ಚರಿ ಹುಟ್ಟಿಸುವ ಸಂಗತಿ ಯಾವುದೆಂದರೆ ಶಿವರಾಜ್ ಕುಮಾರ್ ನಟಿಸುರುವ 'ಬಂಧು ಬಳಗ' ಚಿತ್ರಕ್ಕೆ ತುಂಬಾ ಚೆನ್ನಾಗಿರುವ ಸಂಗೀತವನ್ನು ಹಂಸಲೇಖ ನೀಡಿದ್ದಾರೆ ಎಂಬ ಸುದ್ದಿ ಗಾಂಧಿನಗರದಿಂದ ಕೇಳಿಬರುತ್ತಿದೆ.

ಅದೇನೇ ಇರಲಿ, ಹೀಗೆ ನೀರಸ ಮತ್ತು ಅದ್ಭುತ ಸಂಗೀತವನ್ನು ರಚಿಸುವ ಹಂಸ್ ಅದೇಕೆ ಸಮಾರಂಭಗಳಲ್ಲಿ ಮಾತು, ತಾಳ, ತಲೆ ಇಲ್ಲದೆ ಮಾತನಾಡುತ್ತಾರೆ ಎಂಬುದು ಸಸ್ಪೆನ್ಸ್ ಆಗಿದೆ!

R B P LANKESH, Kannada Weekly Price Rs. 10/- 9-1-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4







'ಅವ್ವ' ಚಿತ್ರಕ್ಕೆ 'A' ಸರ್ಟಿಫಿಕೇಟ್!

ಪಿ. ಲಂಕೇಶರ 'ಮುಸ್ಸಂಜೆಯ ಕಥಾ ಪ್ರಸಂಗ' ಕಾದಂಬರಿಯನ್ನಾಧರಿಸಿ ಅವರ ಪುತ್ರಿ ಕವಿತಾ ಲಂಕೇಶ್ ನಿರ್ದೇಶಿಸಿರುವ 'ಅವ್ವ' ಚಿತ್ರಕ್ಕೆ ಸೆನ್ಸಾರ್ ಮಂಡಳಿ 'ಎ' ಸರ್ಟಿಫಿಕೇಟ್ ನೀಡಿದೆ. ಯಾಕಪ್ಪಾ ಹೀಗೆ, ಅದರಲ್ಲಿ ಅಂತಹದ್ದೇನಿದೆ ಅಂತ ನೋಡಿದರೆ ಹೊನ್ನಾಳಿ ಸೀಮೆಯ ಜನ ಪ್ರತಿನಿತ್ಯ ಸಹಜವಾಗಿಯೇ ಬಳಸುವ 'ಹಳ್ಳಿ ಭಾಷೆ'ಯನ್ನೇ ಇದರಲ್ಲೂ ಉಪಯೋಗಿಸಿರುವುದರಿಂದ ಚಿತ್ರಕ್ಕೆ 'ಎ' ಸರ್ಟಿಫಿಕೇಟ್ ನೀಡಿದ್ದಾರಂತೆ. ಅದರಲ್ಲೂ ಬಡ್ಡಿ ರಂಗವ್ವ (ಶ್ರುತಿ) ಬಾಯಿ ತೆರೆದರೆ ಸಾಕು 'ಮುಂಡೆ ಗಂಡ' ಅನ್ನುವುದು, ಮೆಷೀನ್ ಭರ್ಮಣ್ಣ (ರಂಗಾಯಣ ರಘು) ಮಾತು ಮಾತಿಗೆ 'ಹಾದರಗಿತ್ತಿ' ಅನ್ನುವುದು, ಇವೆಲ್ಲ ಸೆನ್ಸಾರ್ ಮಂಡಳಿಗೆ 'ಅಶ್ಲೀಲ ಭಾಷೆ' ತರಹ ಕಂಡಿದೆ. ಇದೆಲ್ಲದರೊಂದಿಗೆ ಇಷ್ಟು ದಿನ ಹೊಡಿಬಡಿ ದೃಶ್ಯಗಳಲ್ಲೇ ಕಾಣಿಸುತ್ತಿದ್ದ ವಿಜಯ್ 'ಅವ್ವ'ದಲ್ಲಿ ಬಿಸಿಬಿಸಿ ದೃಶ್ಯಗಳಲ್ಲಿ ನಟಿಸಿರುವುದೂ 'ಎ' ಎನ್ನುವಂತಾಗಿದೆ!

ಈ ಸರ್ಟಿಫಿಕೇಟಿನಿಂದ ಕವಿತಾ ಬೇಸರಗೊಂಡಿಲ್ಲ. "ಶ್ರುತಿಯವರಿಗೆ ಅವರದ್ದೇ ಆದ ಅಭಿಮಾನಿ ವಲಯ ಇದೆ, ಹಾಗೆಯೇ ವಿಜಯ್‌ಗೂ ಯುವ ಅಭಿಮಾನಿಗಳ ಬಳಗವಿದೆ. ಅಪ್ಪನ ಅಭಿಮಾನಿಗಳಂತೂ 'ಅವ್ವ' ಬಗ್ಗೆ ಕುತೂಹಲಗೊಂಡಿದ್ದಾರೆ. ಇದೆಲ್ಲದರೊಂದಿಗೆ ನನ್ನ ನಿರ್ದೇಶನದ ಚಿತ್ರಗಳನ್ನು ಇಷ್ಟ ಪಡುವ ಮತ್ತೊಂದು ವರ್ಗವಿದೆ. ನಾನೇನು ಅಶ್ಲೀಲ ಚಿತ್ರವನ್ನು ನಿರ್ದೇಶಿಸಿಲ್ಲ, ಅಪ್ಪನ ಕಾದಂಬರಿಗೆ ನಿಷ್ಠಳಾಗಿ ಕೆಲಸ ಮಾಡಿದ್ದೇನೆ. ಗ್ರಾಮೀಣ ಸೊಗಡನ್ನು ಅದರ ಭಾಷೆಯ ಸಮೇತ ತಂದಿದ್ದೇನೆ. ಒಂದು ಉತ್ತಮ ಚಿತ್ರ ಮಾಡಿದ್ದೇನೆಂಬ ನೆಮ್ಮದಿ ಇದೆ. ಇದು ಇಲ್ಲಿಯ ಪ್ರೇಕ್ಷಕರಿಗೂ ಇಷ್ಟವಾಗಬೇಕು, ವಿದೇಶಗಳಲ್ಲಿನ ಚಿತ್ರೋತ್ಸವಗಳಲ್ಲೂ ಸಲ್ಲ ಬೇಕು, ಹಾಗೆ ಇದನ್ನು ರೂಪಿಸಿದ್ದೇನೆ.



ಇಲ್ಲಿಯವರೆಗೆ ಈ ಚಿತ್ರವನ್ನು ನೋಡಿರುವ ತಂತ್ರಜ್ಞರು, ಸೆನ್ಸಾರ್ ಮಂಡಳಿಯ ಸದಸ್ಯರು ಇದನ್ನು ಇಷ್ಟ ಪಟ್ಟಿದ್ದಾರಲ್ಲದೇ ಎಲ್ಲರೂ ನಕ್ಕು ನಕ್ಕು ಸುಸ್ತಾಗಿದ್ದಾರೆ. ನಿಜವಾದ 'ಎ' ಸರ್ಟಿಫಿಕೇಟ್ ಸಿನಿಮಾ ನಗಿಸುತ್ತದೆಯಾ? ಅಥವಾ ನಾನು ಎಂದಾದರೂ ಅಶ್ಲೀಲ ಚಿತ್ರ ಮಾಡುತ್ತೇನೆಯೇ? ಅದು ಕನ್ನಡ ಪ್ರೇಕ್ಷಕರಿಗೆ ಗೊತ್ತಿರುವುದರಿಂದ ಈ ಸರ್ಟಿಫಿಕೇಟ್‌ನಿಂದ ಬಾಕ್ಸ್ ಆಫೀಸಿನಲ್ಲಿ ಯಾವ ಸಮಸ್ಯೆಯೂ ಆಗುವುದಿಲ್ಲ ಎಂದು ನಂಬಿದ್ದೇನೆ" ಎನ್ನುತ್ತಾರೆ ಕವಿತಾ.

ಅಂದಹಾಗೆ "ನಿಮ್ಮ ಚಿತ್ರಕ್ಕೆ ನೀಡಲಾಗಿರುವ 'ಎ' ಸರ್ಟಿಫಿಕೇಟನ್ನು 'ಎ ಈಸ್ ಫಾರ್ ಆರ್ಟ್' ಸಿನಿಮಾ ಎಂದುಕೊಳ್ಳಬಹುದಾ?" ಎಂದು ತುಂಟತನದ ಪ್ರಶ್ನೆ ಕೇಳಿದರೆ, "ಇಲ್ಲ ನಾನೆಂದೂ ಆರ್ಟ್ ಅಥವಾ ಕಮರ್ಷಿಯಲ್ ಎಂಬ ಲೇಬಲ್‌ಗಳನ್ನು ನಂಬಿದವಳಲ್ಲ, ಆದ್ದರಿಂದ ಇದನ್ನು ಒಂದು 'ಎ ಕ್ಲಾಸ್ ಸಿನಿಮಾ' ಎಂದು ಭಾವಿಸಿದರೆ ನನ್ನ ಅಭ್ಯಂತರವಿಲ್ಲ" ಎಂದು ನಗುತ್ತಾರೆ!

'ಅವ್ವ' ತನ್ನ ಎಲ್ಲ ಗಟ್ಟಿತನ, ರೋಮಾನ್ಸ್, ಜಗಳ, ಜಂಜಾಟ, ಹಾಸ್ಯದೊಂದಿಗೆ ಜನವರಿ ಕೊನೆ ವಾರದಲ್ಲಿ ಬಿಡುಗಡೆಯಾಗಲಿದ್ದಾಳೆ ಅಂತಾರೆ ಕವಿತಾ ಲಂಕೇಶ್.

'ಅವ್ವ' ಚಿತ್ರದಲ್ಲಿ ವಿಜಯ್ ಸ್ಮಿತಾ



ಪ್ರೇಮ್‌ಗೆ ಪುನೀತ್ ನೀಡಿದ ಶಾಕ್



'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರಕ್ಕೆ ಪ್ರೇಕ್ಷಕರಿ ದೊರೆತ ನಿರುತ್ಸಾಹವನ್ನು ಜೀರ್ಣಿಸಿಕೊಳ್ಳುವ ಮೊದಲೇ ನಿರ್ದೇ ಪ್ರೇಮ್‌ಗೆ ಇನ್ನೊಂದು ಶಾಕ್ ಆಗಿದೆ.


ಅದೇನೆಂದರೆ ಪ್ರೇಮ್ ನಿರ್ದೇಶಿಸಬೇಕಾಗಿದ್ದ ಪುನಿ ರಾಜ್‌ಕುಮಾರ್ ನಟನೆಯ 'ಪೋಲಿ' ಚಿತ್ರ ಆರಂಭವಾಗುವ ಈಗ ತೂಗುಯ್ಯಾಲೆಯಲ್ಲಿದೆ. ಇದಕ್ಕೆ ಮುಖ್ಯ ಕಾರಣ ಪುನಿ ಕೈಗೊಂಡ ನಿಲುವು. "ನೀವು ಸಂಪೂರ್ಣವಾದ ಕಥೆ, ಚಿತ್ರ ಮತ್ತು ಸಂಭಾಷಣೆಯನ್ನು ಹೇಳಿದ ನಂತರವೇ ನಾನು ಕಾಲ್‌ಶಿ ನೀಡುತ್ತೇನೆ; ಇದು ನಾನು ಪಾಲಿಸಿಕೊಂಡು ಬಂದ ಒ ಪದ್ಧತಿ" ಎಂದು ಪುನೀತ್ ಹೇಳಿದ್ದಾರಂತೆ.

ಪುನೀತ್‌ರ ಈ ನಿಲುವಿನಿಂದಾಗಿ ಪ್ರೇಮ್ ಕಕ್ಕಾಬಿಕ್ಕಿಯಾ ದ್ದಾರೆ. ಸಾಧಾರಣವಾಗಿ ಚಿತ್ರ ಆರಂಭವಾದ ನಂತರ ಕಥೆ ಚಿತ್ರ ಯನ್ನು ಬೆಳೆಸಿಕೊಂಡು ಹೋಗುವ ಪ್ರೇಮ್ ಪಾಲಿಗೆ ನುಂಗಲಾರದ ತುತ್ತಾಗಿದೆ. ಹೀಗಾಗಿ ಈಗ ಪ್ರೇಮ್ ಸಂಪೂರ್ಣ ಕಥೆ ಮತ್ತು ಚಿತ್ರಕಥೆಗಾಗಿ ತನ್ನನ್ನು ತಾನು ತೊಡಗಿಸಿಕೊಳ್ಳಬೇಕಾ

ಪುನೀತ್ ತರಹ ಇತರೆ ನಾಯಕ ನಟರು ಕೂಡ ಇಂ ದಿಟ್ಟ ನಿಲುವನ್ನು ಕೈಗೊಂಡರೆ ಚಿತ್ರವೂ ಉಳಿಯುತ್ತೆ, ಚಿ ನಿರ್ಮಾಪಕನೂ ಉಳಿಯುತ್ತಾನೆ, ಆ ಮೂಲಕ ಕನ್ನಡ ಚಿತ್ರ ಕೂಡ. ಆದರೆ ಇತ್ತೀಚಿಗೆ ಹೀರೋಗಳ ಡೇಟ್ ಸಿಕ್ಕಿದರೆ ಸ ಅದೆಂತಹದ್ದೊ ಕತೆಯನ್ನು ಸಿದ್ಧಪಡಿಸಿ ರಾತ್ರೋರಾತ್ರಿ ಚಿತ್ರ ಆರಂಭಿಸುವ ಒಂದು ಕೆಟ್ಟ ಚಾಳಿ ಕನ್ನಡ ಚಿತ್ರರಂಗ ಪ್ರಾರಂಭವಾಗಿದೆ.

ಈ ಚಾಳಿ ನಿಲ್ಲದ ಹೊರತು ನಮ್ಮ ಚಿತ್ರರಂಗಕ್ಕೆ ಭವಿಷ್ಯವಿ

ಹೊಸ ಅವತಾ



ಹಾಡುವ ಸ್ವಾಮಿ ಎಂದೇ ಖ್ಯಾತಿ ಗಳಿಸಿದ್ದ ವಿದ್ಯಾಭೂಷಣ ಸ್ವಾಮೀಜಿಗಳು ಕೆ ವರ್ಷಗಳ ಹಿಂದೆ ಸನ್ಯಾಸತ್ವಕ್ಕೆ ಗುಡ್‌ಬೈ ಹೇಳಿ ಫುಲ್ ಫ್ಯಾಮಿಲಿ ಲೈಫ್‌ಗೂ, ಸಂಗೀತ ಲೋಕಕ್ಕೂ ಬಂದಿದ್ದು ಎಲ್ಲರಿಗೂ ಗೊತ್ತಿದೆ.

ಈಗ ಅವರ ಪತ್ನಿ ರಮಾ ವಿದ್ಯಾಭೂಷಣ ಇನ್ನೊಂದ ಹೆಜ್ಜೆ ಮುಂದಕ್ಕೆ ಹೋಗಿ ತಮ್ಮ ಮುಖಕ್ಕೆ ಬಣ್ಣ ಹಚ್ಚಿಕೊಂಡು ಸಿನಿಮಾದಲ್ಲಿ ನಟಿಸಲು ಮುಂದಾಗಿದ್ದಾರೆ. ಕೃಷ್ಣಮೂರ್ತಿ ನಾಡಿಗ್ ನಿರ್ದೇಶನದ 'ಕರೆಯೆ ಕೋಗಿಲೆ ಮಾಧವನ' ಚಿತ್ರದಲ್ಲಿ ಆಕೆ ಪ್ರಮುಖ ಪಾತ್ರವನ್ನು ನಿರ್ವಹಿಸಲಿರುವುದು ಖಚಿತವಾಗಿದೆ.

ತಮ್ಮ ಪತ್ನಿಯ ಹೊಸ ಅವತಾರದ ಬಗ್ಗೆ ಹಾಡುವ ಸ್ವಾಮಿಗಳು ಏನೆನ್ನುತ್ತಾರೆ?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-